ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು - ೧೨೨

## ಪಟ್ಟಿ - ೦೮

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತ ನಾಲ್ಕನೇ ಅಧಿವೇಶನ

ಬುಧವಾರ, ದಿನಾಂಕ : ೧೮ನೇ ಡಿಸೆಂಬರ್, ೨೦೨೪

---

## ಸಮೂಹ - III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಮಳೆಯಿಂದಾಗಿ ಹಾಳಾಗಿರುವ ರಸ್ತೆ ಕಾಮಗಾರಿಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೮೯೨ (೧೦೨೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಳೆದ ಎರಡು. ವರ್ಷಗಳಲ್ಲಿ ಭಾರೀ ಮಳೆಯಿಂದ ರಸ್ತೆಗಳು ಹಾಳಾಗಿದ್ದು. ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಬಂದಿದ್ದಲ್ಲಿ. ಸದರಿ ರಸ್ತೆಗಳ ಕಾಮಗಾರಿ ಕೈಗೊಳ್ಳಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು: ಈ ರಸ್ತೆಗಳ ಕಾಮಗಾರಿ ಕೈಗೊಳ್ಳಲು ಮಂಜೂರು ಮಾಡಿದ ಅನುದಾನವೆಷ್ಟು: (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ದಾವಣಗೆರೆ ಜಿಲ್ಲೆಗಳಲ್ಲಿರುವ ರಸ್ತೆ ಕಾಮಗಾರಿಗೆ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು: ಈ ಅನುದಾನದಲ್ಲಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು; ಅವುಗಳಿಗೆ ತಗುಲಿದ ವೆಚ್ಚವೆಷ್ಟು? (ಕಾಮಗಾರಿವಾರು ಮಾಹಿತಿ ನೀಡುವುದು)

## ಸರ್ಕಾರಿ ಜಾಗವನ್ನು ವಶಪಡಿಸಿಕೊಂಡಿರುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೮೯೩ (೧೦೨೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಗ್ರಾಮಾಂತರ ಹಾರೋಹಳ್ಳಿ ತಾಲ್ಲೂಕು ಬನ್ನಿಕುಪ್ಪೆ ಗ್ರಾಮದ ಸರ್ವೆ ನಂ. ೨೩೪ರಲ್ಲಿ ೨ ಎಕರೆ ಸರ್ಕಾರಿ ಜಾಗವನ್ನು

ಅಕ್ರಮವಾಗಿ ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ಜಾಗವನ್ನು ವಶಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

## ಮುಜರಾಯಿ ಇಲಾಖೆಯ ದೇವಸ್ಥಾನದ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೮೯೪ (೧೦೭೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿ ಕುಡುಗಬಾಳು ಗ್ರಾಮದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನವು ಮುಜರಾಯಿ ಇಲಾಖೆಯ ಸ್ವಾಧೀನದಲ್ಲಿದೆಯೇ;

(ಆ) ಸ್ವಾಧೀನದಲ್ಲಿದ್ದಲ್ಲಿ, ದೇವಸ್ಥಾನದ ಅಧೀನದಲ್ಲಿರುವ ಚರ ಮತ್ತು ಸ್ಥಿರ ಸ್ವತ್ತುಗಳು ಯಾವುವು; ಈ ಸ್ವತ್ತುಗಳು ಎಷ್ಟು ವರ್ಷಗಳಿಂದ ದೇವಸ್ಥಾನದ ಅಧೀನದಲ್ಲಿದೇ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಈ ಸ್ವತ್ತುಗಳು ಒತ್ತುವರಿಯಾಗಿರುವುದು ಅಥವಾ ಅನಧಿಕೃತ ವ್ಯಕ್ತಿಗಳು ಸ್ವಾಧೀನಾನುಭವಕ್ಕೆ ಒಳಪಡಿಸಿಕೊಂಡಿರುವುದು ನಿಜವೇ; ಹಾಗೂ ಒತ್ತುವರಿಗೊಳಪಟ್ಟಿರುವ ಜಮೀನುಗಳು ಏನಾದರೂ ಅಕ್ರಮವಾಗಿ ಮಾರಾಟವಾಗಿದೆಯೇ; ಮಾರಾಟವಾಗಿದ್ದಲ್ಲಿ, ಯಾರ ಹೆಸರಿಗೆ ಮಾರಾಟವಾಗಿದೆ? (ಸಂಪೂರ್ಣವಾದ ದಾಖಲೆ ಸಹಿತ ಮಾಹಿತಿ ನೀಡುವುದು)

## ದಿವ್ಯಾಂಗರಿಗೆ ದ್ವಿಚಕ್ರ/ನಾಲ್ಕು ಚಕ್ರ ವಾಹನಗಳಿಗೆ ನೀಡುತ್ತಿರುವ ಸೌಲಭ್ಯಗಳ ಬಗ್ಗೆ

ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೮೯೫ (೧೧೨೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಾರಿಗೆ ಇಲಾಖೆಯಲ್ಲಿ ಎಷ್ಟು ಅಂಗವಿಕಲ ವ್ಯಕ್ತಿಗಳಿಗೆ (Divyanjan Adapted Vehicle) ದ್ವಿಚಕ್ರ/ನಾಲ್ಕು ಚಕ್ರಗಳ ವಾಹನಗಳು ನೋಂದಣಿಯಾಗಿವೆ; (ವಿವರ ನೀಡುವುದು)

(ಆ) ದ್ವಿಚಕ್ರ/ನಾಲ್ಕು ಚಕ್ರಗಳ ವಾಹನಗಳ ಮಾರಾಟಗಾರರು Adapted Vehicle ನೋಂದಣಿ ಮಾಡಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರದ ಸೂಚನೆಗಳನ್ನು ಎಲ್ಲಾ ವಾಹನಗಳ ಮಾರಾಟಗಾರರ ಮಳಿಗೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಂಡಿದೆಯೇ; ಇಲ್ಲದಿದ್ದಲ್ಲಿ ಎಲ್ಲಾ ಮಾರಾಟ ಮಳಿಗೆಗಳಲ್ಲಿ ಕ್ರಮ ವಹಿಸಲಾಗುತ್ತಿದೆಯೇ; (ವಿವರ ನೀಡುವುದು)

(ಇ) ದಿವ್ಯಾಂಗರು ಖರೀದಿಸುವ ಪೆಟ್ರೋಲ್ ಇಂಜಿನ್ ೦೪ ಚಕ್ರದ ವಾಹನಕ್ಕೆ ೧೨೦೦ ಸಿ.ಸಿ. ಡೀಸೆಲ್, ೧೫೦೦ ಸಿ.ಸಿ. ಸಾಮರ್ಥ್ಯದ ಒಳಗೆ ಇರಬೇಕೆಂಬ ನಿಯಮವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ ಪ್ರತಿ ಒದಗಿಸುವುದು)

(ಈ) ದಿವ್ಯಾಂಗರು ೦೪ ಚಕ್ರದ ಇ.ವಿ. (Electric Vehicle) ಖರೀದಿಸಲು ಇರುವ ಮಾನದಂಡಗಳೇನು; (ವಿವರ ನೀಡುವುದು)

(ಉ) ದಿವ್ಯಾಂಗರು ಖರೀದಿ ಮಾಡುವ ವಾಹನಗಳಿಗೆ ಮೋಟಾರು ಚಾಲಿತ/ಯಾಂತ್ರಿಕ (ಮೆಕ್ಯಾನಿಕಲ್) ವಾಹನಗಳನ್ನು ಮಾರ್ಪಡು

ಮಾಡಿಸಬೇಕೆಂಬ ನಿಯಮದಿಂದ ವಿನಾಯಿತಿ ನೀಡಿರುವುದು ನಿಜವೇ; (ಹಾಗಿದ್ದಲ್ಲಿ ಪ್ರತಿ ಒದಗಿಸುವುದು) ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ದಿವ್ಯಾಂಗರು ವಾಹನವನ್ನು ಮಾರ್ಪಾಡು ಮಾಡಿಸದಿದ್ದರೂ ಸರ್ಕಾರದಿಂದ ಸಹಾಯ ಧನವನ್ನು ನೀಡಲಾಗುತ್ತಿದೆಯೇ ಮತ್ತು ಜಿ.ಎಸ್.ಟಿ.ಯಿಂದ ವಿನಾಯಿತಿ ನೀಡಲಾಗುತ್ತಿದೆಯೇ? (ವಿವರ ಒದಗಿಸುವುದು)

## ಡಿಜಿಟಲ್ ಇಂಡಿಯಾ ಲ್ಯಾಂಡ್ ರೆಕಾರ್ಡ್ ಯೋಜನೆಯ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೮೯೬ (೧೧೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಭೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಕೇಂದ್ರ ಸರ್ಕಾರ ಜಾರಿಗೊಳಿಸಿದ ಡಿಜಿಟಲ್ ಇಂಡಿಯಾ ಲ್ಯಾಂಡ್ ರೆಕಾರ್ಡ್ ಯೋಜನೆ ಜಾರಿಯಲ್ಲಿದೆಯೆ;

(ಆ) ಇದ್ದಲ್ಲಿ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಭೂ ದಾಖಲೆಗಳ ನಿರ್ವಹಣೆಯು ಅತ್ಯಂತ ಅವಶ್ಯವಿರುವುದರಿಂದ ಸರ್ಕಾರಕ್ಕೆ ಈ ಕುರಿತು ಕೈಗೊಂಡ ಕ್ರಮಗಳೇನು;

(ಇ) ಗ್ರಾಮೀಣ ಭಾಗದ ಜನರು ತಮ್ಮ ಪೂರ್ವಜರ ಹೆಸರಿನಲ್ಲಿರುವ ಭೂ ದಾಖಲೆಗಳನ್ನು ಸಂಪನ್ಮೂಲ ಕೊರತೆಯಿಂದ ಅಥವಾ ವಿವಾದಗಳಿಂದ ನೋಂದಣಿ ಮಾಡಿಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ಇಂತಹ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು?

## ಬೆಂಗಳೂರಿನ ವಾಹನ ಸಂಚಾರ ನಿಯಮ ನಿಯಂತ್ರಿಸುವ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೯೭ (೧೧೨೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನಲ್ಲಿರುವ ವಿವಿಧ ಮಾದರಿಯ ವೈಟ್ ಬೋರ್ಡ್ ಯಲ್ಲೋ ಬೋಡ್ ವಾಹನಗಳ ಸಂಖ್ಯೆ ಎಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ಒದಗಿಸುವುದು)

(ಆ) ಸ್ವಂತ ಬಳಕೆಯ ವಾಹನವನ್ನು ನಿಯಂತ್ರಿಸುವ ಸಲುವಾಗಿ ಸಾರ್ವಜನಿಕ ಸಾರಿಗೆ ಸರ್ಕಾರ ಒತ್ತು ನೀಡಿದೆಯೇ;

(ಇ) ವಾಹನಗಳ ಸಂಚಾರದಿಂದಾಗಿ ರಸ್ತೆಗಳು ಅಧಿಕ ಒತ್ತಡವನ್ನು ಎದುರಿಸುತ್ತಿದ್ದು ಸಾರ್ವಜನಿಕರ ಆರೋಗ್ಯ ಮತ್ತು ಸುಗಮ ಸಂಚಾರಕ್ಕೆ ಸರ್ಕಾರ ಹೊಂದಿರುವ ದೂರದೃಷ್ಟಿ ಯೋಜನೆಗಳೇನು?

## ಅನಾವೃಷ್ಟಿಯಿಂದ ಸಂಭವಿಸಿದಂತೆ ಆರ್ಥಿಕ ಪರಿಹಾರ ಒದಗಿಸುವ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೯೮ (೧೧೨೪) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅನಾವೃಷ್ಟಿಯಿಂದ ಸಂಭವಿಸಿದ ಬೆಳೆ ಹಾನಿ, ಪ್ರಾಣ ಹಾನಿ ಮನೆ ಹಾನಿಗಳ ಪ್ರಮಾಣವನ್ನು ಸರ್ಕಾರ ಗುರುತಿಸಿದೆಯೇ;

(ಆ) ಅನಾವೃಷ್ಟಿಯಿಂದ ಸಂಭವಿಸಿದ ಅನಾಹುತಗಳನ್ನು ಏದುರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಬೆಳೆ ಹಾನಿ, ಪ್ರಾಣ ಹಾನಿ ಮತ್ತು ಜನ ಹಾಗೂ ಜಾನುವಾರುಗಳ ಹಾನಿಗೆ ಸಂಬಂಧಿಸಿದಂತೆ ಆರ್ಥಿಕವಾಗಿ ಪರಿಹಾರ ಒದಗಿಸಲಾಗಿದೆಯೇ;

(ಈ) ಈವರೆಗೆ ಎಷ್ಟು ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

## ಮಹಿಳಾ ವಸತಿ ನಿಲಯಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು):-**

೮೯೯ (೧೦೯೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವೃತ್ತಿಪರ ಮಹಿಳೆಯರಿಗೆ ವಸತಿ ನಿಲಯಗಳನ್ನು ನಿರ್ಮಿಸಲಾಗಿದೆಯೇ;

(ಆ) ಹೌದಾದಲ್ಲಿ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ವಸತಿ ನಿಲಯಗಳನ್ನು ನಿರ್ಮಿಸಲಾಗಿದೆ; (ವಿವರ ನೀಡುವುದು)

(ಇ) ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವವರ ಸಂಖ್ಯೆ ಎಷ್ಟು? (ವಿವರ ನೀಡುವುದು)

## ಸ್ಲಂ ಪ್ರದೇಶಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು):-**

೯೦೦ (೧೦೯೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕೊಳಚೆ ಪ್ರದೇಶವೆಂದು ಘೋಷಿಸಲು ಸರ್ಕಾರ ನಿಗದಪಡಿಸಿರುವ ಮಾನದಂಡಗಳೇನು;

(ಇ) ಕೊಳಚೆ ಪ್ರದೇಶವಿದ್ದರು ಸಹ ಕೊಳಚೆ ಪ್ರದೇಶವೆಂದು ಘೋಷಿಸದೆ ಇರುವ ಪ್ರದೇಶಗಳಾವುವು? (ವಿವರ ನೀಡುವುದು)

## ಅಲ್ಪಸಂಖ್ಯಾತ ಸಮುದಾಯದವರುಗಳಿಗೆ ವೃತ್ತಿ ತರಬೇತಿ ನೀಡುವ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು):-**

೬೦೧ (೧೦೯೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಲ್ಪಸಂಖ್ಯಾತರ ಇಲಾಖೆಯಿಂದ ಅಲ್ಪಸಂಖ್ಯಾತರ ಸಮುದಾಯದವರುಗಳಿಗೆ ವೃತ್ತಿ ತರಬೇತಿ ನೀಡುವ ಯೋಜನೆಗಳಾವುವು;

(ಆ) ಇದುವರಿವಿಗೂ ಎಷ್ಟು ಜನ ಸದರಿ ಯೋಜನೆಗಳ ಉಪಯೋಗ ಪಡೆದಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ತರಬೇತಿ ನೀಡುತ್ತಿರುವ ಸಂಸ್ಥೆ/ಏಜೆನ್ಸಿಗಳಾವುವು? (ವಿವರ ನೀಡುವುದು)

# ಬಿ.ಎಂ.ಟಿ.ಸಿ. ಬಸ್ಸುಗಳ ನಿಗದಿತ ಮಾರ್ಗ ಬಿಟ್ಟು ಬೇರೆ ಮಾರ್ಗದಲ್ಲಿ ಸಂಚರಿಸುತ್ತಿರುವ ಬಗ್ಗೆ

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು):-

೯೦೨ (೧೮೯೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹೆಬ್ಬಾಳ ಬಸ್ ನಿಲ್ದಾಣದಿಂದ ಹೊರಡುವ ಬಿಎಂಟಿಸಿ ಬಸ್‌ಗಳು ನಿಗದಿತ ಮಾರ್ಗಗಳನ್ನು ಬಿಟ್ಟು ಸೆಂಟ್ರಲ್ ಎಕ್ಸೆಸ್ ಲೇಔಟ್ ೧ನೇ ಮುಖ್ಯರಸ್ತೆಯ ಜನವಸತಿ ಪ್ರದೇಶದಲ್ಲಿ ಸಂಚರಿಸುತ್ತಿದ್ದು, ಇಲ್ಲಿನ ನಿವಾಸಿಗಳು ಬೆಳಿಗ್ಗೆ ಹಾಗೂ ಸಂಜೆ ಈ ರಸ್ತೆಯಲ್ಲಿ ವಾಕಿಂಗ್ ಮಾಡುವುದರಿಂದ ಅಪಘಾತಗಳು ಸಂಭವಿಸಿ ಸ್ಕಿಪ್ ಆಗಿರುವ ಬಸ್ ನಿಲ್ದಾಣಗಳಲ್ಲಿ ಬಸ್‌ಗಳಿಗಾಗಿ ಕಾಯುವ ಜನರಿಗೂ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಭೂಪಸಂದ್ರ ಬಸ್ ನಿಲ್ದಾಣದಿಂದ ಹೊರಡುವ ಬಿಎಂಟಿಸಿ ಬಸ್‌ಗಳು ನಿಗದಿತ ಮಾರ್ಗಗಳನ್ನು ಬಿಟ್ಟು ಕಲ್ಪನಾ ಚಾವ್ಲಾ ರಸ್ತೆಯ ಜನವಸತಿ ಪ್ರದೇಶಕ್ಕೆ ಪ್ರವೇಶಿಸಿ ನಿವಾಸಿಗಳಿಗೆ ತೊಂದರೆ ಮತ್ತು ಅಪಘಾತಗಳ ಅಪಾಯವನ್ನುಂಟು ಮಾಡುತ್ತಿರುವುದಲ್ಲದೆ, ಸ್ಕಿಪ್ ಆಗಿರುವ ಬಸ್ ನಿಲ್ದಾಣಗಳಲ್ಲಿ ಬಸ್‌ಗಳಿಗಾಗಿ ಕಾಯುವ ಜನರಿಗೂ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಇ) ಪ್ರತಿ ರಾತ್ರಿ ಹೆಬ್ಬಾಳ ಹೊಸ ಪೊಲೀಸ್ ಠಾಣೆ ಎದುರು ಬಿಎಂಟಿಸಿ ಬಸ್‌ಗಳು ಸಂಪೂರ್ಣ ರಸ್ತೆಯನ್ನು ಆಕ್ರಮಿಸಿಕೊಂಡು ಇತರೆ ವಾಹನ ಸವಾರರಿಗೆ ತೊಂದರೆ ನೀಡುತ್ತಿದ್ದು, ಸದರಿ ಬಸ್‌ಗಳನ್ನು ನಿಗದಿತ ಸ್ಥಳಗಳಲ್ಲಿ ನಿಲುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಸಾರಿಗೆ ಸಂಸ್ಥೆಗಳ ನೌಕರರ PF ಮೊತ್ತದ ವಿವರ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):-**

೯೦೩. (೧೦೫೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ವಿವಿಧ ಸಾರಿಗೆ ಸಂಸ್ಥೆಗಳ ನೌಕರರಿಂದ ಮಾಹೆಯಾನ ಸಂಗ್ರಹಿಸಲಾಗುತ್ತಿರುವ PF ಮೊತ್ತದ ಹಣವೆಷ್ಟು; (ಕಳೆದ ಸಾಲಿನಿಂದ ಪ್ರಸ್ತುತವರೆಗೆ ವಿಂಗಡವಾರು ವಿವರ ಒದಗಿಸುವುದು)

(ಆ) ಸದರಿ PF ಮೊತ್ತವನ್ನು PF ಸಂಸ್ಥೆಗೆ ಪ್ರತಿ ಮಾಹೆಯಾನ ಪಾವತಿಸಲಾಗಿದೆಯೇ; (ಮೊತ್ತ ಹಾಗೂ ದಿನಾಂಕದೊಂದಿಗೆ ಪ್ರಸ್ತುತವರೆಗೆ ಮಾಹಿತಿ ಒದಗಿಸುವುದು)

(ಇ) PF ಸಂಸ್ಥೆಗೆ ನೌಕರರ PF ಮೊತ್ತವನ್ನು ಕಟ್ಟುವಲ್ಲಿ ವಿಳಂಬವಾದರೆ ಸದರಿ ಸಂಸ್ಥೆಯು ಸಾರಿಗೆ ಸಂಸ್ಥೆಗಳ ಮೇಲೆ ಹಾಗೂ ನೌಕರರ ಮೇಲೆ ಯಾವ ರೀತಿ ಕ್ರಮಕೈಗೊಳ್ಳುತ್ತಿದೆ; (ವಿವರ ಒದಗಿಸುವುದು)

(ಈ) PF ಮೊತ್ತ ಕಟ್ಟಲು ವಿಳಂಬವಾದಲ್ಲಿ ಸದರಿ ನೌಕರರಿಗೆ ಯಾವ ರೀತಿಯಲ್ಲಿ ನಷ್ಟವಾಗುತ್ತಿದೆ? (ವಿವರ ಒದಗಿಸುವುದು)

## ಗಂಗಾವತಿ ತಾಲ್ಲೂಕಿನ ತೂಗು ಸೇತುವೆಯ ಕಾಮಗಾರಿಯ ದುರಂತದ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-**

೯೦೪. (೧೦೨೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗುಂದಿ-ಹಂಪಿ ಮಧ್ಯದಲ್ಲಿ ಸರ್ಕಾರವು ತೂಗು ಸೇತುವೆಯನ್ನು ನಿರ್ಮಾಣ ಮಾಡಲು ಬಿಡುಗಡೆ ಮಾಡಿದ ಮೊತ್ತವೆಷ್ಟು;

(ಆ) ಈ ಕಾಮಗಾರಿಯನ್ನು ನಿರ್ಮಾಣ ಮಾಡಲು ನೀಡಿರುವ ಕಾಮಗಾರಿಯು ದಿನಾಂಕ: ೨೨.೦೧.೨೦೦೯ರಂದು ಕಾಮಗಾರಿಯ ಹಂತದಲ್ಲಿ ಕುಸಿದು ಬಿದ್ದು, ಇದರಲ್ಲಿ ಎಷ್ಟು ಜನ ಕಾರ್ಮಿಕರು ಮೃತಪಟ್ಟಿರುತ್ತಾರೆ; ಹಾಗೂ ಗಾಯಗೊಂಡಿರುತ್ತಾರೆ;

(ಇ) ಈ ಕಾಮಗಾರಿಯ ಗುತ್ತಿಗೆದಾರರು ಯಾರು; ಸದರಿ ಸೇತುವೆಯ ಕಳಪೆ ಕಾಮಗಾರಿಯಿಂದಾಗಿ ಸೇತುವೆ ಕುಸಿದು ಬಿದ್ದಿರುವುದು ನಿಜವೇ; ಈ ಘಟನೆಯಲ್ಲಿ ಮೃತಪಟ್ಟ ಹಾಗೂ ಗಾಯಗೊಂಡ ಕಾರ್ಮಿಕರಿಗೆ ಯಾವ ರೀತಿಯಲ್ಲಿ ಪರಿಹಾರ ನೀಡಲಾಗಿದೆ; ಇದಕ್ಕೆ ಕಾರಣಕರ್ತರಾದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅನುದಾನ ನೀಡುವ ಕುರಿತು

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-**

೯೦೫ (೧೦೨೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ರಸ್ತೆಗಳು ತುಂಬಾ ಹದಗೆಟ್ಟಿದ್ದು,ಈ ರಸ್ತೆಗಳ ಅಭಿವೃದ್ಧಿಗೆ ೨೦೨೩ ರಿಂದ ೨೦೨೪ರವರೆಗೆ ಎಷ್ಟು ಅನುದಾನವನ್ನು

ನೀಡಲಾಗಿದೆ; (ತಾಲ್ಲೂಕುವಾರು ಕಾಮಗಾರಿಯ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸರ್ಕಾರವು ಪ್ರಸ್ತುತ ಸಾಲಿನಲ್ಲಿ ನೀಡಿರುವ ಅನುದಾನದಲ್ಲಿ ರಾಜ್ಯದಲ್ಲಿ ದುರಸ್ತಿಯಲ್ಲಿರುವ ರಸ್ತೆಗಳನ್ನು ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿ ಮಾಡಲು ಸಾಧ್ಯವಾಗಿಲ್ಲದ ಕಾರಣ ಇನ್ನೂ ಹೆಚ್ಚಿನ ಅನುದಾನವನ್ನು ನೀಡಲು ತೆಗೆದುಕೊಂಡಿರುವ ಕ್ರಮಗಳೇನು?

## ಕಂದಾಯ ಇಲಾಖೆಯಲ್ಲಿ ರೈತರ ಆರ್.ಟಿ.ಸಿ.ಯನ್ನು ವಕ್ಫ್ ಬೋರ್ಡ್ ಹೆಸರಿಗೆ ಬದಲಾವಣೆ ಮಾಡಿರುವ ಕುರಿತು

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-**

೯೦೬ (೧೦೨೭.) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ರೈತರು ಹಾಗೂ ಇನ್ನಿತರೆ ಮಾಲೀಕರ ಹೆಸರಿನಲ್ಲಿ ಬರುತ್ತಿದ್ದ ಪಹಣಿಯನ್ನು (ಆರ್.ಟಿ.ಸಿ.ಯನ್ನು) ಸರ್ಕಾರ ೨೦೨೩ ರಿಂದ ಇಲ್ಲಿಯವರೆಗೆ ಎಷ್ಟು ರೈತರ ಜಮೀನಿನ ಆರ್.ಟಿ.ಸಿ.ಯನ್ನು ವಕ್ಫ್‌ಬೋರ್ಡ್ ಹೆಸರಿಗೆ ಬದಲಾವಣೆ ಮಾಡಲಾಗಿದೆ; (ತಾಲ್ಲೂಕುವಾರು, ಆರ್.ಟಿ.ಸಿ.ದಾರರ ಪೂರ್ಣ ಮಾಹಿತಿ ನೀಡುವುದು)

(ಆ) ರೈತರು ಹಾಗೂ ಇನ್ನಿತರರ ಹೆಸರಿನಲ್ಲಿ ಬರುತ್ತಿದ್ದ ಪಹಣಿ (ಆರ್.ಟಿ.ಸಿ.ಯನ್ನು) ವಕ್ಫ್ ಬೋರ್ಡ್ ಹೆಸರಿಗೆ ಬದಲಾವಣೆ ಮಾಡಲು ಸರ್ಕಾರ ಯಾವ ದಾಖಲೆಗಳ ಆಧಾರದ ಮೇಲೆ ಮತ್ತು ಯಾವ ನಿಯಮದ ಮೇಲೆ ಬದಲಾವಣೆ ಮಾಡಲಾಗಿದೆ;

(ಇ) ಈ ರೀತಿ ವಕ್ಫ್ ಬೋರ್ಡ್ರ್ ಹೆಸರಿಗೆ ಆರ್.ಟಿ.ಸಿ.ಯನ್ನು ಬದಲಾವಣೆ ಮಾಡಿ ನಂತರ ಸರ್ಕಾರ ಈ ಆದೇಶವನ್ನು

ಹಿಂಪಡೆದು ಮೂಲ ಮಾಲೀಕರ ಹೆಸರಿಗೆ ಆರ್.ಟಿ.ಸಿ.ಯನ್ನು ಬದಲಾವಣೆ ಮಾಡಲು ಕ್ರಮ ತೆಗೆದುಕೊಂಡಿದೆಯೇ?

## ವಸತಿ ನಿರ್ಮಾಣ ಕುರಿತು

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-**

೯೦೭ (೧೦೨೮) ಮಾನ್ಯ ವಸತಿ, ವಕ್ಫ್, ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ಬಡ ಜನರಿಗೆ ವಸತಿ ಯೋಜನೆಯಡಿಯಲ್ಲಿ ೨೦೨೩-೨೦೨೪ನೇ ಸಾಲಿನಲ್ಲಿ ಎಷ್ಟು ವಸತಿಗಳನ್ನು ನಿರ್ಮಾಣ ಮಾಡಲು ಎಷ್ಟು ಅನುದಾನವನ್ನು ಒದಗಿಸಲಾಗಿತ್ತು;

(ಆ) ಆ ಪೈಕಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ: (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ನಿರ್ಮಾಣಕ್ಕೆ ಬಾಕಿ ಇರುವ ವಸತಿಗಳನ್ನು ಯಾವ ಕಾಲಮಿತಿಯೊಳಗೆ ನಿರ್ಮಿಸಲು ಉದ್ದೇಶಿಸಲಾಗಿದೆ? (ಕೈಗೊಂಡಿರುವ ಕ್ರಮದ ವಿವರ ನೀಡುವುದು)

## C&D Class Landಗಳ ಕುರಿತು

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-**

೯೦೮ (೧೦೮೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುವ C&D Class Land ಅಂದರೇನು: ಇದನ್ನು ಯಾವ ರೀತಿ ವರ್ಗೀಕರಿಸಲಾಗಿದೆ; (ವಿವರವಾಗಿ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ೧೯೯೧-೯೨ ರವರೆಗೆ ಲಭ್ಯವಿದ್ದ C&D Class Land ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸದರಿ ಭೂಮಿಯಲ್ಲಿ ಎಷ್ಟು ಎಕರೆ ಪ್ರದೇಶವನ್ನು ೧೯೯೧ ರಿಂದ ೧೯೯೩ ರವರೆಗೆ Land Bank/ಇತರೆಗಾಗಿ ಅರಣ್ಯ ಇಲಾಖೆಗೆ ನೀಡಲಾಗಿದೆ: (ಸರ್ಕಾರಿ ಆದೇಶಗಳೊಂದಿಗೆ ತಾಲ್ಲೂಕುವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣ ಒಳಗೊಂಡಂತೆ ಮಾಹಿತಿ ನೀಡುವುದು)

(ಈ) ಈ ಭೂಮಿಯಲ್ಲಿ ಅರಣ್ಯ ಇಲಾಖೆಯು ಯಾವ ಕ್ರಮ ಕೈಗೊಂಡಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಸರ್ವೆ ನಂ. ಮತ್ತು ಗ್ರಾಮಠಾಣಾ ಗಡಿಯನ್ನು ಗುರುತಿಸುವ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-**

೯೦೯ (೧೧೩೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಭೂ ಕಂದಾಯ ಅಧಿನಿಯಮದ ಪ್ರಕಾರ ಸರ್ವೆ ನಂ. ಮತ್ತು ಗ್ರಾಮಠಾಣಾ ಗಡಿಯನ್ನು ಗುರುತಿಸುವ ಜವಾಬ್ದಾರಿ ಯಾವ ಇಲಾಖೆ ಮತ್ತು ಅಧಿಕಾರಿಯ ವ್ಯಾಪ್ತಿಗೆ ಬರುತ್ತದೆ;

(ಆ) ಬೆಂಗಳೂರು ಉತ್ತರ ತಾಲ್ಲೂಕು ಚಿಕ್ಕಬಾಣಾವರ ಪುರಸಭೆಯಿಂದ ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ ೧/೫ ಮತ್ತು ಗ್ರಾಮಠಾಣಾ ಗಡಿಯನ್ನು ಗುರುತಿಸಲು ಸಹಾಯಕ ನಿರ್ದೇಶಕರು ಬೆಂಗಳೂರು ಉತ್ತರ ಇವರಿಗೆ ಯಾವ ದಿನಾಂಕದಂದು ಪುರಸಭೆಯಿಂದ ಪ್ರಸ್ತಾವನೆ ಕಳುಹಿಸಲಾಗಿದೆ (ಪತ್ರದ ಪ್ರತಿಯನ್ನು ನೀಡುವುದು) ಇದು ತಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ತಹಶೀಲ್ದಾರರಿಗೆ ವರ್ಗಾವಣೆ ಮಾಡಲು ಕಾರಣವೇನು;

(ಇ) ಈ ಪ್ರಸ್ತಾವನೆಯನ್ನು ತಹಶೀಲ್ದಾರರು ಹಿಂಬರಹದೊಂದಿಗೆ ಹಿಂತಿರುಗಿಸಲು ಕಾರಣವೇನು; (ಸದರಿ ಪತ್ರದ ಪ್ರತಿಯನ್ನು ನೀಡುವುದು) ಸಹಾಯಕ ನಿರ್ದೇಶಕರಿಗೆ ತಮ್ಮ ಕಾರ್ಯವ್ಯಾಪ್ತಿಯ ಹರಿವು ಇಲ್ಲವೇ ಅಥವಾ ಉದ್ದೇಶ ಪೂರ್ವಕವಾಗಿ ಈ ರೀತಿ ಪತ್ರಗಳನ್ನು ಬರೆದು ಸಾರ್ವಜನಿಕರಿಗೆ ತೊಂದರೆ ನೀಡುತ್ತಾರೆಯೇ; ಈ ರೀತಿ ಬೇಜಾಬ್ದಾರಿಯಿಂದ ವರ್ತಿಸಿದ ಅಧಿಕಾರಿಯ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು;

(ಈ) ಸರ್ವೆ ನಂ ಮತ್ತು ಗ್ರಾಮಠಾಣಾ ಗಡಿಯನ್ನು ಗುರುತಿಸಲು ಅರ್ಜಿದಾರರಿಂದ ಯಾವ ದಿನಾಂಕದಂದು ಶುಲ್ಕವನ್ನು ಪಾವತಿಸಿಕೊಳ್ಳಲಾಯಿತು;

(ಉ) ಒಂದು ಸರ್ಕಾರಿ ಕಾರ್ಯಾಲಯದಿಂದ ಅರ್ಜಿ ಸ್ವೀಕರಿಸಿ/ಅರ್ಜಿ ಶುಲ್ಕವನ್ನು ಪಾವತಿಸಿಕೊಂಡು ಒಂದೂವರೆ ವರ್ಷವೇ ಕಳೆದರೂ ಇಲ್ಲಿಯುವರೆಗೂ ಅಳತೆ ಮಾಡಿ ಗಡಿ ಗುರುತಿಸದಿರಲು ಕಾರಣವೇನು; ಹಣಕ್ಕಾಗಿ ಅನಗತ್ಯ ವಿಳಂಬ ಮಾಡಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವ ಇಂತಹ ಭೂಮಾಪಕರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು;

(ಊ) ಯಾವ ಕಾಲಮಿತಿಯಲ್ಲಿ ಗಡಿಯುನ್ನು ಗುರುತಿಸುವಂತೆ ಆದೇಶಿಸಲಾಗುವುದು?

## ತುಮಕೂರು ಜಿಲ್ಲೆಯಲ್ಲಿ ಪೋಡಿ ದುರಸ್ತಿಯ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-**

೯೧೦ (೧೧೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಮಕೂರು ಜಿಲ್ಲೆಯಲ್ಲಿ ಎಷ್ಟು ರೈತ ಕುಟುಂಬಗಳಿಗೆ ಸರ್ಕಾರದಿಂದ ಭೂಮಿ ಹಂಚಿಕೆಯಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸರ್ಕಾರದಿಂದ ಹಂಚಿಕೆಯಾದ ಭೂಮಿ ಪೋಡಿಯಾಗದ ಪ್ರಕರಣಗಳು ಎಷ್ಟು; ಎಷ್ಟು ಭೂಮಿಗಳು ಇಲ್ಲಿಯವರೆಗೆ ಪೋಡಿಯಾಗಿವೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಜಿಲ್ಲೆಯಲ್ಲಿ ಪೋಡಿ ದುರಸ್ತಿಗಾಗಿ ಕಳೆದ ಎರಡು ವರ್ಷಗಳಲ್ಲಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ದುರಸ್ತಿ ಮಾಡಿದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಈ) ಸರ್ಕಾರದ ವತಿಯಿಂದ ಜಿಲ್ಲೆಯಲ್ಲಿ ಪೋಡಿ ದುರಸ್ತಿ ಅಭಿಯಾನವನ್ನು ಯಾವಾಗ ಪ್ರಾರಂಭಿಸಲಾಗುವುದು; ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು;

(ಉ) ಮಂಜೂರಾದ ಭೂಮಿಯ ದಾಖಲೆಯ ವಿಸ್ತೀರ್ಣ ಮತ್ತು ಅನುಭವದಲ್ಲಿನ ವಿಸ್ತೀರ್ಣಕ್ಕೂ ವ್ಯತ್ಯಾಸವಿದ್ದಲ್ಲಿ ಯಾವ ಅಳತೆಯನ್ನು ಪರಿಗಣಿಸಲಾಗುವುದು;

(ಊ) ಭೂ ಮಂಜೂರಾತಿ ಸಮಯದಲ್ಲಿ ನಕ್ಷೆಯಲ್ಲಿ ತೋರಿಸಿದ ಸ್ಥಳ ಮತ್ತು ಪ್ರಸ್ತುತ ಅನುಭವದಲ್ಲಿನ ಜಮೀನಿನ ಸ್ಥಳದಲ್ಲಿ ವ್ಯತ್ಯಾಸವಿದ್ದಲ್ಲಿ ಯಾವುದನ್ನು ಪರಿಗಣಿಸಲಾಗುವುದು; ಇದರ ಮಾರ್ಗಸೂಚಿಗಳೇನು?

## ಭೂ ಪರಿವರ್ತನೆಯನ್ನು ಸರಳೀಕರಿಸುವ ಕುರಿತು

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-**

೯೧೧ (೧೧೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನಗರ ಪ್ರದೇಶಗಳಲ್ಲಿ ಭೂ ಪರಿವರ್ತನೆಯನ್ನು ಸರಳೀಕರಿಸಲು ರಾಜ್ಯ ಸರ್ಕಾರ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ೨೦೨೩ ರಲ್ಲಿ ತಂದ ತಿದ್ದುಪಡಿಯ ಪ್ರತಿಯನ್ನು ನೀಡುವುದು;

(ಆ) ನಗರ ಪ್ರದೇಶದ ವ್ಯಾಪ್ತಿಯ ಜಮೀನು ಮಾಸ್ಟರ್ ಪ್ಲಾನ್‌ನಲ್ಲಿ ವಸತಿ ಮತ್ತು ಇತರ ಉದ್ದೇಶಕ್ಕೆಂದು ನಮೂದಾಗಿದ್ದರೆ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಯ ಅಗತ್ಯವಿದೆಯೇ; ಇಲ್ಲದಿದ್ದಲ್ಲಿ ನಿಯಮ ಬಾಹಿರವಾಗಿ ಸಾರ್ವಜನಿಕರಿಂದ ಶುಲ್ಕ ಪಡೆದು ಭೂ ಪರಿವರ್ತನೆ ಮಾಡುತ್ತಿರುವ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು;

(ಇ) ಕರ್ನಾಟಕ ಭೂ ಕಂದಾಯ ಕಾಯ್ದೆಗೆ ೨೦೨೩ ರಲ್ಲಿ ತಂದ ತಿದ್ದುಪಡಿಗೆ ರಾಜ್ಯಪಾಲರ ಅಂಕಿತವಾಗಿದೆಯೇ: ಹಾಗಿದ್ದರೆ ಸದರಿ ತಿದ್ದುಪಡಿಯ ಜಾರಿಗೆ ನಿಯಮ ರೂಪಿಸಲಾಗಿದೆಯೇ: ರೂಪಿಸಿದ್ದ ಪ್ರತಿಯನ್ನು ನೀಡುವುದು. ರೂಪಿಸದೇ ಇದ್ದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಇಂತಹ ನಿಯಮ ಜಾರಿಗೆ ಸರ್ಕಾರ ನಿರ್ಲಕ್ಷ್ಯ ವಹಿಸಲು ಕಾರಣಗಳೇನು;

(ಈ) ನಗರ ಪ್ರದೇಶದ ಕೃಷಿ ಭೂಮಿಯು ಕೃಷಿಯೇತರ ಉದ್ದೇಶಗಳಿಗೆ ಬಳಕೆಯಾಗುತ್ತಿರುವ ಜಮೀನಿಗೆ ಸಂಬಂಧಿಸಿದ ಯೋಜನಾ ಪ್ರಾಧಿಕಾರದಿಂದ ಶುಲ್ಕ ಪಾವತಿಸಿಕೊಂಡು ಪರಿವರ್ತನೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ;

(ಉ) ಭೂ ಪರಿವರ್ತನೆಯನ್ನು ಸರಳೀಕರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

## ಮುಜರಾಯಿ ಇಲಾಖೆಯ ದೇವಾಲಯಗಳ ಆದಾಯ ವೆಚ್ಚದ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-**

೯೧೨ (೧೧೩೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಎ-ಗ್ರೇಡ್ ಬಿ-ಗ್ರೇಡ್ ಮತ್ತು ಸಿ-ಗ್ರೇಡ್ ದೇವಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು)

(ಆ) ಕಳೆದ ಐದು ವರ್ಷಗಳಲ್ಲಿ ಸದರಿ ದೇವಾಲಯಗಳ ಹುಂಡಿಗೆ ಬಂದ ಕಾಣಿಕೆ ಹಣವೆಷ್ಟು; ಮತ್ತು ಸದರಿ ಹಣವನ್ನು ಯಾವ ದೇವಾಲಯಕ್ಕೆ ಎಷ್ಟು ವೆಚ್ಚ ಮಾಡಲಾಗಿದೆ; (ವರ್ಷವಾರು, ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಇ) ದೇವಾಲಯಗಳ ಹುಂಡಿಗೆ ಬಂದ ಹಣವನ್ನು ವೆಚ್ಚ ಮಾಡಲು ಇರುವ ಮಾರ್ಗಸೂಚಿಗಳೇನು;

(ಈ) ಮುಜರಾಯಿ ಇಲಾಖೆಯ ದೇವಾಲಯದ ಹಣ ಅನ್ಯ ಧರ್ಮದ ಉದ್ದೇಶಕ್ಕೆ ಬಳಸುವುದಿಲ್ಲ ಎಂದು ಬೋರ್ಡ್ ಹಾಕಲು ಸರ್ಕಾರ ನಿರ್ಧರಿಸಿದೆಯೇ; ನಿರ್ಧರಿಸಿದ್ದರೆ ಹೀಗೆ ಬೋರ್ಡ್ ಹಾಕಲು ಕಾರಣವೇನು;

(ಉ) ರಾಜ್ಯದ ಎಷ್ಟು ದೇವಾಲಯಗಳ ಆಸ್ತಿಗಳ ಒತ್ತುವರಿಯಾಗಿದೆ ಸದರಿ ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

# ನಾಡ ದೇವಿ ಶ್ರೀ ಚಾಮುಂಡೇಶ್ವರಿ ದೇವಿಗೆ ಚಿನ್ನದ ರಥ ನಿರ್ಮಿಸುವ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೬೧೩ (೧೦೮೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ಮೂರು ವರ್ಷಗಳಿಂದ ಶ್ರೀ ಚಾಮುಂಡೇಶ್ವರಿ ದೇವಾಲಯದ ಹುಂಡಿಯಲ್ಲಿ ಸಂಗ್ರಹವಾಗಿರುವ ಮೊತ್ತ ವೆಷ್ಟು; (ವರ್ಷಾವಾರು ವಿವರ ನೀಡುವುದು)

(ಆ) ಸಂಗ್ರಹವಾದ ಹುಂಡಿಯ ಕಾಣಿಕೆಗಳನ್ನು ಯಾವ ಯಾವ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗುತ್ತಿದೆ ಹಾಗೂ ಕಳೆದ ೩ ವರ್ಷಗಳಿಂದ ಹುಂಡಿಯಲ್ಲಿ ವೆಚ್ಚ ಮಾಡದೆ ಉಳಿದಿರುವ ಮೊತ್ತ ವೆಷ್ಟು; (ವರ್ಷವಾರು ವಿವರ ನೀಡುವುದು)

(ಇ) ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಗೆ ಭಕ್ತಾದಿಗಳಿಂದ ಹಾಗೂ ಮುಜರಾಯಿ ಇಲಾಖೆಯಿಂದ ಚಿನ್ನದ ರಥ ನಿರ್ಮಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

(ಈ) ಮಾನ್ಯ ಮುಖ್ಯಮಂತ್ರಿಗಳು ಚಿನ್ನದ ರಥ ನಿರ್ಮಿಸುವ ಸಂಬಂಧ ಪ್ರಸ್ತಾವನೆ ಮಂಡಿಸಲು ಸೂಚಿಸಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪ್ರಸ್ತುತ ಪ್ರಸ್ತಾವನೆಯೂ ಯಾವ ಹಂತದಲ್ಲಿದೆ ಹಾಗೂ ಯಾವ ಕಾಲಮಿತಿಯೊಳಗಾಗಿ ಚಿನ್ನದ ರಥವನ್ನು ನಿರ್ಮಿಸಲಾಗುವುದು;

(ಉ) ಚಾಮುಂಡೇಶ್ವರಿ ದೇವಿಗೆ ಚಿನ್ನದ ರಥ ನಿರ್ಮಿಸಲು ಭಕ್ತಾದಿಗಳಿಂದ ದೇಣಿಗೆ ಸಂಗ್ರಹಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರಗಳನ್ನು ಒದಗಿಸುವುದು)

## ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಡಳಿತದಲ್ಲಿ ಬಾಕಿ ಇರುವ ನ್ಯಾಯಾಲಯದ ಪ್ರಕರಣಗಳ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೧೪ (೧೦೮೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳ, ಉಪ ವಿಭಾಗಧಿಕಾರಿಗಳ ಮತ್ತು ತಹಶೀಲ್ದಾರ್‌ರವರುಗಳ ನ್ಯಾಯಾಲಯಗಳಲ್ಲಿ ಭೂ ಇತ್ಯರ್ಥಕ್ಕೆ ಹಾಗೂ ಇನ್ನಿತರೆ ವ್ಯವಹಾರಗಳಿಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಈ ನ್ಯಾಯಾಲಯಗಳಲ್ಲಿ ಇದುವರೆವಿಗೂ ಇತ್ಯರ್ಥವಾಗಿರುವ ಮತ್ತು ಇತ್ಯರ್ಥವಾಗದೆ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಕಳೆದ ೩ ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗಾಗಿ ಇತ್ಯರ್ಥ ಪಡಿಸಲಾಗುವುದು? (ವಿವರಗಳನ್ನು ನೀಡುವುದು)

## ವಸತಿ ಗೃಹ ಹಂಚಿಕೆ ಬಗ್ಗೆ

**ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೧೫ (೧೧೨೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ವಿವಿಧ ಗೃಹ ಯೋಜನೆಯಡಿಯಲ್ಲಿ ಬೆಂಗಳೂರು ಜಿಲ್ಲೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ಮತ್ತು ಅವುಗಳ ನಿರ್ಮಾಣ ಯಾವ ಹಂತದಲ್ಲಿವೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಗ್ರಾಮ ಪಂಚಾಯಿತಿಗಳಿಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ?

## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಇರುವ ಬಸ್ ಸಂಖ್ಯೆಗಳ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೧೬ (೧೧೨೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಇರುವ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು; (ಡೀಸೆಲ್ ಹಾಗೂ ವಿದ್ಯುತ್ ಚಾಲಿತ ಬಸ್‌ಗಳ ವಿವರ ನೀಡುವುದು)

(ಆ) ಈ ಸಂಸ್ಥೆಯಲ್ಲಿ ಅನುಪಯುಕ್ತಗೊಂಡಿರುವ ಬಸ್ಸುಗಳ ಒಟ್ಟು ಸಂಖ್ಯೆ ಎಷ್ಟು; ಅನುಪಯುಕ್ತಗೊಂಡಿರುವ ಬಸ್‌ಗಳ ವಿಲೇವಾರಿ ಮಾಡಲು ಇಲಾಖೆಯು ಯಾವ ಕ್ರಮಗಳನ್ನು ಕೈಗೊಂಡಿದೆ;

(ಇ) ೨೦೨೪ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಯಿಂದ ಎಷ್ಟು ಹೊಸ ಬಸ್‌ಗಳನ್ನು (ಡೀಸೆಲ್ ಹಾಗೂ ವಿದ್ಯುತ್ ಚಾಲಿತ) ಖರೀದಿಸಲು ಒಪ್ಪಿಗೆ ನೀಡಲಾಗಿದೆ? (ವಿವರ ನೀಡುವುದು)

## ೮ ಗ್ರಾಮಗಳ ಭೂ ದಾಖಲೆಯ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೧೭ (೧೧೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾಗಿ ಸುಮಾರು ೬೮ ವರ್ಷಗಳು ಕಳೆದರೂ ಭೂ ದಾಖಲೆಗಳಿಗಾಗಿ ಇಂದಿಗೂ ತಮಿಳುನಾಡಿನ ಕಂದಾಯ ಕಛೇರಿಗಳಿಗೆ ಅಲಿಯಬೇಕಾದ ಪರಿಸ್ಥಿತಿ ಆನೇಕಲ್ ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿಯ ೮ ಗ್ರಾಮಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

(ಆ) ೮ ಗ್ರಾಮದ ರೈತರು ಕಂದಾಯ ದಾಖಲೆಗಳಿಗಾಗಿ ಚೆನ್ನೈಗೆ ಹೋಗುತ್ತಿರುವುದು ಮತ್ತು ಜಮೀನು ಮಾರಾಟ, ಹಕ್ಕು ಪತ್ರ ಸೇರಿ ಮತ್ತೀತರ ಸಂದರ್ಭಗಳಲ್ಲಿ ದಾಖಲೆಗಳು ಕರ್ನಾಟಕ ಸರ್ಕಾರದಿಂದ ಮಾನ್ಯಗೊಳ್ಳುತ್ತಿಲ್ಲವಾದ ಕಾರಣ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಯಾವ ಕಾಲಮಿತಿಯೊಳಗೆ ಈ ತೊಂದರೆಯನ್ನು ಸರಿಪಡಿಸಿ ಗ್ರಾಮಸ್ಥರಿಗೆ ನೆಮ್ಮದಿಯಿಂದ ಜೀವನ ಸಾಗಿಸಲು ಅನುಕೂಲ ಮಾಡಿಕೊಡುವುದು? (ಸಂಪೂರ್ಣ ವಿವರ ನೀಡುವುದು)

## ಗೃಹ ಮಂಡಳಿಯಿಂದ ಕಾಮಗಾರಿಗಳನ್ನು ಗುತ್ತಿಗೆ ಪಡೆಯುತ್ತಿರುವ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೯೧೮ (೧೦೧೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಗೃಹ ಮಂಡಳಿಯು ಕಳೆದ ೫ ವರ್ಷದಿಂದ ಇಲ್ಲಿಯವರೆಗೂ ಎಷ್ಟು ಇಲಾಖೆಗಳು, ನಗರ ಸಭೆ, ಪುರಸಭೆಗಳಲ್ಲಿ ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳನ್ನು ಮಾಡಲು ಗುತ್ತಿಗೆಯನ್ನು ಪಡೆದುಕೊಳ್ಳಲಾಗಿದೆ; ಪಡೆದಿರುವ ಗುತ್ತಿಗೆಯಲ್ಲಿ ಇದುವರೆಗೂ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ; ಎಷ್ಟು ಬಾಕಿ ಉಳಿದುಕೊಂಡಿದೆ;

(ಆ) ಗೃಹ ಮಂಡಳಿವತಿಯಿಂದ ಕಾಮಗಾರಿಗಳನ್ನು ಸ್ವಂತವಾಗಿ ಮಾಡಲು ಹೊಂದಿರುವ ಮೂಲಸೌಕರ್ಯಗಳೇನು; (ತಾಂತ್ರಿಕ ಸಿಬ್ಬಂದಿ ಮತ್ತು ಯಂತ್ರೋಪಕರಣಗಳ ಮಾಹಿತಿ ಒದಗಿಸುವುದು)

(ಇ) ಸದರಿ ಮಂಡಳಿಯು ಗುತ್ತಿಗೆಯನ್ನು ಪಡೆದನಂತರ ಬೇರೆ ಏಜೆನ್ಸಿಗೆ ಹೊರಗುತ್ತಿಗೆ ನೀಡಿ ಕಾಮಗಾರಿಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಗೃಹ ಮಂಡಳಿಯಿಂದ ಸಾಕಷ್ಟು ಗೃಹಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳು ಬಾಕಿ ಇರುವಾಗ ಬೇರೆ ಬೇರೆ ಕಡೆಗಳಲ್ಲಿ ಕಾಮಗಾರಿಗಳ ಕೆಲಸವನ್ನು ಗುತ್ತಿಗೆ ಪಡೆಯುವುದು ಎಷ್ಟು ಸಮಂಜಸ; ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸುವವರು ಯಾರು?

## KSRTC, BMTC, WKRTC, KKRTC ವಿಭಾಗದ ನೌಕರರ ಭವಿಷ್ಯ ನಿಧಿ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೯೧೯ (೧೦೯೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಲವು ತಿಂಗಳಿಂದ KSRTC, BMTC, WKRTC, KKRTC ವಿಭಾಗದ ನೌಕರರ ಭವಿಷ್ಯ ನಿಧಿ ಮೊತ್ತ ಇಲಾಖೆಯಿಂದ ಪಾವತಿಸದೆ ಬಾಕಿ ಉಳಿಸಿಕೊಂಡಿರುವುದಾಗಿ ಭವಿಷ್ಯ ನಿಧಿ ಆಯುಕ್ತರು ಗಂಭೀರವಾಗಿ ಆಕ್ಷೇಪ ವ್ಯಕ್ತ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

(ಆ) ಇದ್ದಲ್ಲಿ ಪಾವತಿಸದೇ ಇರಲು ಕಾರಣವೇನು ಯಾವಾಗ ಭವಿಷ್ಯ ನಿಧಿ ಪಾವತಿಸಲಾಗುವುದು; ಪಾವತಿಸಬೇಕಾದ ಪ್ರತಿ ವಿಭಾಗದ ಮೊತ್ತವೆಷ್ಟು? (ವಿವರಿಸುವುದು)

## ಮುಜರಾಯಿ ಇಲಾಖೆಯ ದೇವಾಲಯಗಳು ಹೊಂದಿರುವ ಭೂಮಿ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೯೨೦ (೧೧೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮುಜರಾಯಿ ಇಲಾಖೆಯ ದೇವಾಲಯಗಳು ಕರ್ನಾಟಕದಲ್ಲಿ ಹೊಂದಿರುವ ಒಟ್ಟು ಭೂಮಿ (ಚಿರಾಸ್ತಿ) ಎಷ್ಟು; ಎಲ್ಲಾ ದೇವಾಲಯಗಳ ಭೂಮಿ ಮಾಹಿತಿಯೂ ಸರ್ಕಾರದ ಬಳಿ ಇದೆಯೇ; ಇಲ್ಲದಿದ್ದಲ್ಲಿ ಕಾರಣವೇನು;

(ಆ) ದೇವಾಲಯದ ಭೂಮಿಯನ್ನು ಯಾರಿಗೇ ಆಗಲಿ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ ಸರ್ಕಾರ ಈ ಕುರಿತು ಏನು ಕ್ರಮ ಕೈಗೊಳ್ಳುತ್ತಿದೆ; ಎಷ್ಟು ವರ್ಷದ ಹಿಂದೆ ಪರಭಾರೆ ಮಾಡಿದ ದೇವಸ್ಥಾನದ ಭೂಮಿಯನ್ನು ಸರ್ಕಾರ ಮರಳಿ ಪಡೆಯಲಿದೆ;

(ಇ) ಪರಭಾರೆ ಮಾಡಿದ ಭೂಮಿ ಈಗಾಗಲೇ ಬೇರೆಯವರಿಗೆ ಮಾರಾಟವಾಗಿದ್ದರೆ ಅದನ್ನು ಸರ್ಕಾರ ಹೇಗೆ ವಶಕ್ಕೆ ಪಡೆಯಲಿದೆ;

(ಈ) ದೇವಸ್ಥಾನದ ಎಲ್ಲಾ ಆಸ್ತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸುವ ಹಾಗೂ ಸಾರ್ವಜನಿಕರ ವೀಕ್ಷಣೆಗೆ ನೀಡುವ ಆಲೋಚನೆಯನ್ನು ಸರ್ಕಾರ ಹೊಂದಿದೆಯೇ; ಇದ್ದರೆ ಅದು ಯಾವ ಹಂತದಲ್ಲಿದೆ; ದತ್ತಾಂಶ ಅಳವಡಿಕೆ ಸಂಪೂರ್ಣವಾಗಿದೆಯೇ? (ಮಾಹಿತಿ ನೀಡುವುದು

## ಮುಜರಾಯಿ ಇಲಾಖೆಯ ಅಧೀನದಲ್ಲಿರುವ ದೇವಾಲಯಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೬೨೧ (೧೧೦೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕದಲ್ಲಿ ಮುಜರಾಯಿ ಇಲಾಖೆ ಅಧೀನದಲ್ಲಿರುವ ಒಟ್ಟು ದೇವಾಲಯುಗಳೆಷ್ಟು; ಅದರಲ್ಲಿ ಎ.ಬಿ.ಸಿ ವರ್ಗದಲ್ಲಿರುವ ದೇವಸ್ಥಾನಗಳ ಒಟ್ಟು ಸಂಖ್ಯೆ ಎಷ್ಟು;

(ಆ) ಕಳೆದ ೧೦ ವರ್ಷಗಳಲ್ಲಿ ಯಾವ್ಯಾವ ದೇವಾಲಯಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ; ಯಾವ್ಯಾವ

ದೇವಾಲಯುಗಳನ್ನು ಸರ್ಕಾರದ ವಶದಿಂದ ಬಿಡುಗಡೆ ಮಾಡಲಾಗಿದೆ;

(ಇ) ಈಗ ಮುಜರಾಯಿ ಇಲಾಖೆ ನಡೆಯುತ್ತಿರುವುದು ಯಾವ ಕಾಯ್ದೆ ಆಧಾರದಲ್ಲಿ; ಈ ಕಾಯ್ದೆಯು ಈಗಾಗಲೆ ಎರಡು ಬಾರಿ ನ್ಯಾಯಾಲಯದಿಂದ ರದ್ದುಮಾಡಲ್ಪಟ್ಟಿದ್ದು ಎನ್ನುವುದು ಸರ್ಕಾರಕ್ಕೆ ತಿಳಿದಿದೆಯೇ; ಹಾಗೆ ರದ್ದಾಗಿದ್ದರೆ ಕಾರಣ ಏನು; ಈ ಕುರಿತು ಪ್ರಕರಣ ನ್ಯಾಯಾಲಯದಲ್ಲಿ ಯಾವ ಹಂತದಲ್ಲಿದೆ;

(ಈ) ಹೊಸ ಕಾಯ್ದೆ ರಚಿಸಲು ಸರ್ಕಾರ ಆಲೋಚನೆ ಮಾಡುತ್ತಿದೆಯೇ; ಹಾಗಿದ್ದರೆ ಯಾವ ಹಂತದಲ್ಲಿದೆ?

## ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೆ ಪರವಾನಿಗೆಯ ಕುರಿತು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):-**

೯೨೨ (೧೦೬೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬ್ಯಾಟರಿ/ವಿದ್ಯುತ್ ಚಾಲಿತ ಆಟೋರಿಕ್ಷಾಗಳ ಪರವಾನಿಗೆ ಇಲ್ಲದೇ ಯಾವುದೇ ಸಾರಿಗೆ ನಿಯಮಗಳ ವಿರುದ್ಧವಾಗಿ ರಾಜ್ಯದ ಯಾವ ಭಾಗದಲ್ಲಿ ಕಾರ್ಯನಿರ್ವಹಿಸಬಹುದೆಂಬ ಕೇಂದ್ರ ಸರ್ಕಾರದ ಆದೇಶ ವಿರುದ್ಧ ಕೈಗೊಂಡಿರುವ ಕ್ರಮವೇನು; (ವಿವರ ನೀಡುವುದು)

(ಅ) ಮೋಟಾರ್ ಕಾಯ್ದೆ ಅನ್ವಯ ಕಾರ್ಯನಿರ್ವಹಿಸುತ್ತಿರುವ ಆಟೋರಿಕ್ಷಾ ಚಾಲಕರಿಗೆ ಒಂದು ನಿಯಮ ಮತ್ತು ಬ್ಯಾಟರಿ ಚಾಲಿತ ರಿಕ್ಷಾಗಳಿಗೆ ಒಂದು ನಿಯಮ ಎಂಬ ೨ ಕಾನೂನುಗಳು ತಾರತಮ್ಯ ಮಾಡಿರುವುದು ಸರಿಯೇ; (ವಿವರ ನೀಡುವುದು)

(ಇ) ಸಾರಿಗೆ ಇಲಾಖೆಯು ಬ್ಯಾಟರಿ ಚಾಲಿತ ವಾಹನಗಳಿಗೆ ತಮಿಳುನಾಡು ಮತ್ತು ದೆಹಲಿ ಮಾದರಿಯಲ್ಲಿ ಆ ರಾಜ್ಯದ ಸಾರಿಗೆ ವ್ಯವಸ್ಥೆ ಅನುಗುಣವಾಗಿ ಕಾನೂನು ರಚಿಸಿದ್ದು; ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು; (ಕೈಗೊಂಡ ಕ್ರಮದ ಬಗ್ಗೆ ವಿವರ ನೀಡುವುದು)

(ಈ) ಸರ್ಕಾರವು ಪೆಟ್ರೋಲ್, ಡಿಸೇಲ್ ಮತ್ತು ಗ್ಯಾಸ್ ಚಾಲಿತ ರಿಕ್ಷಾಗಳಂತೆ ಬ್ಯಾಟರಿ ರಿಕ್ಷಾಗಳಿಗೂ ಸಾರಿಗೆ ನಿಯಮದಡಿ ಪರವಾನಿಗೆ ಕಡ್ಡಾಯಗೊಳಿಸಲು ಕ್ರಮ ಕೈಗೊಂಡಿದೆಯೇ; ಈ ವ್ಯವಸ್ಥೆಯಲ್ಲಿ ಉಂಟಾದ ತಾರತಮ್ಯ ನಿವಾರಿಸಲು ತೆಗೆದುಕೊಳ್ಳುವ ಕ್ರಮವೇನು? (ಈ ಬಗ್ಗೆ ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರದಿಂದ ಮಂಜೂರಾತಿ ಮನೆಗಳ ಕುರಿತು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):–**

೯೨೩ (೧೦೬೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ೧೦ ವರ್ಷಗಳಿಂದ ಯಾವುದೇ ಮನೆಗಳನ್ನು ಮಂಜೂರು ಮಾಡದಿರಲು ಕಾರಣಗಳೇನು; (ವಿವರ ನೀಡುವುದು)

(ಆ) ೨೦೨೧ ರಿಂದ ೨೦೨೪ ರವರೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ವಸತಿ ಇಲಾಖೆಯು ವಿವಿಧ ಯೋಜನೆಗಳ ಅಡಿಯಲ್ಲಿ ಮಂಜೂರು ಮಾಡಿದ ಮನೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಸತಿ ರಹಿತರು ಸಲ್ಲಿಸಿದ ಅರ್ಜಿಗಳು ಎಷ್ಟು; ಈ ಬಗ್ಗೆ ಕೈಗೊಂಡಿರುವ ಕ್ರಮವೇನು? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಜ್ ಭವನ ನಿರ್ಮಾಣ ಮಾಡಿರುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):-**

೬೨೪ (೧೦೬೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಜ್ ಭವನ ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಇದು ಯಾವ ಹಂತದಲ್ಲಿದೇ; (ವಿವರ ನೀಡುವುದು)

(ಆ) ಹಜ್ ಭವನಕ್ಕೆ ಮಂಜೂರು ಮಾಡಲಾದ ಭೂಮಿ ಎಷ್ಟು; ಯಾವ ಹಂತದಲ್ಲಿದೇ; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಿಂದ ಸರ್ಕಾರದ ವತಿಯಿಂದ ಕಳುಹಿಸಲಾಗಿರುವ ಹಜ್ ಯಾತ್ರಿಕರ ಸಂಖ್ಯೆ ಎಷ್ಟು; ಕಳೆದ ೦೩ ವರ್ಷಗಳಿಂದ ಎಷ್ಟು ಹಜ್ ಯಾತ್ರಿಕರಿಗೆ ಸರ್ಕಾರದಿಂದ ಅನುದಾನ ನೀಡಿ ಕಳುಹಿಸಲಾಗಿದೆ? (ವಿವರ ನೀಡುವುದು)

## ಅಲ್ಪಸಂಖ್ಯಾತರ ಇಲಾಖೆಯಲ್ಲಿ ಕಳೆದ ೦೩ ವರ್ಷದಲ್ಲಿ ಬಿಡುಗಡೆ ಮಾಡಿದ ಅನುದಾನದ ಕುರಿತು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):-**

೬೨೫ (೧೦೬೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೦೩ ವರ್ಷದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಇಲಾಖೆಯಲ್ಲಿ ಬಿಡುಗಡೆ ಮಾಡಿದ ಅನುದಾನ ಎಷ್ಟು; ಯಾವ ಯಾವ ಉದ್ದೇಶಕ್ಕಾಗಿ ಈ ಅನುದಾನ ಬಳಸಲಾಗಿದೆ;

(ಆ) ಅಲ್ಪಸಂಖ್ಯಾತರ ಇಲಾಖೆಯಿಂದ ವಿದೇಶಕ್ಕೆ ತೆರಳಿ ವಿದ್ಯಾಭ್ಯಾಸ ಪಡೆಯಲು ಕೇವಲ ೫೦೦ ವಿಶ್ವವಿದ್ಯಾನಿಲಯ ಮಾತ್ರ ಪರಿಗಣಿಸಲಾಗುತ್ತಿದ್ದು, ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂಬ ದೂರುಗಳಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು;

(ಇ) ೫೦೦ ವಿದೇಶಾಂಗ ಸ್ಕಾಲರ್ ಶಿಫ್ ೫೦೦ ವಿಶ್ವವಿದ್ಯಾನಿಲಯ ಒಳಗಡೆ ಇರುವ ಎಷ್ಟು ವಿದ್ಯಾರ್ಥಿಗಳಿಂದ ಅರ್ಜಿ ಸ್ವೀಕರಿಸಲಾಗಿದೆ; ಎಷ್ಟು ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಫ್ ನೀಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಪಶುಸಂಗೋಪನೆಯ ವ್ಯವಸ್ಥೆ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):-**

೯೨೬ (೧೦೬೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೋಯಿಲಾದಲ್ಲಿ ಸ್ಥಾಪಿಸಲು ಉದ್ದೇಶಿಸಿದ ಪಶುಸಂಗೋಪನೆ ಕಾಲೇಜುಗಳ ಸ್ಥಿತಿಗತಿಯೇನು; ಇಲ್ಲಿ ಯಾವ ಚಟುವಟಿಕೆಗಳು ನಡೆಯುತ್ತಿದೆ;

(ಆ) ರಾಜ್ಯದಲ್ಲಿ ಪಶುಸಂಗೋಪನೆ ವೈದ್ಯರ ಕೊರತೆ ಇದ್ದು, ಇದನ್ನು ನೀಗಿಸಲು ಕೈಗೊಂಡಿರುವ ಕ್ರಮಗಳೇನು;

(ಇ) ಪಶುಸಂಗೋಪನೆ ಇಲಾಖೆಯಲ್ಲಿನ ವೈದ್ಯರುಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳೆಷ್ಟು? (ವಿವರ ನೀಡುವುದು)

## ನಾಲ್ಕು ಸಾರಿಗೆ ನಿಗಮಗಳಲ್ಲಿ ಆಗಿರುವ ನಷ್ಟದ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

೯೨೭ (೧೦೩೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ನಾಲ್ಕು ಸಾರಿಗೆ ನಿಮಗಳಿಗೆ ಕಳೆದ ಎರಡು ವರ್ಷಗಳಿಂದ ಆಗಿರುವ ನಷ್ಟದ ಪ್ರಮಾಣವೆಷ್ಟು; (ನಿಗಮವಾರು ಮಾಹಿತಿ ನೀಡುವುದು)

(ಆ) ಈ ನಾಲ್ಕು ಸಾರಿಗೆ ನಿಗಮಗಳ ಅಧಿಕಾರಿ/ನೌಕರರಿಗೆ ಇಲ್ಲಿಯವರೆಗೆ ಎಷ್ಟು ವೇತನ ಬಾಕಿ, ಪಿ.ಎಫ್., ನಿವೃತ್ತ ನೌಕರರ ಉಪಧನ, ರಜೆ ನಗದೀಕರಣ ಇನ್ನಿತರ ಬಾಕಿ ಉಳಿಸಿಕೊಂಡಿರುವ ಒಟ್ಟು ಮೊತ್ತವೆಷ್ಟು; ಇದನ್ನು ಯಾವಾಗ ಪಾವತಿ ಮಾಡಲಾಗುವುದು; (ನಿಗಮವಾರು ಮಾಹಿತಿ ಒದಗಿಸುವುದು)

(ಇ) ಈ ನಾಲ್ಕು ಸಾರಿಗೆ ನಿಗಮಗಳಿಂದ ಇಲ್ಲಿಯವರೆಗೆ ಬಸ್ಸುಗಳ ಬಿಡಿ ಭಾಗಗಳ ಪೂರೈಕೆದಾರರಿಗೆ ಮತ್ತು ಇಂಧನ ಪೂರೈಕೆ ಮಾಡುವ ಕಂಪನಿಗಳಿಗೆ ಪಾವತಿಸಬೇಕಾಗಿರುವ ಒಟ್ಟು ಮೊತ್ತವೆಷ್ಟು; (ವಿವರ ನೀಡುವುದು)

(ಈ) ೨೦೨೩-೨೦೨೪ ಮತ್ತು ೨೦೨೪-೨೦೨೫ನೇ ಸಾಲಿನಲ್ಲಿ ಎಷ್ಟು ಹೊಸ ಬಸ್ಸುಗಳನ್ನು ಖರೀದಿ ಮಾಡಲಾಗಿದೆ; ಮತ್ತು ಇದೇ ಅವಧಿಯಲ್ಲಿ ಹೊಸದಾಗಿ ಎಷ್ಟು ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ;

(ಉ) ಈ ನಾಲ್ಕು ನಿಗಮಗಳಿಂದ ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೆ ಎಷ್ಟು ಜನ ಮಹಿಳೆಯರು ಉಚಿತವಾಗಿ ಪ್ರಯಾಣದ ಸೌಲಭ್ಯ ಪಡೆದಿದ್ದಾರೆ; ಇದಕ್ಕಾಗಿ ಖರ್ಚಾಗಿರುವ ಮೊತ್ತವೆಷ್ಟು; (ನಿಗಮವಾರು ಉತ್ತರ ನೀಡುವುದು)

(ಊ) ನಷ್ಟದಲ್ಲಿರುವ ಈ ನಾಲ್ಕು ನಿಗಮಗಳನ್ನು, ಲಾಭ ನಷ್ಟಕ್ಕಿಂತ ಸಾರ್ವಜನಿಕ ಸೇವೆ ಎಂದು ಭಾವಿಸಿ ನಷ್ಟ ರಹಿತದ ಕಡೆಗೆ ತರಲು ಸರ್ಕಾರ ರೂಪಿಸಿರುವ ಯೋಜನೆಗಳಾವುವು? (ವಿವರ ನೀಡುವುದು)

## ಹೊರ ರಾಜ್ಯಗಳಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ಛತ್ರಗಳ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

೯೨೮ (೧೦೩೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಮತ್ತು ಹೊರ ರಾಜ್ಯಗಳಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಎಷ್ಟು ವಸತಿ ಗೃಹಗಳು ಮತ್ತು ಛತ್ರಗಳಿವೆ; ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಕೊಠಡಿಗಳಿವೆ; ಹಾಗೂ ಈ ಕೊಠಡಿಗಳಿಗೆ, ಛತ್ರಗಳಿಗೆ ನಿಗದಿ ಮಾಡಿರುವ ಮೊತ್ತವೆಷ್ಟು; ಈ ಬಗ್ಗೆ ಆದೇಶ/ಅಧಿಸೂಚಿತ ಪ್ರತಿಯ ವಿವರ ನೀಡುವುದು;

(ಆ) ಸರ್ಕಾರವು ಮಂತ್ರಾಲಯದಲ್ಲಿ ನಿರ್ಮಿಸಿರುವ ಛತ್ರ ಮತ್ತು ವಸತಿ ಗೃಹಗಳಲ್ಲಿ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಕರ್ಯಗಳಿಲ್ಲದಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಮಂತ್ರಾಲಯದಲ್ಲಿರುವ ಛತ್ರ ಮತ್ತು ವಸತಿ ಗೃಹಗಳನ್ನು ನಿರ್ಮಿಸಿ ಎಷ್ಟು ವರ್ಷಗಳಾಗಿವೆ; ಹಾಗೂ ಇಲ್ಲಿಯವರೆಗೆ ಎಷ್ಟು ಬಾರಿ ದುರಸ್ತಿ ಮಾಡಿಸಲಾಗಿದೆ; ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು; (ಸಂಪೂರ್ಣ ಮಾಹಿತಿಯೊಂದಿಗೆ ವಿವರಣೆ ನೀಡುವುದು)

(ಈ) ಸದರಿ ಛತ್ರದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ/ನೌಕರರ ಸಂಖ್ಯೆಯೆಷ್ಟು; ಇವರಿಗೆ ವೇತನಕ್ಕಾಗಿ ಪಾವತಿಸಲಾಗುತ್ತಿರುವ ಮೊತ್ತವೆಷ್ಟು; ಈ ಸಂಸ್ಥೆಗೆ ಬರುತ್ತಿರುವ ವಾರ್ಷಿಕ ಆದಾಯವೆಷ್ಟು? (ವಿವರ ನೀಡುವುದು)

## ಊರುಗುಪ್ಪೆ ಸರ್ವೆ ನಂಬರ್, ಗ್ರಾಮಠಾಣಾಗಳ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

೯೨೯ (೧೦೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಗ್ರಾಮಗಳಲ್ಲಿರುವ ಕಂದಾಯ ಭೂಮಿ, ಗ್ರಾಮಠಾಣಾ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಅನಾದಿ ಕಾಲದಿಂದಲೂ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಭಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಆ) ಕೊಡಗು, ಮೈಸೂರು, ಚಾಮರಾಜನಗರ ಹಾಗೂ ಇನ್ನಿತರೆ ಜಿಲ್ಲೆಗಳಲ್ಲಿ ಅನಾದಿ ಕಾಲದಿಂದಲೂ ಗ್ರಾಮಠಾಣಾ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವವರಿಗೆ ನಮೂನೆ ೯ ಮತ್ತು ೧೧ನೇ ಬಿ-ನಮೂನೆ ವಿತರಿಸದಿರುವ

ಕಾರಣ, ಗ್ರಾಮ ಪಂಚಾಯಿತಿಯವರು ಈ ಜಾಗಕ್ಕೆ ಹಕ್ಕುಪತ್ರ ನೀಡಿ, ಇಲ್ಲವೇ ಆರ್.ಟಿ.ಸಿ. ನೀಡಿ, ಇಲ್ಲವೇ ಭೂ ಪರಿವರ್ತನೆ ಮಾಡಿಸಿಕೊಂಡು ಬನ್ನಿ ಎಂದು ತಿಳಿಸುತ್ತಿರುವುದು ಸರ್ಕಾರ ಗಮನಿಸಿದೆಯೇ; (ವಿವರ ನೀಡುವುದು)

(ಇ) ಗ್ರಾಮ ಠಾಣಾಗಳಿಗೆ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿರುವ ಸ್ವತ್ತು ಆರ್.ಟಿ.ಸಿ.ನಲ್ಲಿ ಗ್ರಾಮಸ್ಥರು ಎಂದು ಬರುತ್ತಿದ್ದು, ಇಂತಹ ಸ್ವತ್ತುಗಳಿಗೆ ಆರ್.ಟಿ.ಸಿ., ಭೂಪರಿವರ್ತನೆ ಮಾಡಿಸಲು ಸಾಧ್ಯವೇ; ಸರ್ಕಾರವು ಈ ಸಮಸ್ಯೆಯನ್ನು ನಿವಾರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ತೆಗೆದುಕೊಳ್ಳುವ ಕ್ರಮವೇನು;

(ಈ) ಈ ಸ್ವತ್ತುಗಳ ದಾಖಲೆಗಳನ್ನು ಯಾವುದೇ ಬ್ಯಾಂಕಿಗಾಗಲೀ, ಖಾತೆ ಮಾಡಿಸುವುದಕ್ಕಾಗಲೀ, ಪೌತಿ ಖಾತೆ ವರ್ಗಾವಣೆಗಾಗಲೀ, ಇತರೆ ಕೆಲಸಗಳಿಗೆ ಸಲ್ಲಿಸಲು ಸಾಧ್ಯವಾಗದೆ, ಸಾರ್ವಜನಿಕ ನಿವಾಸಿಗಳು ಇಡೀ ರಾಜ್ಯದಲ್ಲಿ ತೊಂದರೆಗೆ ಒಳಗಾಗಿರುವುದನ್ನು ಮನಗಂಡು "೯ಳಸಿ" ಅನ್ನು ಒಂದು ವರ್ಷದ ಮಟ್ಟಿಗೆ ಜಾರಿಗೆ ತಂದು ಹಕ್ಕುಪತ್ರ ವಿತರಿಸಲು ಸರ್ಕಾರ ಆದೇಶ ಹೊರಡಿಸುವುದೇ? (ಸ್ಪಷ್ಟ ಉತ್ತರ ನೀಡುವುದು)

## ರೈತರ ಹಿಡುವಳಿ ಜಮೀನಿನಲ್ಲಿರುವ ಕಲ್ಲು, ಬಂಡೆ, ಖರಾಬ್ ಜಮೀನುಗಳ ನಿರ್ಧಾರದ ಕುರಿತು.

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

F-3

೯೩೦ (೧೦೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಒಬ್ಬ ರೈತನ ಹಿಡುವಳಿ ಜಮೀನಿನಲ್ಲಿ ಸಾಗುವಳಿಗೆ ಯೋಗ್ಯವಲ್ಲದ ಕಲ್ಲು, ಬಂಡೆ, ಹಳ್ಳ, ತಗ್ಗಿದ ಪ್ರದೇಶ, ಮರಡಿ ಇತ್ಯಾದಿ ಖರಾಬ್

ಜಮೀನುಗಳು ಸರ್ಕಾರಕ್ಕೆ ಸೇರಿದ ಸ್ವತ್ತೇ ಅಥವಾ ಹಿಡುವಳಿದಾರರಿಗೆ ಸೇರಿದ ಸ್ವತ್ತೇ ಎಂಬುದರ ಬಗ್ಗೆ ಸರ್ಕಾರ ಆದೇಶ/ಅಧಿಸೂಚನೆ/ಸುತ್ತೋಲೆ ಹೊರಡಿಸಿದೆಯೇ; (ವಿವರ ನೀಡುವುದು)

(ಆ) ಇಂತಹ ಜಮೀನುಗಳನ್ನು ರುಜುವಾತು ಪಡಿಸುವ ದಾಖಲೆಗಳನ್ನು ಪರಿಶೀಲಿಸಿ ನಿರ್ಧರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಖರಾಬ್ ಜಮೀನುಗಳ ನಿರ್ಧರಣಾ ಸಮಿತಿಯನ್ನು ರಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಈ ನಿರ್ಧರಣಾ ಸಮಿತಿಗಳು ಇಲ್ಲಿಯವರೆಗೆ ಎಷ್ಟು ಸಭೆಗಳನ್ನು ನಡೆಸಿ, ಪರಿಶೀಲನಾ ವರದಿಗಳನ್ನು ಸಲ್ಲಿಸಿದೆಯೇ; (ಜಿಲ್ಲಾವಾರು ಮಾಹಿತಿಯನ್ನು ಸಲ್ಲಿಸುವುದು)

(ಈ) ನಿರ್ಧರಣೆ ಸಮಿತಿಯ ಅಭಿಪ್ರಾಯಗಳನ್ನು ಆಧರಿಸಿ, ಸಂಬಂಧಪಟ್ಟ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸತಕ್ಕದ್ದು ಎಂದು ಸರ್ಕಾರ ದಿನಾಂಕ:೧೬.೦೫.೨೦೧೮ರ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಿದೆಯೇ; ತಿಳಿಸಿದ್ದಲ್ಲಿ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಇಲ್ಲಿಯುವರೆಗೆ ಎಷ್ಟು ಪ್ರಕರಣಗಳಲ್ಲಿ ಆದೇಶಗಳನ್ನು ಹೊರಡಿಸಿದ್ದಾರೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಉ) ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ.೦೫ಎಲ್.ಜಿ.ಇ.೨೦೧೮, ದಿನಾಂಕ:೧೬.೦೫.೨೦೧೮ರ ಆದೇಶ ಇನ್ನು ಜಾರಿಯಲ್ಲಿದೆಯೇ? (ವಿವರ ನೀಡುವುದು)

## ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು ಬೈರಸಂದ್ರ ಗ್ರಾಮದ ಸರ್ವೆ ನಂ:೬೪ರ ಜಾಗದ ಕುರಿತು.

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

೯೩೧ (೧೦೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಮಾರತ್‌ಹಳ್ಳಿ ಹೋಬಳಿ, ಬೈರಸಂದ್ರ ಗ್ರಾಮದ ಸರ್ವೆ ನಂ;೬೪ರಲ್ಲಿ ಎಷ್ಟು ಗುಂಟೆ ಸರ್ಕಾರಿ ಮತ್ತು ಖಾಸಗಿಯವರಿಗೆ ಸೇರಿದ ಜಾಗವಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಈ ಸರ್ವೆ ನಂಬರ್‌ನಲ್ಲಿರುವುದು ಗೋಮಾಳ ಜಮೀನೋ ಅಥವಾ ಹಿಡುವಳಿ ಜಮೀನೋ ಅಥವಾ ಯಾವ ವರ್ಗಕ್ಕೆ ಸೇರಿದ ಜಮೀನಾಗಿದೆ ಎಂಬುದರ ಬಗ್ಗೆ ವಿವರಣೆಯೊಂದಿಗೆ ಮಾಹಿತಿ ಒದಗಿಸುವುದು;

(ಇ) ಸದರಿ ಸರ್ವೆ ನಂಬರ್‌ನಲ್ಲಿರುವ ಜಾಗವನ್ನು ಯಾರಿಗಾದರೂ ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ, ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು;

(ಈ) ಸರ್ವೆ ನಂ:೬೪ರಲ್ಲಿರುವ ಜಮೀನು ಸರ್ಕಾರಕ್ಕೆ ಸೇರಿದ್ದರೆ, ಈ ಜಾಗವನ್ನು ಸಂರಕ್ಷಣೆ ಮಾಡಲು ಸರ್ಕಾರ ಯಾವ ರೀತಿ ಕ್ರಮಗಳನ್ನು ಕೈಗೊಂಡಿದೆ? (ವಿವರಣೆ ನೀಡುವುದು)

## ಗ್ರೇಡ್–೨ ಹುದ್ದೆ ಹೊಂದಿರುವ ಅಧಿಕಾರಿಗಳನ್ನು ಗ್ರೇಡ್–೧ ತಹಶೀಲ್ದಾರ್ ಹುದ್ದೆಗೆ ನಿಯೋಜಿಸಿರುವ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೩೨ (೧೦೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಒಟ್ಟು ಎಷ್ಟು ತಾಲ್ಲೂಕುಗಳಲ್ಲಿ ನಿಯಮ ೩೨ರ ಅಡಿ ತಹಶೀಲ್ದಾರ್ ಗ್ರೇಡ್–೨ ಹುದ್ದೆ ಹೊಂದಿರುವ ಅಧಿಕಾರಿಗಳು ತಹಶೀಲ್ದಾರ್ ಗ್ರೇಡ್–೧ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ; (ತಾಲ್ಲೂಕುವಾರು ಅಧಿಕಾರಿಗಳ ವಿವರ ನೀಡುವುದು)

(ಆ) ತಹಶೀಲ್ದಾರರು ಹಾಗೂ ತಾಲ್ಲೂಕು ದಂಡಾಧಿಕಾರಿಯಾಗಿ ಇಂತಹ ಅಧಿಕಾರಿಗಳು ಹೊರಡಿಸಿರುವ ಆದೇಶಗಳಿಗೆ ಕಾನೂನಿನ ಅಡಿಯಲ್ಲಿ ಮಾನ್ಯತೆ ಇದೆಯೇ; (ಸಂಬಂಧಿಸಿದ ಆದೇಶ ಪ್ರತಿ ನೀಡುವುದು)

(ಇ) ನಿಯಮ ೩೨ರ ಅಡಿ ತಹಶೀಲ್ದಾರ್ ಗ್ರೇಡ್–೨ ಹುದ್ದೆ ಹೊಂದಿರುವ ಅಧಿಕಾರಿಗಳನ್ನು ತಹಶೀಲ್ದಾರ್ ಗ್ರೇಡ್–೧ ಆಗಿ ನಿಯೋಜಿಸಲು ಕಾರಣವೇನು;

(ಈ) ರಾಜ್ಯದಲ್ಲಿ ಗ್ರೇಡ್–೧ ಹಾಗೂ ಗ್ರೇಡ್–೨ ತಹಶೀಲ್ದಾರ್‌ರ ಕೊರತೆ ಇದೆಯೇ? (ವೃಂದಬಲ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಹಾಗೂ ಹೆಸರಿನ ಪಟ್ಟಿ ನೀಡುವುದು)

## ಕೊಡಗು ಜಿಲ್ಲೆಯಲ್ಲಿನ ಪೈಸಾರಿ ಜಮೀನುಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೯೩೩ (೧೦೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಇರುವ ಪೈಸಾರಿ ಜಮೀನುಗಳ ಸಂಖ್ಯೆ ಎಷ್ಟು; (ಮಾಹಿತಿಗಳನ್ನು ಒದಗಿಸುವುದು)

(ಆ) ಸದರಿ ಪೈಸಾರಿ ಜಮೀನುಗಳನ್ನು ಭೂ ಮಂಜೂರಾತಿ ಕಾಯ್ದೆ ಅಡಿ ಸಂಬಂಧಿಸಿದವರಿಗೆ ಮಂಜೂರಾತಿ ಮಾಡಿಕೊಡಲು ನಿಯಮಗಳಲ್ಲಿ ಅವಕಾಶವಿದೆಯೇ; ಈ ರೀತಿ ಪೈಸಾರಿ ಜಮೀನುಗಳನ್ನು ಮಂಜೂರಾತಿ ಮಾಡಿಕೊಡಲು ಮನವಿಗಳನ್ನು ಸಲ್ಲಿಸಿರುವವರ ಸಂಖ್ಯೆ ಎಷ್ಟು; ಒಟ್ಟು ಎಷ್ಟು ಪ್ರಸ್ತಾವನೆಗಳು ಮನವಿ ರೂಪದಲ್ಲಿ ಬಂದಿವೆ; (ಮಾಹಿತಿ ನೀಡುವುದು)

(ಇ) ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನುಗಳನ್ನು ಸಿ ಮತ್ತು ಡಿ ಜಮೀನುಗಳೆಂದು ವರ್ಗೀಕರಿಸಿ ಅಂತಹ ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿರುತ್ತಾರೆಯೇ; ನೀಡಿದ್ದಲ್ಲಿ ಸಿ ಮತ್ತು ಡಿ ಜಮೀನುಗಳನ್ನು ಗುರುತಿಸಲು ರೂಪಿಸಿರುವ ನಿಯಮಾವಳಿಗಳೇನು; ಈ ನಿಯಮಾವಳಿಗಳನ್ವಯ ಸದರಿ ಜಮೀನುಗಳನ್ನು ಸಿ ಮತ್ತು ಡಿ ಜಮೀನುಗಳೆಂದು ವರ್ಗೀಕರಿಸಲಾಗಿದೆಯೇ;

(ಈ) ವರ್ಗೀಕರಿಸುವ ಸಂದರ್ಭದಲ್ಲಿ ಕೆಳಹಂತದ ಅಧಿಕಾರಿಗಳು ವ್ಯವಸಾಯ ಮಾಡುತ್ತಿರುವವರ ಜಮೀನುಗಳನ್ನು ಸಹ ಸಿ ಮತ್ತು ಡಿ ಜಮೀನುಗಳು ಎಂದು ಉಲ್ಲೇಖಿಸಿರುತ್ತಾರೆ ಎಂದು ಅನೇಕ ದೂರುಗಳಿದ್ದು ಈ ಬಗ್ಗೆ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು);

(ಉ) ಈ ಕುರಿತು ಕಂದಾಯ ಇಲಾಖೆಯು ಅರಣ್ಯ ಇಲಾಖೆಯವರೊಂದಿಗೆ ಮತ್ತೊಂದು ಬಾರಿ ಜಿಲ್ಲೆಯಲ್ಲಿರುವ ಎಲ್ಲಾ ಪೈಸಾರಿ ಜಮೀನುಗಳನ್ನು ಸರ್ವೆ ಮಾಡಿ ವ್ಯವಸಾಯಕ್ಕೆ

ಯೋಗ್ಯವಲ್ಲದ ಜಮೀನುಗಳನ್ನು ಮಾತ್ರ ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು ಕ್ರಮ ಕೈಗೊಳ್ಳಲು ಮುಂದಾಗುವುದೇ;

(ಊ) ೧೯೯೧ರಲ್ಲಿ ಹಿಂಪಡೆಯಲಾದ ಜಮೀನುಗಳು ಎಂಬ ಮಾನದಂಡವನ್ನು ಹೊರತುಪಡಿಸಿ ಸಾಗುವಳಿಗೆ ಯೋಗ್ಯವಾದ ಎಲ್ಲಾ ಜಮೀನುಗಳನ್ನು ನಮೂನೆ ೫೦, ೫೩ ಮತ್ತು ೫೭ರ ಅರ್ಜಿಗಳನ್ನು ಮಾನ್ಯ ಮಾಡಿ ಮಂಜೂರಾತಿ ಮಾಡಿ ಹಕ್ಕುಪತ್ರ ನೀಡುವ ಕುರಿತು ಇಲಾಖೆ ಸ್ಪಷ್ಟ ನಿಲುವೇನು?

## ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಅನಾಥವಾಗಿರುವ ಅಗಸ್ತ್ಯೇಶ್ವರ ಲಿಂಗದ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೩೪ (೧೦೪೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಈ ಹಿಂದೆ ಅಗಸ್ತ್ಯೇಶ್ವರ ಲಿಂಗವನ್ನು ಪೂಜಿಸಲಾಗುತ್ತಿತ್ತೆ; ನಂತರದಲ್ಲಿ ಈ ಅಗಸ್ತ್ಯೇಶ್ವರ ಲಿಂಗವನ್ನು.ವಿಸರ್ಜನೆ ಮಾಡುವ ಪರಿಸ್ಥಿತಿ ಉಂಟಾಗಿದ್ದು ಯಾವ ಕಾರಣಕ್ಕಾಗಿ;

(ಆ) ವಿಸರ್ಜನೆ ಮಾಡಲು ಇಲಾಖೆಯು ಯಾವ ಕ್ರಮಗಳನ್ನು ಕೈಗೊಂಡಿದೆ; ಅಗಸ್ತ್ಯೇಶ್ವರ ಲಿಂಗವನ್ನು ವಿಸರ್ಜನೆ ಮಾಡಿರುವ ಬಗ್ಗೆ ಸ್ಥಳೀಯರ ವಿರೋಧವಿದೆಯೇ; ಈ ನಿಟ್ಟಿನಲ್ಲಿ ಮರು ಪ್ರತಿಷ್ಠಾಪನೆ ಮಾಡಬೇಕೆಂಬ ಬೇಡಿಕೆ ಇದೆಯೇ;

(ಇ) ಇವೆರಡರ ಮಧ್ಯೆ ಕೊಡಗು ಜಿಲ್ಲೆಯಲ್ಲಿ ಆಗುತ್ತಿರುವ ಅಕಾಲಿಕ ಪ್ರಕೃತಿ ವಿಕೋಪಗಳು ಈ ಅಗಸ್ತ್ಯೇಶ್ವರ ಲಿಂಗದ ಕಡಗಣೆಯೇ

ಇದಕ್ಕೆ ಕಾರಣವೆಂದು ಜನರಲ್ಲಿ ನಂಬಿಕೆ ವ್ಯಕ್ತವಾಗುತ್ತಿದ್ದು ಇದರ ಪ್ರತಿಷ್ಠಾಪನೆಗೆ ಅಥವಾ ವಿಸರ್ಜನೆಗೆ ಇಲಾಖೆಯು ನ್ಯಾಯಾಲಯದ ತಡೆಯಾಜ್ಞೆಗೆ ಅನುಗುಣವಾಗಿ ತೆಗೆದುಕೊಂಡಿರುವ ಕ್ರಮಗಳೇನು;

(ಈ) ಇಲಾಖೆಯು ಸ್ಥಳೀಯ ಮಟ್ಟದಲ್ಲಿ ಚರ್ಚಿಸಿ ಇದಕ್ಕೊಂದು ಮುಕ್ತಿ ನೀಡುವ ನಿಟ್ಟಿನಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳೇನು; ಅಥವಾ ಇದಕ್ಕೊಂದು ಸಮಿತಿ ರಚಿಸಿ ಅಗಸ್ತ್ಯೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಕಾರ್ಯಕ್ಕೆ ಇಲಾಖೆಯ ಮುಂದಿರುವ ಕ್ರಮಗಳೇನು?

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜಿನ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮ ಪಾಲನೆ ಮಾಡದೆ ಇರುವ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೩೫ (೧೦೭೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜಿನ ಪ್ರಾಂಶುಪಾಲರು, ನಿಲಯಪಾಲಕರು, ಪ್ರಥಮ ದರ್ಜೆ ಗಣಕಯಂತ್ರ ಸಹಾಯಕರು ಮತ್ತು ಜಿಲ್ಲಾ ಮತ್ತು ಕೇಂದ್ರ ಗಣಕಯಂತ್ರ ಸಹಾಯಕರು ಮತ್ತು ಜಿಲ್ಲಾ ಅಧಿಕಾರಿಗಳು, ಪ್ರಥಮ ದರ್ಜೆ ಸಹಾಯಕರು ತಾಲ್ಲೂಕು ವಿಸ್ತರಣಾಧಿಕಾರಿಗಳು ಮತ್ತು ಮೆಟ್ರಿಕ್ ನಂತರದ ನಿಲಯಪಾಲಕರ ಸಂಖ್ಯೆ ಎಷ್ಟು; (ಮಾಹಿತಿ ಒದಗಿಸುವುದು)

(ಆ) ತಾಲ್ಲೂಕು ವಿಸ್ತರಣಾಧಿಕಾರಿಗಳು ಮತ್ತು ಪ್ರಾಂಶುಪಾಲರ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳ ಮೂಲಕ ಮುಂಬಡ್ತಿ

ನೀಡದೆ ಕಾರ್ಯಕಾರಿ ಆದೇಶದ ಮೂಲಕ ಮುಂಬಡ್ತಿ ನೀಡುತ್ತಿರುವ ಉದ್ದೇಶವೇನು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವಾಗ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಿಯಮಗಳನ್ನು ಪಾಲಿಸಲಾಗಿದೆಯೇ; ಪಾಲಿಸಿದ್ದಲ್ಲಿ ತಾಲ್ಲೂಕು ವಿಸ್ತರಣಾಧಿಕಾರಿಗಳ ಹುದ್ದೆಗಳಿಗೆ ಯಾವ ಆಧಾರದ ಮೇಲೆ ಪೋಷಕ ವೃಂದಗಳನ್ನು ಪರಿಗಣಿಸಲಾಗಿದೆ;

(ಈ) ಆಡಳಿತ ಮತ್ತು ಸುಧಾರಣೆ ಇಲಾಖೆಯ ನಿಯಮಗಳಂತೆ ಪ್ರತಿ ಮೂರು ವರ್ಷಕ್ಕೊಮ್ಮೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಅವಕಾಶ ಇದ್ದರೂ ಸಹ ೨೦೧೧ ರಿಂದ ವೃಂದ ಮತ್ತು ನೇಮಕಾತಿ ನಿಯಮಗಳು ತಿದ್ದುಪಡಿ ಮಾಡದೆ ಇರಲು ಕಾರಣವೇನು?

## ಪ್ರಸಕ್ತ ಸಾಲಿನ ಹಿಂಗಾರು ಅವಧಿಯಲ್ಲಿ ಮಳೆಯಿಂದ ಆದ ಹಾನಿ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೯೩೬ (೧೧೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನ ಹಿಂಗಾರು ಅವಧಿಯಲ್ಲಿ ಮಳೆ ಅಬ್ಬರಕ್ಕೆ ಆದ ಒಟ್ಟು ಹಾನಿ ಪ್ರಮಾಣ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹಿಂಗಾರು ಅವಧಿಯಲ್ಲಿ ಉಂಟಾದ ಮನೆ ಮತ್ತು ಪ್ರಾಣ ಹಾನಿ ಪ್ರಕರಣಗಳ ಸಂಖ್ಯೆ ಹಾಗೂ ಹಾನಿಗೊಳಗಾದ ಕೃಷಿ ಮತ್ತು

ತೋಟಗಾರಿಕೆ ಬೆಳೆಗಳು, ಗ್ರಾಮೀಣ ರಸ್ತೆಗಳ ಉದ್ಧ ಮತ್ತು ಸಣ್ಣ ಸೇತುವೆಗಳು, ವಿದ್ಯುತ್ ಕಂಬಗಳು ಮತ್ತು ಪರಿವರ್ತಕಗಳ ಸಂಖ್ಯೆ ಎಷ್ಟು; (ವಿಸ್ತೀರ್ಣ, ಹಾನಿಯ ಅಂದಾಜು ಮೊತ್ತ ನೀಡುವುದು)

(ಇ) NDRF/SDRF ಅಡಿಯಲ್ಲಿ ಈವರೆವಗೂ ಎಷ್ಟು ಪ್ರಕರಣಗಳಲ್ಲಿ ಎಷ್ಟು ಪರಿಹಾರ ಮೊತ್ತ ಪಾವತಿಸಲಾಗಿದೆ; ಪಾವತಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಮತ್ತು ಪರಿಹಾರ ಮೊತ್ತ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಈ ಅವಧಿಯಲ್ಲಿ ಆಗಬೇಕಾದ ವಾಡಿಕೆ ಮಳೆ ಹಾಗೂ ಸುರಿದ ವಾಸ್ತವಿಕ ಮಳೆ ಪ್ರಮಾಣ ಎಷ್ಟು; ವಾಡಿಕೆಗಿಂತ ಹೆಚ್ಚು ಸುರಿದ ಶೇಕಡವಾರು ಮಳೆ ಪ್ರಮಾಣ ಎಷ್ಟು?

## ಮಂಡ್ಯ ಜಿಲ್ಲೆಯಲ್ಲಿ ನಿರ್ಮಿಸುತ್ತಿರುವ ಸರ್ಕಾರಿ ಗೋಶಾಲೆ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೯೩೭ (೧೧೦೪) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಚಿಕ್ಕಂಕನಹಳ್ಳಿ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಸರ್ಕಾರಿ ಗೋಶಾಲೆಯುನ್ನು ಆರಂಭಿಸಲಾಗಿದೆಯೇ; ಅರಂಭಿಸದಿದ್ದರೆ ಕಾರಣಗಳೇನು; ಎಂದಿನಿಂದ ಆರಂಭಿಸಲಾಗುವುದು; (ವಿವರ ನೀಡುವುದು)

(ಆ) ಗೋಶಾಲೆಯನ್ನು ಎಷ್ಟು ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದೆ; ಭರಿಸಿರುವ ವೆಚ್ಚ ಎಷ್ಟು; ಜಾನುವಾರುಗಳಿಗೆ ಕಲ್ಪಿಸಲಾಗಿರುವ ಮೂಲಸೌಲಭ್ಯಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಗೋಶಾಲೆ ಸ್ಥಳ ಒತ್ತುವರಿ ಆಗದಂತೆ ತಡೆಯಲು ರಕ್ಷಣೆಗೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗಿದೆ;

(ಈ) ಮಂಡ್ಯ ಜಿಲ್ಲೆಯಲ್ಲಿ ಖಾಸಗಿ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆಯೇ; ಹಾಗೂ ಇವುಗಳಿಗೆ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸಹಾಯಧನದ ಮೊತ್ತ ಎಷ್ಟು? (ವಿವರ ನೀಡುವುದು)

## ಸರ್ಕಾರಿ ಭೂಮಿಯ ಒತ್ತುವರಿ ಮತ್ತು ತೆರವು ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೯೩೮ (೧೧೦೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಅರಣ್ಯ ಭೂಮಿ ವಿಸ್ತೀರ್ಣ ಎಷ್ಟು; ಈ ಪೈಕಿ ಒತ್ತುವರಿ ಆಗಿರುವ ಪ್ರಕರಣಗಳ ಸಂಖ್ಯೆ ಮತ್ತು ವಿಸ್ತೀರ್ಣ (ಎಕರೆ/ಗುಂಟೆ) ಎಷ್ಟು; ಇದರಲ್ಲಿ ತೆರವುಗೊಳಿಸಲಾದ ಒತ್ತುವರಿ ಪ್ರಕರಣಗಳ ಸಂಖ್ಯೆ ಮತ್ತು ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಒತ್ತುವರಿದಾರರ ವಿರುದ್ಧ ಯಾವ ರೀತಿಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು) ಹಾಗೂ ಒತ್ತುವರಿ ತೆರವುಗೊಳಿಸಲು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಕಾರ್ಯಪಡೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಸಭೆಗಳನ್ನು ನಡೆಸಿದೆ; (ಸಭೆ ನಡೆದ ದಿನಾಂಕಗಳ ಮಾಹಿತಿ ನೀಡುವುದು)

(ಇ) ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

# ಪಹಣಿಗಳನ್ನು ದುರಸ್ತಿಗೊಳಿಸಿ ಹದ್ದುಬಸ್ತು ನಿಗದಿಪಡಿಸಿಕೊಡುವ ಬಗ್ಗೆ

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೯೩೯ (೧೧೦೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆಯಲ್ಲಿ ಪಹಣಿಗಳನ್ನು ದುರಸ್ತಿಗೊಳಿಸಿ ಹದ್ದಬಸ್ತು ನಿಗದಿಗೊಳಿಸಿಕೊಡಬೇಕಾದ ಪ್ರಕರಣಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪಹಣಿಗಳನ್ನು ದುರಸ್ತಿಗೊಳಿಸಿ ಹದ್ದುಬಸ್ತು ನಿಗದಿಗೊಳಿಸಿಕೊಡಲಾಗಿದೆ; (ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವುದು)

(ಆ) ಮಂಡ್ಯ ತಾಲ್ಲೂಕು ದುದ್ದ ಹೋಬಳಿ ಕಿರಗಂದೂರು ಗ್ರಾಮದ ಸರ್ವೆ ನಂಬರ್ ೨೬ರಲ್ಲಿರುವ ಸಾಗುವಳಿದಾರರ ಸಂಖ್ಯೆ ಎಷ್ಟು; (ಸಾಗುವಳಿದಾರರು ಹಾಗೂ ಅವರ ಒಡೆತನದ ಭೂಮಿಯ ವಿಸ್ತೀರ್ಣದ ಮಾಹಿತಿ ನೀಡುವುದು)

(ಇ) ಸಾಗುವಳಿದಾರರು ಸೂಕ್ತ ದಾಖಲೆಗಳನ್ನು ಹೊಂದಿದ್ದು ಪಹಣಿಗಳನ್ನು ದುರಸ್ತಿಗೊಳಸಿ ಹದ್ದುಬಸ್ತು ನಿಗದಿಗೊಳಸಿಕೊಡುವಂತೆ ಮನವಿ ಸಲ್ಲಿಸುತ್ತಾ ಬಂದಿದ್ದರೂ ಪಹಣಿಗಳನ್ನು ದುರಸ್ತಿಗೊಳಿಸಿ ಹದ್ದುಬಸ್ತು ನಿಗದಿಗೊಳಿಸದಿರುವುದು ಏಕೆ;

(ಇ) ಯಾವ ಕಾಲಮಿತಿಯಲ್ಲಿ ಮನವಿ ಸಲ್ಲಿಸಲಾದ ಸಾಗುವಳಿದಾರರ ಪಹಣಿಗಳನ್ನು ದುರಸ್ತಿಗೊಳಿಸಿ ಹದ್ದುಬಸ್ತು ನಿಗದಿಗೊಳಿಸಿಕೊಡಲಾಗುವುದು; (ವಿವರ ನೀಡುವುದು)

(ಈ) ಪಹಣಿಗಳನ್ನು ದುರಸ್ತಿಗೊಳಿಸಲು ಇರುವ ಮಾನದಂಡಗಳು ಹಾಗೂ ನಿರ್ದಿಷ್ಟಪಡಿಸಿರುವ ಕಾಲಮಿತಿ ಏನು? (ವಿವರ ನೀಡುವುದು)

## ಕರ್ನಾಟಕ ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೪೦ (೧೧೦೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಾರಿಗೆ ಇಲಾಖೆಯಿಂದ ರಾಜ್ಯದ ರಾಜಧಾನಿ ಹಾಗೂ ಕೆಲವು ಜಿಲ್ಲಾ ಕೇಂದ್ರಗಳ ನಡುವೆ "ಪಾಯಿಂಟ್ ಟು ಪಾಯಿಂಟ್" ಅಶ್ವಮೇಧ ಬಸ್ಸು ಸೇವೆಗಳನ್ನು ಆರಂಭಿಸಿದ್ದು ಉಳಿದ ಜಿಲ್ಲೆಗಳಿಗೆ ಈ ಸೇವೆಗಳನ್ನು ಒದಗಿಸಲು ಯಾವಾಗ ಕ್ರಮ ವಹಿಸಲಾಗುತ್ತಿದೆ:

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಪ್ರವಾಸಿ ಪ್ರದೇಶಗಳಾದ ಕುಕ್ಕೆ ಸುಬ್ರಮಣ್ಯ, ಧರ್ಮಸ್ಥಳ, ಕೊಲ್ಲೂರು, ಕಟೀಲು, ಇತ್ಯಾದಿಗಳಿಗೆ ಜಿಲ್ಲಾ ಕೇಂದ್ರಗಳಿಂದ ಮತ್ತು ರಾಜ್ಯದ ರಾಜಧಾನಿಯಿಂದ ಹೊಸ ಹಾಗೂ ಸುಸಜ್ಜಿತ ಸಾರಿಗೆ ವಾಹನಗಳನ್ನು ಒದಗಿಸಲಾಗಿದೆಯೇ: ಒದಗಿಸದಿದ್ದಲ್ಲಿ ಯಾವಾಗ ಒದಗಿಸಲು ಕ್ರಮವಹಿಸಲಾಗುವುದು:

(ಇ) ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಮುಡಿಪು, ಸುರತ್ಕಲ್, ಮೂಲ್ಕಿ ಹಾಗೂ ಮೂಡಬಿದ್ರಿ ಪಟ್ಟಣಗಳಲ್ಲಿ ಹೊಸ ಸಾರಿಗೆ ಸಂಸ್ಥೆಯ ಬಸ್ಸು ನಿಲ್ದಾಣಕ್ಕಾಗಿ ನಿವೇಶನ ಗುರುತಿಸಲು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ಬಗ್ಗೆ ಮತ್ತು ಬಸ್ಸು ನಿಲ್ದಾಣ ಕಾಮಗಾರಿ ಪ್ರಗತಿಯ ಕುರಿತು ಕಾಮಗಾರಿ/ಕಡತಗಳು ಯಾವ ಹಂತದಲ್ಲಿವೆ:

(ಈ) ಈ ಜಿಲ್ಲೆಗಳ ಗ್ರಾಮಾಂತರ ಒಳ ಪ್ರದೇಶಗಳಲ್ಲಿ ಹೊಸ ಮಾರ್ಗಗಳು ಅಭಿವೃದ್ಧಿಯಾಗಿದ್ದು ಅವುಗಳಲ್ಲಿ ಮತ್ತು ನಗರ ಪ್ರದೇಶದಲ್ಲಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸುವಂತೆ ಜನಪ್ರತಿನಿಧಿಗಳು/ ವಿದ್ಯಾರ್ಥಿಗಳು/ಸಾರ್ವಜನಿಕರಿಂದ ಇಲಾಖೆಗೆ ಸಲ್ಲಿಸಿ ಸರ್ಕಾರದ ಗಮನದಲ್ಲಿರುವ ಬೇಡಿಕೆಗಳಲ್ಲಿ ಎಷ್ಟನ್ನು ಪರಿಗಣಿಸಲಾಗಿದೆ ಎಷ್ಟು ಬೇಡಿಕೆಗಳನ್ನು ಈಡೇರಿಸಲು ಕ್ರಮವಹಿಸಿದೆ: ಉಳಿದವುಗಳನ್ನು ಯಾವಾಗ ಪರಿಗಣಿಸಲಾಗುವುದು?

## ಕರಾವಳಿ ಪ್ರದೇಶದಲ್ಲಿ ಕಂದಾಯ ಇಲಾಖೆ ಸಮಸ್ಯೆಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೪೧ (೧೧೧೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಏಕೀಕರಣದ ಮೊದಲು ಮದ್ರಾಸ್ ಪ್ರಾಂತ್ಯದ ಭಾಗವಾಗಿದ್ದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ರಾಜ್ಯದ ಜನವಸತಿ ಪ್ರದೇಶ, ಖಾಸಗಿ ಸಂಪರ್ಕ ರಸ್ತೆ, ಮೂಲಗೇಣಿ ಇತ್ಯಾದಿ ದೀರ್ಘಾವಧಿ ಸಮಸ್ಯೆಗಳಿರುವ ಬಗ್ಗೆ ಇಲಾಖೆಯ ಗಮನಕ್ಕೆ ಈಗಾಗಲೇ ತರಲಾಗಿದ್ದು ಇವುಗಳ ಪರಿಹಾರಕ್ಕಾಗಿ ಕಾಲಮಿತಿಯನ್ನು ನಿಗದಿಪಡಿಸಿ ಯಾವ ರೀತಿಯಲ್ಲಿ ಕಾರ್ಯತಂತ್ರ ರೂಪಿಸಿದೆ:

(ಆ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಸಾಮಾಜಿಕವಾಗಿ ಶೋಷಿತ ಜನರಿಗೆ ಡಿಪ್ರೆಸ್ಸೆಡ್ ಕ್ಲಾಸ್ ಮಾನದಂಡದಡಿ ಯಾವ್ಯಾವ ಸಮುದಾಯಗಳ ಎಷ್ಟು ಜನರಿಗೆ ಭೂಮಂಜೂರಾತಿ ಮಾಡಲಾಗಿದೆ: ಅವುಗಳು ಸದರಿ ಸಮುದಾಯಗಳ

ಸ್ವಾಧೀನದಲ್ಲಿವೆಯೇ; ಡಿಸಿ ಮನ್ನಾ ಜಮೀನುಗಳನ್ನು ಭೂ ಸುಧಾರಣೆ ಕಾಯ್ದೆಯಡಿ ಇತರರು ಸ್ವಾಧೀನಪಡಿಸಲು ಅವಕಾಶವಿದೆಯೇ;

(ಇ) ಖಾಸಗಿ ಕೃಷಿ ಜಮೀನಿನಲ್ಲಿರುವ ರಸ್ತೆ ಜಾಗಗಳನ್ನು ಹಸ್ತಾಂತರಿಸಿಕೊಳ್ಳಬಾರದೆಂದು ೩೦/೦೯/೨೦೨೦ರ ನಗರಾಭಿವೃದ್ಧಿ ಸುತ್ತೋಲೆಯಲ್ಲಿ ತಿಳಿಸಿದ್ದು ಹಸ್ತಾಂತರಿಸಿಕೊಳ್ಳಲು ಅನುಸರಿಸಬೇಕಾದ ನಿಯಮಗಳನ್ನು ಕಂದಾಯ ಇಲಾಖೆ ರೂಪಿಸಿದೆಯೇ; ಒಂದು ಸಲಕ್ಕೆ ಖಾಸಗಿ ರಸ್ತೆಯ ಜಾಗವನ್ನು ಹಸ್ತಾಂತರ ಮಾಡಲು ಅವಕಾಶ ನೀಡಿ ಸಮಸ್ಯೆಯನ್ನು ಪರಿಹರಿಸಲು ಇಲಾಖೆ ಯಾವಾಗ ಕ್ರಮವಹಿಸುವುದು;

(ಈ) ರಾಜ್ಯದಲ್ಲಿ ಭೂಮಿಯ ಖಾತೆದಾರರನ್ನು ನಿಗದಿತ ಗುರುತಿನ ಚೀಟಿಗೆ ಲಿಂಕ್ ಮಾಡಿ ಮತ್ತು ದಾಖಲೆಗಳ ಮೂಲಕ ತಾನು ಹೊಂದಿರುವ ಜಾಗವನ್ನು ಹೊರತುಪಡಿಸಿ ಇತರ ಜಾಗವನ್ನು ಅನಧಿಕೃತವಾಗಿ ಸ್ವಾಧೀನಪಡಿಸಲು ಸಾಧ್ಯವಾಗದ ರೀತಿಯಲ್ಲಿ ವೈಜ್ಞಾನಿಕವಾಗಿ "ಲ್ಯಾಂಡ್ ಅಡಿಟ್" ಮಾಡುವ ಬಗ್ಗೆ ಸರ್ಕಾರದ ನಿಲುವೇನು?

## ಕರ್ನಾಟಕ ರಾಜ್ಯದಲ್ಲಿ ವಸತಿ ಯೋಜನೆಯ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೪೨ (೧೧೧೦) ಮಾನ್ಯ ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ವಸತಿ ಯೋಜನೆಯಡಿ ಕಳೆದ ೩ ವರ್ಷಗಳಲ್ಲಿ ಎಷ್ಟು ಮನೆಗಳನ್ನು ಹಂಚಲಾಗಿದೆ; ಹಂಚಬೇಕಾದ ಮನೆಗಳ

ಗುರಿಯನ್ನು ಯಾವ ಮಾನದಂಡಗಳ ಆಧಾರದಲ್ಲಿ ನಿರ್ಧರಿಸಲಾಗುತ್ತಿದೆ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಸ್ತುತ ಜಿಪಿಎಸ್ ಮಾಡಿರುವ ನಿಯಮಾನುಸಾರ ಸರಿಯಿರುವ ಎಷ್ಟು ಮನೆಗಳಿಗೆ ಅನುದಾನ ಬಿಡುಗಡೆಯಾಗಿದೆ; ಅನುದಾನ ಬಿಡುಗಡೆಗೆ ಬಾಕಿಯಿರುವ ಮನೆಗಳೆಷ್ಟು; ಇದಕ್ಕೆ ಕಾರಣಗಳೇನು; ಯಾವಾಗ ಈ ಮನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು;

(ಇ) ರಾಜ್ಯದಲ್ಲಿ ಮನೆಗಳ ಅನುದಾನ ಬಿಡುಗಡೆಯಾಗುವಲ್ಲಿ ಮತ್ತು ಜಿಪಿಎಸ್ ಮಾಡುವಲ್ಲಿ ಜಿಲ್ಲೆಗಳು ಎದುರಿಸುತ್ತಿರುವ ತಾಂತ್ರಿಕ ಸಮಸ್ಯೆಗಳು ಯಾವುವು; ಜಿಲ್ಲೆಗಳಿಂದ ಸಲ್ಲಿಕೆಯಾದ ಒಟ್ಟು ಪ್ರಕರಣಗಳಲ್ಲಿ ಎಷ್ಟು ಮನೆಗಳ ಸಮಸ್ಯೆಗಳನ್ನು ಪರಿಹರಿಸಲಾಗಿದೆ; ಉಳಿದವುಗಳನ್ನು ಯಾವಾಗ ಪರಿಹರಿಸಲು ಕ್ರಮವಹಿಸಲಾಗುವುದು;

(ಈ) ಅನುದಾನ ಬಿಡುಗಡೆ ಮತ್ತು ಜಿಪಿಎಸ್ ಮಾಡುವ ಬಗೆಗಿನ ಮೊಬೈಲ್ ಮತ್ತು ಕಂಪ್ಯೂಟರ್‌ಆಧಾರಿತ ಆ್ಯಪ್/ತಂತ್ರಾಂಶಗಳನ್ನು ಎಷ್ಟು ಬಾರಿ ಬದಲಾಯಿಸಿದೆ; ಮತ್ತು ಉನ್ನತೀಕರಿಸಿದೆ; ಈ ಪ್ರಕ್ರಿಯೆಯಲ್ಲಿ ಉದ್ಭವಿಸಿರುವ ಸಮಸ್ಯೆಗಳನ್ನು ಯಾವಾಗ ಬಗೆಹರಿಸಲಾಗುವುದು?

**ಪಶುಸಂಗೋಪನೆ ಇಲಾಖೆಯ ಸುಧಾರಣೆ ಕುರಿತು**

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೪೩ (೧೧೧೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:-

(ಅ) ರಾಜ್ಯದಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಇರುವ ಒಟ್ಟು ಪ್ರಾಥಮಿಕ ಹಾಗೂ ಇತರ ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಚಿಕಿತ್ಸಾ ಕೇಂದ್ರಗಳಿಗೆ ಖಾಯಂ ಆಗಿ ಕೆಲಸ ನಿರ್ವಹಿಸುವ ಪಶು ವೈದ್ಯಾಧಿಕಾರಿ ಮತ್ತು ಇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿ ಇರುವ ವೈದ್ಯಾಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಲು ಯಾವಾಗ ಕ್ರಮ ವಹಿಸಲಾಗುವುದು;

(ಆ) ಕೆಲವು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಗುತ್ತಿಗೆ ಆಧಾರಿತ ವೈದ್ಯಾಧಿಕಾರಿಗಳನ್ನು ನೇಮಿಸಿದ್ದು ಎಷ್ಟು ಜನರು ಸೇವೆಗೆ ಹಾಜರಾಗಿರುತ್ತಾರೆ. ಉಳಿದ ಖಾಲಿ ಹುದ್ದೆಗಳಿಗೆ ಯಾವಾಗ ನೇಮಕಾತಿ ಮಾಡಲಾಗುವುದು;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಲವು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಕೆಲಸ ಮಾಡಲು ಡಿ ಗುಂಪಿನ ಸಿಬ್ಬಂದಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಕುರಿತು ಇಲಾಖೆಯಿಂದ ಯಾವ ಕ್ರಮವಹಿಸಲಾಗುತ್ತಿದೆ;

(ಈ) ಪಶು ಸಂಗೋಪನೆ ಇಲಾಖೆಯ ಕೆಲವು ವೈದ್ಯಾಧಿಕಾರಿ ಮತ್ತು ಸಿಬ್ಬಂದಿಗಳು ಇತರ ಇಲಾಖೆಗಳಲ್ಲಿ ನಿಯೋಜನೆಯಲ್ಲಿ ಇರುವವರ ಸಂಖ್ಯೆ ಎಷ್ಟು; ಅವರನ್ನು ಮಾತೃ ಇಲಾಖೆಗೆ ಕರೆಸಿಕೊಳ್ಳಲು ಕ್ರಮವಹಿಸಿಕೊಳ್ಳಲಾಗಿದೆಯೇ; ಯಾವಾಗ ಈ ಕುರಿತು ಕ್ರಮ ಜರುಗಿಸಲಾಗುವುದು?

## ವಿವಿಧ ಲೆಕ್ಕ ಶೀರ್ಷಿಕೆಯಡಿ ಮಂಜೂರು ಮಾಡಿರುವ ಅನುದಾನದ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೪೪ (೧೧೧೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಿನಾಂಕ:೦೧.೦೬.೨೦೨೩ ರಿಂದ ೩೦.೧೧.೨೦೨೪ ರವರೆಗೆ ವಿವಿಧ ಲೆಕ್ಕ ಶೀರ್ಷಿಕೆಯಡಿ ಹೊಸದಾಗಿ ರಸ್ತೆಗಳ ನಿರ್ಮಾಣ/ನಿರ್ವಹಣೆಗೆ ಮಂಜೂರು ಮಾಡಿರುವ/ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಕಳೆದ ಒಂದು ವರ್ಷದಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ಪ್ರಗತಿಯಲ್ಲಿರುವ ರಸ್ತೆ ಕಾಮಗಾರಿಗಳಿಗೆ ಮಂಜೂರು ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಇ) ಪ್ರಗತಿಯಲ್ಲಿರುವ ರಸ್ತೆ ಕಾಮಗಾರಿಗಳ ಪೈಕಿ ತಡೆಹಿಡಿಯಲಾಗಿರುವ ಮತ್ತು ರದ್ದುಪಡಿಸಿರುವ ಕಾಮಗಾರಿಗಳು ಎಷ್ಟು; ಈ ಕಾಮಗಾರಿಗಳ ಮೊತ್ತ ಎಷ್ಟು; ಕಾಮಗಾರಿಗಳನ್ನು ತಡೆಹಿಡಿಯಲು/ರದ್ದುಪಡಿಸಲು ಕಾರಣಗಳೇನು; ತಡೆಹಿಡಿಯಲಾಗಿದ್ದ ಮತ್ತು ರದ್ದುಗೊಂಡಿದ್ದ ಎಷ್ಟು ಕಾಮಗಾರಿಗಳಿಗೆ ಪುನಃ ಕಾರ್ಯಾದೇಶ ನೀಡಲಾಗಿದೆ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಈ) ಕಳೆದ ಒಂದೂವರೆ ವರ್ಷದಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆ ಮಾಡಿರುವ ಬಾಕಿ ಬಿಲ್ ಮೊತ್ತ ಎಷ್ಟು; (ವಿಭಾಗಾವಾರು ಮಾಹಿತಿ ನೀಡುವುದು) ಯಾವ ಕಾಲಮಿತಿಯೊಳಗೆ ಬಾಕಿ ಬಿಲ್ ಮೊತ್ತವನ್ನು ಬಿಡುಗಡೆ ಮಾಡಲಾಗುವುದು?

## ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳ ಮತ್ತು ಇತರ ಅಧಿಕಾರಿಗಳ ಕೋರ್ಟ್‌ಗಳಲ್ಲಿ ಬಾಕಿ ಇರುವ ಭೂ ವ್ಯಾಜ್ಯಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೪೫ (೧೧೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಕೋರ್ಟ್‌ಗಳಲ್ಲಿ ಬಾಕಿ ಇರುವ ಭೂ ವ್ಯಾಜ್ಯಗಳೆಷ್ಟು; ಈ ಪೈಕಿ ಕಳೆದ ೦೩ ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ನ್ಯಾಯಾಲಯಗಳಲ್ಲಿ ಅಂತಿಮ ವಿಚಾರಣೆ ಪೂರ್ಣಗೊಂಡು ಆದೇಶಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು; (ಪ್ರಕರಣಗಳ ವಿವರವನ್ನು ಜಿಲ್ಲಾವಾರು ನೀಡುವುದು)

(ಇ) ಭೂ ವ್ಯಾಜ್ಯ ಪ್ರಕರಣಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಮಾನದಂಡಗಳನ್ನು ರೂಪಿಸಿದೆಯೇ; ತ್ವರಿತ ಗತಿಯಲ್ಲಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಸರ್ಕಾರ ನೀಡಿರುವ ಸೂಚನೆ ಏನು;

(ಈ) ಸರ್ಕಾರದ ಸೂಚನೆ ಪಾಲನೆ ಮಾಡದ ಎಷ್ಟು ಜನ ಎ.ಸಿ., ಹಾಗೂ ತಹಶೀಲ್ದಾರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; ಕಳೆದ ೦೬ ತಿಂಗಳಿಂದ (೨೦೨೪, ನವೆಂಬರ್ ಅಂತ್ಯದವರೆಗೆ) ಎಷ್ಟು ಭೂ ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

## ರಾಜ್ಯದಲ್ಲಿ ರೇರಾ ಕಾಯ್ದೆ ಜಾರಿಗೆ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೪೬ (೧೧೧೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ರೇರಾ ಕಾಯ್ದೆ ಜಾರಿಗೆ ಬಂದಿದ್ದು ಯಾವಾಗ; ಕಾಯ್ದೆಯ ಮೂಲ ಉದ್ದೇಶವೇನು;

(ಆ) ಈ ಕಾಯ್ದೆ ಸಮರ್ಪಕವಾಗಿ ಜಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು; ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ರೇರಾ ಕಾಯ್ದೆಯಡಿ ಈವರೆಗೆ ಎಷ್ಟು ದೂರುಗಳು ದಾಖಲಾಗಿವೆ; ಈ ದೂರುಗಳ ಪೈಕಿ ಎಷ್ಟು ದೂರುಗಳಿಗೆ ಪರಿಹಾರ ಒದಗಿಸಲಾಗಿದೆ; ಬಾಕಿ ಇರುವ ದೂರುಗಳೆಷ್ಟು; (ಸಂಪೂರ್ಣ ವಿವರ ನೀಡುವುದು)

(ಈ) ಕಾಯ್ದೆ ಉಲ್ಲಂಘಿಸುವ ಬಿಲ್ಡರ್‌ಗಳಿಗೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಈವರೆಗೆ ವಿಧಿಸಿರುವ ದಂಡದ ಮೊತ್ತ ಎಷ್ಟು; ದಂಡದ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿ ಮಾಡಲಾಗಿದೆಯೇ;

(ಉ) ದಂಡದ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿ ಮಾಡದಿರಲು ಕಾರಣಗಳೇನು; ಬಾಕಿ ಇರುವ ದಂಡದ ಮೊತ್ತವನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಸಾರಿಗೆ ಇಲಾಖೆಯ ವ್ಯಾಪ್ತಿಗೆ ಒಳಪಡುವ ನಿಗಮಗಳ ಮಾಹಿತಿ ಬಗ್ಗೆ

**ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೯೪೭ (೧೧೩೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೯ ರಿಂದ ೨೦೨೩ನೇ ಸಾಲಿನವರೆಗೆ ಸಾರಿಗೆ ಇಲಾಖೆ ವ್ಯಾಪ್ತಿಗೆ ಬರುವ ಕೆ.ಎಸ್.ಆರ್.ಟಿ.ಸಿ.,

ಬಿ.ಎಂ.ಟಿ.ಸಿ., ಎನ್.ಡಬ್ಲ್ಯೂ.ಕೆ.ಎಸ್.ಆರ್.ಟಿ.ಸಿ. ಮತ್ತು ಎನ್.ಇ.ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗಳ ಮೇಲೆ ಇದ್ದ ಸಾಲವೆಷ್ಟು;

(ಆ) ೨೦೧೯ ರಿಂದ ೨೦೨೩ರವರೆಗೆ ಮೇಲ್ಕಂಡ ಸಾಲಿನಲ್ಲಿ ಈ ಸಂಸ್ಥೆಗಳಲ್ಲಿ ಕಡ್ಡಾಯ ಪಾವತಿಗಳ ನೌಕರರ ಭವಿಷ್ಯ ನಿಧಿ ವಿಮೆ ಇತ್ಯಾದಿಗಳನ್ನು ಪಾವತಿಸಿರುವ ಮೊತ್ತ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಇ) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ೨೦೨೩ ಪ್ರಣಾಳಿಕೆಯಲ್ಲಿ ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ನೌಕರರನ್ನು ಸಂಬಳ ಮತ್ತು ಸೇವೆಗಳ ವಿಷಯದಲ್ಲಿ ಸರ್ಕಾರಿ ನೌಕರರು ಮತ್ತು ಇತರೆ ಮಂಡಳಿಗಳು ಮತ್ತು ನಿಗಮಗಳಿಗೆ ಸಮಾನವಾಗಿ ಪರಿಗಣಿಸಲಾಗುವುದು ಎಂದು ಭರವಸೆ ನೀಡಲಾಗಿದ್ದು; ಈ ಭರವಸೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು; ಈ ಭರವಸೆಗೆ ಬೇಕಾಗಿರುವ ಹಣವೆಷ್ಟು; ಈ ಭರವಸೆ ಈಡೇರಿಕೆಯಿಂದ ಸರ್ಕಾರಕ್ಕೆ ಎಷ್ಟು ಹೊರೆಯಾಗುತ್ತದೆ;

(ಈ) ಪಂಚ ಗ್ಯಾರಂಟಿಯುಲ್ಲೊಂದಾದ ಶಕ್ತಿ ಯೋಜನೆಯನ್ನು ಮಹಿಳೆಯರಿಗೆ ಮಾತ್ರ ಸೀಮಿತವಾಗಿದ್ದು ಈ ಯೋಜನೆಯನ್ನು ಶಾಲಾ ಮತ್ತು ಕಾಲೇಜ್‌ನಲ್ಲಿ ವ್ಯಾಸ್ಯಾಂಗ ಮಾಡುತ್ತಿರುವ ಗಂಡು ಮಕ್ಕಳಿಗೆ ಮತ್ತು ಹಿರಿಯ ನಾಗರೀಕರಿಗೆ ವಿಸ್ತರಿಸಲು ಸರ್ಕಾರ ಯೋಜಿಸುತ್ತಿದೆಯೇ; ಹೌದಾದಲ್ಲಿ ಯಾವ ಕಾಲಾಮಿತಿಯಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುವುದು ಮತ್ತು ಈ ಯೋಜನೆಗೆ ತಗಲುವ ವೆಚ್ಚವೆಷ್ಟು? (ವಾರ್ಷಿಕ ವೆಚ್ಚದ ವಿವರವನ್ನು ನೀಡುವುದು)

# ಲೋಕೋಪಯೋಗಿ ವ್ಯಾಪ್ತಿಯ ಕರ್ನಾಟಕ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಕುರಿತು

**ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೯೪೮ (೧೧೩೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು ಅಧೀನ ಕಾರ್ಯದರ್ಶಿಗಳು ಮತ್ತು ಇಂಜಿನಿಯರ್‌ಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ;

(ಆ) ಈ ಇಲಾಖೆಯಲ್ಲಿ ಎಲ್ಲಾ ವರ್ಗದ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಪ್ರತ್ಯೇಕವಾಗಿ "ಕರ್ನಾಟಕ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ"ವನ್ನು ರಚಿಸುವ ಅಗತ್ಯವಿತ್ತೇ; ಈ ಪ್ರಾಧಿಕಾರವನ್ನು ರಚಿಸಲು ಯಾವ ಮಾನದಂಡಗಳನ್ನು ಪಾಲಿಸಲಾಗಿದೆ;

(ಇ) ಈ ಇಲಾಖೆಯಲ್ಲಿ ಉನ್ನತ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಷ್ಟು ಅಧಿಕಾರಿಗಳಿದ್ದರೂ ಈ ಪ್ರಾಧಿಕಾರಕ್ಕೆ ಒಬ್ಬ ನಿವೃತ್ತ ಅಧಿಕಾರಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ನೇಮಿಸಲು ಕಾರಣಗಳೇನು;

(ಈ) ಈ ಪ್ರಾಧಿಕಾರ ರಚಿಸಿ ಕಛೇರಿ ಚಟುವಟಿಕೆಗಳನ್ನು ಕೈಗೊಳ್ಳಲು ಕಛೇರಿಯನ್ನು ಎಲ್ಲಿ ಸ್ಥಾಪಿಸಲಾಗಿದೆ: ಮತ್ತು ಈ ಕಛೇರಿಯ ನವೀಕರಣಕ್ಕಾಗಿ ಖರ್ಚು ಮಾಡಲಾದ ಮೊತ್ತವೆಷ್ಟು: ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಿ ನವೀಕರಿಸುವ ಅವಶ್ಯಕತೆಯಿದೆಯೇ;

(ಉ) ಈ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಯಾರನ್ನು ನೇಮಿಸಲಾಗಿದೆ ಮತ್ತು ಈ ಪ್ರಾಧಿಕಾರದ ಸದಸ್ಯರು ಯಾರು?

## ಹಕ್ಕು ಪತ್ರ ವಿತರಣೆ ಕುರಿತು

**ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೯೪೯ (೧೧೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಹಲವು ಜಿಲ್ಲೆಗಳಲ್ಲಿ ವಿಶೇಷವಾಗಿ ತುಮಕೂರು, ಚಿತ್ರದುರ್ಗ, ಹಾಸನ, ಬಳ್ಳಾರಿ, ದಾವಣಗೆರೆ. ಹುಬ್ಬಳ್ಳಿ-ಧಾರವಾಡ, ಹಾವೇರಿ, ಬೆಳಗಾವಿ, ಕಲಬುರಗಿ, ಯಾದಗಿರಿ ಈ ಜಿಲ್ಲೆಗಳಲ್ಲಿ ಇರುವ ಗೊಲ್ಲರಹಟ್ಟಿಗಳಲ್ಲಿ ವಾಸಿಸುವ ನಾಗರೀಕರು ವಾಸಿಸುವ ಸ್ಥಳಗಳಿಗೆ ಸರ್ಕಾರದ ವತಿಯಿಂದ ಹಕ್ಕು ಪತ್ರಗಳ ವಿತರಣೆ ಮತ್ತು ಈ ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗುವುದು ಎಂದು ಜುಲೈ-೨೦೨೪ ಅಧಿವೇಶನದಲ್ಲಿ ಸರ್ಕಾರವು ಭರವಸೆ ನೀಡಿದ್ದರೂ ಯಾವ ಯಾವ ಜಿಲ್ಲೆಯ ಜಿಲ್ಲಾಧಿಕಾರಿಗಳು ಕ್ರಮ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ; ಸಲ್ಲಿಸದಿದ್ದಲ್ಲಿ, ಕಾರಣಗಳೇನು; (ವಿವರ ಒದಗಿಸುವುದು)

(ಆ) ಇಲ್ಲಿಯವರೆಗೆ ಗೊಲ್ಲರಹಟ್ಟಿಗಳಲ್ಲಿ ವಾಸಿಸುವ ನಾಗರೀಕರು, ವಾಸಿಸುವ ಸ್ಥಳಗಳಿಗೆ ಸರ್ಕಾರದ ವತಿಯಿಂದ ಎಷ್ಟು ಹಕ್ಕು ಪತ್ರಗಳ ವಿತರಣೆ ಮಾಡಲಾಗಿದೆ; ಮತ್ತು ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ೧೩೦೦ಕ್ಕಿಂತಲೂ ಹೆಚ್ಚು ಗೊಲ್ಲರಹಟ್ಟಿಗಳು ಇದ್ದು, ಕಳೆದ ಅಧಿವೇಶನದಲ್ಲಿ ರಾಜ್ಯದಲ್ಲಿ ೩೦೦ ಗೊಲ್ಲರಹಟ್ಟಿಗಳು ಇವೆ ಎಂದು ತಿಳಿಸಲಾಗಿದ್ದು ಈ ವ್ಯತ್ಯಾಸಕ್ಕೆ ಕಾರಣಗಳೇನು: ಸಂಬಂಧಪಟ್ಟ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದ ಸಿಬ್ಬಂದಿ ವರ್ಗಗಳಿಂದ ಸರಿಯಾದ ಮಾಹಿತಿ ನೀಡಲಾಗಿದೆಯೇ ಎಂದು ಇಲಾಖೆಯಿಂದ ಪರಿಶೀಲಿಸಲಾಗಿದೆಯೇ; ರಾಜ್ಯದಲ್ಲಿ ಎಷ್ಟು ಗೊಲ್ಲರಹಟ್ಟಿಗಳಿವೆ ಎಂಬ ನಿಖರವಾದ ಮಾಹಿತಿಯನ್ನು ಸರ್ಕಾರದ ದಾಖಲಾತಿಗಳಲ್ಲಿ ನಮೂದಿಸಲಾಗಿದೆಯೇ?

## ವಸತಿ ರೈತರಿಗೆ ವಸತಿ ಕಲ್ಪಿಸುವ ಬಗ್ಗೆ

**ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೯೫೦ (೧೧೩೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೨೪ರ ವೇಳೆಗೆ ರಾಜ್ಯದ ಎಲ್ಲಾ ನಿರಾಶ್ರಿತ/ವಸತಿ ರಹಿತ ನಾಗರೀಕರಿಗೆ ವಸತಿ ಒದಗಿಸುವ ಪ್ರಸ್ತಾವನೆ ರಾಜ್ಯ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಉದ್ದೇಶಕ್ಕಾಗಿ ಇದುವರೆಗೆ ರೂಪಿಸಲಾದ ವಸತಿ ಯೋಜನೆಗಳು ಯಾವುವು; ಮತ್ತು ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು;

(ಆ) ೨೦೨೪ರ ವೇಳೆಗೆ ವಸತಿಯ ಅಂದಾಜು ಬೇಡಿಕೆ ಎಷ್ಟು; ಇದಕ್ಕೆ ಯಾವ ರೀತಿಯ ಸಿದ್ಧತೆಗಳನ್ನು ರೂಪಿಸಿಕೊಂಡಿದೆ;

(ಇ) ಈ ಹಿಂದೆ ಶಾಸಕರಿಗೆ ಮತ್ತು ಸಂಸದರಿಗೆ ವಸತಿ/ನಗರಾಭಿವೃದ್ಧಿ ಇಲಾಖೆಯಿಂದ 'ಜಿ' ವರ್ಗದ ನಿವೇಶನಗಳನ್ನು ಮನೆಗಳನ್ನು ಹಂಚಿಕೆ ಮಾಡಲಾಗುತ್ತಿತ್ತು. ಆದರೆ ಆ ಯೋಜನೆಯನ್ನು ಯಾವ ಕಾರಣಕ್ಕೆ ರದ್ದುಗೊಳಿಸಲಾಗಿದೆ: ಶಾಸಕರು ಮತ್ತು ಸಂಸದರು ಸರ್ಕಾರದಿಂದ ನಿವೇಶನಗಳನ್ನು/ಮನೆಗಳನ್ನು ಪಡೆಯಬೇಕಾದಲ್ಲಿ,

ಯಾವ ಮಾನದಂಡಗಳು ಅಥವಾ ಯೋಜನೆಯಡಿ ಅರ್ಜಿ ಸಲ್ಲಿಸಬಹುದಾಗಿದೆ;

(ಈ) ವಸತಿ ಇಲಾಖೆಯ ಅಧೀನ ಸಂಸ್ಥೆಯಿಂದ ನಿರ್ಮಿಸಲಾಗಿರುವ ವಿಲ್ಲಾಗಳನ್ನು (Villas) ಹಂಚಿಕೆ ಮಾಡುವಲ್ಲಿ ಯಾವ ಮಾನದಂಡಗಳನ್ನು ಪಾಲಿಸಲಾಗಿದೆ ಮತ್ತು ಈ ಯೋಜನೆಯನ್ನು ಯಾವ ವರ್ಗದ ಜನಾಂಗದವರಿಗೆ ಮೀಸಲಿಡಲಾಗಿದೆ? (ಮಾಹಿತಿ ನೀಡುವುದು)

## ಗಣಿಗಾರಿಕೆ ಪ್ರದೇಶಗಳಲ್ಲಿ ಮೀನುಗಾರಿಕೆಯನ್ನು ಉತ್ತೇಜಿಸುವ ಬಗ್ಗೆ

**ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೯೫೧ (೧೧೩೪) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೨೪-೨೫ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಗಣಿಗಾರಿಕೆ ಪೀಡಿತ ಪ್ರದೇಶಗಳಾದ ಚಿತ್ರದುರ್ಗ ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಮೀನುಗಾರಿಕೆಯನ್ನು ಉತ್ತೇಜಿಸಲು ಸರ್ಕಾರವು ರೂ.೦೬ ಕೋಟಿಗಳ ಅನುದಾನವನ್ನು ಘೋಷಿಸಿದ್ದು ಸದರಿ ಅನುದಾನದ ಮೊತ್ತವನ್ನು ಯಾವ ಯಾವ ಕಾಮಗಾರಿಗಳಿಗೆ ಉಪಯೋಗಿಸಲಾಗುತ್ತದೆ;

(ಆ) ಇಲ್ಲಿಯವರೆಗೆ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳದಿರುವುದಕ್ಕೆ ಕಾರಣಗಳೇನು;

(ಇ) ನಬಾರ್ಡ್ ಬೆಂಬಲದೊಂದಿಗೆ ರೂ.೨೦ ಕೋಟಿ ವೆಚ್ಚದಲ್ಲಿ ೧೬ ಮೀನು ಬೀಜ ಉತ್ಪಾದನಾ ಕೇಂದ್ರಗಳ ಅಧುನೀಕರಣವನ್ನು

ಕೈಗೊಳ್ಳಲಾಗುವುದು ಎಂದು ಆಯವ್ಯಯದಲ್ಲಿ ಘೋಷಿಸಿದ್ದು, ಪ್ರಸ್ತುತ ಯಾವ ಹಂತದಲ್ಲಿದೆ? (ಮಾಹಿತಿ ನೀಡುವುದು)

## ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿನ ವಕ್ಫ್ ಇಲಾಖೆಯು ಹೊಂದಿರುವ ಆಸ್ತಿ ಕುರಿತು

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-**

೯೫೨ (೧೦೧೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ವಕ್ಫ್ ಇಲಾಖೆಯು ಹೊಂದಿರುವ ಒಟ್ಟು ಆಸ್ತಿ ಎಷ್ಟು; (ಸ್ಥಳವಾರು/ಗ್ರಾಮ/ವಿಳಾಸ/ಸರ್ವೆವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಆಸ್ತಿಗಳನ್ನು ಯಾವ ವರ್ಷದಲ್ಲಿ ಯಾವ ಆಧಾರದ ಮೇಲೆ ವಕ್ಫ್ ಮಂಡಳಿಗಳಿಗೆ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ೦೨ ವರ್ಷಗಳಲ್ಲಿ ಎಷ್ಟು ಎಕರೆ/ಜಮೀನು ಆಸ್ತಿಗಳನ್ನು ವಕ್ಫ್ ಮಂಡಳಿ ಹೆಸರಿಗೆ ಪಡೆಯಲಾಗಿದೆ; ೦೨ ವರ್ಷಗಳಲ್ಲಿ ವಕ್ಫ್ ಮಂಡಳಿ ಹೆಸರಿಗೆ ಸೇರಿಸಿದ ಒಟ್ಟು ಆಸ್ತಿ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಸರ್ಕಾರದ ಆಸ್ತಿಗಳನ್ನು ಯಾವ ಉದ್ದೇಶಕ್ಕಾಗಿ ವಕ್ಫ್ ಮಂಡಳಿಗೆ ನೀಡಲಾಗುತ್ತದೆ; ಹಾಗೂ ಸದರಿ ಸಾರ್ವಜನಿಕರ ಅಥವಾ ಸರ್ಕಾರದ ಜಾಗವನ್ನು ವಕ್ಫ್ ಮಂಡಳಿಗೆ ಸೇರಿಸಿಕೊಳ್ಳಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಸದರಿ ಜಿಲ್ಲೆಗಳಲ್ಲಿರುವ ವಕ್ಫ್ ಆಸ್ತಿಗಳನ್ನು ಯಾವ-ಯಾವ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ? (ಸೂಕ್ತ ಕಾರಣಗಳೊಂದಿಗೆ ವಿವರಿಸುವುದು)

## ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿನ ಒಟ್ಟು ಸಂಚರಿಸುವ ಬಸ್ಸುಗಳ ಕುರಿತು

**ಶ್ರೀ ನಿರಾಣಿ ಹಣವಂತ ರುದ್ರಪ್ಪ (ಪದವೀಧರರ ಕ್ಷೇತ್ರ):-**

೯೫೩ (೧೦೧೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಒಟ್ಟು ಸಂಚಾರ ಮಾಡುವ ಬಸ್ಸುಗಳ ಸಂಖ್ಯೆ ಎಷ್ಟು; ನೂತನವಾಗಿ ಎಷ್ಟು ಬಸ್ಸುಗಳು ಓಡಾಡುತ್ತಿವೆ; ದುರಸ್ತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಜಿಲ್ಲೆಗಳಲ್ಲಿ ತಾಲ್ಲೂಕಿನಿಂದ ಹಳ್ಳಿಗಳ ಮಾರ್ಗದ ಸಂಚಾರಕ್ಕೆ ಹಳೆಯ ಬಸ್‌ಗಳನ್ನು ನೀಡಲು ಕಾರಣಗಳೇನು; ಹೊಸ ಬಸ್ ನೀಡಲು ಇರುವ ಅಡಚಣೆಗಳೇನು; (ಸೂಕ್ತ ಕಾರಣಗಳೊಂದಿಗೆ ವಿವರಿಸುವುದು)

(ಇ) ಹಬ್ಬದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ರಾಜಹಂಸ, ಕಲ್ಯಾಣ ರಥ, ಐರಾವತ ಹಾಗೂ ಇತರೆ ಸರ್ಕಾರಿ ಸ್ಲೀಪರ್ ಬಸ್‌ಗಳು ಸಂಚರಿಸುತ್ತಿವೆಯೇ; ಸಂಚರಿಸಿದ್ದಲ್ಲಿ, ಯಾವ-ಯಾವ ಹಬ್ಬಗಳಿಗೆ ಎಷ್ಟು ಬಸ್‌ಗಳನ್ನು ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಹಳ್ಳಿಗಳಿಗೆ ಸಂಚರಿಸುವ ಬಸ್ಸುಗಳು ಬಹಳ ಹಳೆಯ ಬಸ್‌ಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನೂತನ ಬಸ್ ನೀಡುವ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ನೀಡಲಾಗುವುದು;

(ಉ) ಹಳ್ಳಿಗಳಲ್ಲಿರುವ ಸಾರ್ವಜನಿಕರ ಹಿತದೃಷ್ಟಿಯಿಂದ ನೂತನ ಬಸ್‌ಗಳನ್ನು ನೀಡಿ ಸುಗಮ ಸಂಚಾರಕ್ಕೆ ಸರ್ಕಾರವು ಅನುಕೂಲ ಮಾಡುವುದೇ? (ವಿವರ ನೀಡುವುದು)

## ಬಾಗಲಕೋಟೆ ವಿಜಯಪುರ ಬೆಳಗಾವಿ ಜಿಲ್ಲೆಗಳಲ್ಲಿನ ದೇವಸ್ಥಾನ ಮತ್ತು ಮಠಗಳಿಗೆ ನೀಡಿದ ಅನುದಾನದ ಕುರಿತು

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-**

೯೫೪ (೧೦೮೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೨ ವರ್ಷಗಳಲ್ಲಿ ಬಾಗಲಕೋಟೆ, ವಿಜಯಪುರ, ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮುಜರಾಯಿ ಇಲಾಖೆಯಿಂದ ಒಟ್ಟು ನೀಡಿದ ಅನುದಾನ ಎಷ್ಟು; (ಜಿಲ್ಲಾವಾರು/ಕ್ಷೇತ್ರವಾರು ಕಾಮಗಾರಿವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೨೨-೨೩ ರಿಂದ ಇಲ್ಲಿಯವರೆಗೆ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ದೇವಸ್ಥಾನಗಳ/ಮಠಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆಯಾಗದ ಒಟ್ಟು ಅನುದಾನ ಎಷ್ಟು; ಪೂರ್ಣಗೊಂಡ ಮತ್ತು ಬಾಕಿ ಉಳಿದ ಕಾಮಗಾರಿಗಳೆಷ್ಟು; (ಮಾಹಿತಿ ನೀಡುವುದು)

(ಇ) ಸದರಿ ಅವಧಿಯಲ್ಲಿ ದೇವಸ್ಥಾನಗಳ/ಮಠಗಳ ಜೀರ್ಣೋದ್ಧಾರಕ್ಕಾಗಿ ನೀಡಿದ ಅನುದಾನದಲ್ಲಿ ಎಷ್ಟು ದೇವಸ್ಥಾನಗಳ/ಮಠಗಳ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಕೆಯಾಗಿವೆ; ಸಲ್ಲಿಕೆಯಾದ ಪ್ರಮಾಣ ಪತ್ರಗಳ ಪೈಕಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಬಾಕಿ ಉಳಿಸಿಕೊಂಡ

ಮೊತ್ತ ಎಷ್ಟು; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಕಾಮಗಾರಿ ಪೂರ್ಣಗೊಂಡರೂ ಸಹ ಅನುದಾನ ಬಿಡುಗಡೆ ಮಾಡದೆ ಇರುವ ಒಟ್ಟು ಕಾಮಗಾರಿಗಳೆಷ್ಟು; ಯಾವ ಕಾಲಮಿತಿಯೊಳಗೆ ಅನುದಾನ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

(ಉ) ದೇವಸ್ಥಾನಗಳ/ಮಠಗಳ ಜೀರ್ಣೋದ್ಧಾರಕ್ಕಾಗಿ ಹಣ ನೀಡಲು ಅನುದಾನದ ಕೊರತೆ ಇರುವುದು ನಿಜವೇ? (ಮಾಹಿತಿ ನೀಡುವುದು)

## ಮೂಲಗೇಣಿ ಒಕ್ಕಲುಗಳಿಗೆ ಮಾಲೀಕತ್ವ ನೀಡುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ. (ವಿಧಾನಸಭೆಯಿಂದ ಚುನಾಯಿತರಾದವರು):-**

೯೫೫ (೧೦೫೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರಾವಳಿ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ, ಮೂಲಗೇಣಿ ಒಕ್ಕಲುಗಳಿಗೆ ಮಾಲೀಕತ್ವ ನೀಡುವ ಕಾಯ್ದೆ ಸಂಪೂರ್ಣವಾಗಿ ಜಾರಿಯಾಗಿ ಮೂಲಗೇಣಿ ಒಕ್ಕಲುಗಳಿಗೆ ನ್ಯಾಯ ಒದಗಿಸಲಾಗಿದೆಯೇ;

(ಆ) ಮೂಲಗೇಣಿ ಒಕ್ಕಲುಗಳಿಗೆ ಮಾಲೀಕತ್ವ ನೀಡುವ ವಿಚಾರದಲ್ಲಿ ಇದುವರೆಗೆ ಕಂದಾಯ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಯಾವ ಕಾಲಮಿತಿಯೊಳಗೆ ಮೂಲಗೇಣಿ ಒಕ್ಕಲುಗಳಿಗೆ ಜಮೀನಿನ ಪೂರ್ಣ ಮಾಲೀಕತ್ವ ನೀಡಿ ಆ ಮೂಲಕ ಹಲವಾರು

ದಶಕಗಳಿಂದ ತ್ರಿಶಂಕು ಸ್ಥಿತಿಯಲ್ಲಿ ಬದುಕುತ್ತಿರುವ ಮೂಲಗೇಣಿದಾರರಿಗೆ ನ್ಯಾಯ ಒದಗಿಸಲಾಗುವುದೇ?

## ಇ-ಖಾತಾ ವಿತರಣೆಯಲ್ಲಿ ಸಮಸ್ಯೆಯಾಗಿರುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ. (ವಿಧಾನಸಭೆಯಿಂದ ಚುನಾಯಿತರಾದವರು):-**

೯೫೬ (೧೦೫೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಇ-ಖಾತಾ ಸಮಸ್ಯೆಯು ಜನ ಸಾಮಾನ್ಯರನ್ನು ಸಂಕಷ್ಟಕ್ಕೆ ದೂಡುವುದರ ಜೊತೆಗೆ ರಾಜಸ್ವ ಸಂಗ್ರಹಕ್ಕೂ ತೊಂದರೆಯನ್ನು ಉಂಟುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಇ-ಖಾತಾ ವಿತರಣೆ ಪ್ರಕ್ರಿಯೆ ಸುಗಮಗೊಳಿಸಲು, ಈಗಿರುವ ಅಡೆತಡೆಗಳನ್ನು ನಿವಾರಿಸಲು ಹಾಗೂ ಭವಿಷ್ಯದಲ್ಲಿ ಎದುರಾಗಬಹುದಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಸರ್ಕಾರ ಇದುವರೆಗೆ ಯಾವೆಲ್ಲಾ ಕ್ರಮಗಳನ್ನು ಕೈಗೊಂಡಿದೆ;

(ಇ) ಯಾವ ಕಾಲಮಿತಿಯೊಳಗೆ, ಪ್ರಸ್ತುತ ಇ-ಖಾತಾ ವಿತರಣೆಗೆ ಪ್ರಕ್ರಿಯೆಗೆ ಅಡ್ಡಿಯಾಗಿರುವ ವಿವಿಧ ರೀತಿಯ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸಲಾಗುವುದು ಹಾಗೂ ಸದರಿ ಪ್ರಕ್ರಿಯೆಯನ್ನು ಸರಳ, ಜನಸ್ನೇಹಿ ಮತ್ತು ತ್ವರಿತಗೊಳಿಸಲು ಅಗತ್ಯ ಕ್ರಮ ವಹಿಸಲಾಗುವುದೇ?

## ಕೊಯ್ಲಾದಲ್ಲಿನ ಪಶುಸಂಗೋಪನಾ ಕಾಲೇಜಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ. (ವಿಧಾನಸಭೆಯಿಂದ ಚುನಾಯಿತರಾದವರು):-**

೯೫೭ (೧೦೬೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೊಯ್ಲಾದಲ್ಲಿನ ಪಶುಸಂಗೋಪನಾ ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಗೊಂಡಿವೆಯೇ;

(ಆ) ಪ್ರಾರಂಭಗೊಂಡಿದ್ದಲ್ಲಿ, ಸದರಿ ಕಾಲೇಜಿಗೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಪೂರ್ಣ ಮಟ್ಟದಲ್ಲಿ ಈಗಾಗಲೇ ಒದಗಿಸಲಾಗಿದೆಯೇ; (ವಿವರ ನೀಡುವುದು)

(ಇ) ಇದುವರೆಗೂ ಒದಗಿಸದಿದ್ದಲ್ಲಿ, ಒದಗಿಸಲು ಬಾಕಿ ಉಳಿದಿರುವ ಮೂಲಭೂತ ಸೌಕರ್ಯಗಳಾವುವು; ಇದಕ್ಕೆ ಬೇಕಾಗಿರುವ ಅನುದಾನವೆಷ್ಟು; (ವಿವರ ನೀಡುವುದು)

(ಈ) ಯಾವ ಕಾಲಮಿತಿಯೊಳಗೆ ಬಾಕಿ ಉಳಿದಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು?

## ಹಟ್ಟಿ ಪಟ್ಟಣಕ್ಕೆ ಬಸ್ ಡಿಪೋ ಮತ್ತು ಕಟ್ಟಡ ಮಂಜೂರು ಮಾಡುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ. (ವಿಧಾನಸಭೆಯಿಂದ ಚುನಾಯಿತರಾದವರು):-**

೯೫೮ (೧೦೬೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಹಾಗೂ ಹಟ್ಟಿ ಪಟ್ಟಣದಿಂದ ಲಿಂಗಸೂರು, ಧಾರವಾಡ, ಹುಬ್ಬಳ್ಳಿ ಹಾಗೂ ಇನ್ನೂ ಮುಂತಾದ ಹಲವಾರು ಪಟ್ಟಣಗಳಿಗೆ ಪ್ರತಿನಿತ್ಯ ಸಾವಿರಾರು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಸಲುವಾಗಿ ಹಾಗೂ ಸಾರ್ವಜನಿಕರು ತಮ್ಮ ಕೆಲಸದ ನಿಮಿತ್ತ ಪ್ರಯಾಣ ಮಾಡುತ್ತಿದ್ದು, ಸರಿಯಾದ ಬಸ್ ಸಂಚಾರದ ಸೌಕರ್ಯ ಇಲ್ಲದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಹಟ್ಟಿ ಪಟ್ಟಣಕ್ಕೆ ಬಸ್ ಡಿಪೋ ಮತ್ತು ಕಟ್ಟಡ ಮಂಜೂರು ಮಾಡಿ ಅದು ಕಾರ್ಯಾರಂಭ ಮಾಡಲು ಇದುವರೆವಿಗೂ ಸರ್ಕಾರ ಅಗತ್ಯ ಕ್ರಮವಹಿಸದಿರಲು ಕಾರಣಗಳೇನು; ಯಾವ ಕಾಲಮಿತಿಯೊಳಗೆ ಬಸ್ ಡಿಪೋ ಮತ್ತು ಕಟ್ಟಡ ಮಂಜೂರು ಮಾಡಿ ಕಾರ್ಯಾರಂಭ ಮಾಡಲು ಈ ಬಗ್ಗೆ ಸರ್ಕಾರ ಅಗತ್ಯ ಕ್ರಮ ವಹಿಸುವುದು?

## ಮಳೆ ಮತ್ತು ನೆರೆಯಿಂದ ಮೃತಪಟ್ಟವರಿಗೆ ಹಾಗೂ ಆಗಿರುವ ಬೆಳೆಹಾನಿಗೆ ಪರಿಹಾರ ಒದಗಿಸುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):-**

೯೫೯ (೧೦೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಈ ವರ್ಷ ಸುರಿದ ಮಳೆ ಹಾಗೂ ನೆರೆಯಿಂದಾಗಿ ಎಷ್ಟು ಜನ ಮೃತಪಟ್ಟಿದ್ದಾರೆ. ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಆಗಿದೆ; ಸಾರ್ವಜನಿಕ ಆಸ್ತಿ-ಪಾಸ್ತಿಗೆ ಆಗಿರುವ ನಷ್ಟ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

(ಆ) ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆಯೇ; ಎಷ್ಟು ಜನರಿಗೆ ಪರಿಹಾರ ನೀಡಲು ಬಾಕಿ ಇದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ಬೆಳೆ ಹಾನಿ ಕುರಿತು ಜಿಲ್ಲಾವಾರು ಸಮಗ್ರ ಜಂಟಿ ಸಮೀಕ್ಷೆ ಪೂರ್ಣಗೊಂಡಿದೆಯೇ; ಹಾಗಿದ್ದಲ್ಲಿ ಬೆಳೆ ಹಾನಿ ಎಷ್ಟು; ಬೆಳೆ ಹಾನಿಗೆ ನಿಗದಿಪಡಿಸಿರುವ ಮೊತ್ತ ಎಷ್ಟು; (ಬೆಳೆ ಹಾನಿಯ ವಿವರವನ್ನು ಜಿಲ್ಲಾವಾರು ನೀಡುವುದು)

(ಈ) ಬೆಳೆ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ಹಾಗೂ ಆಸ್ತಿ–ಪಾಸ್ತಿ ನಷ್ಟಕ್ಕೀಡಾದವರಿಗೆ ಸರ್ಕಾರ ನೀಡಿರುವ ಪರಿಹಾರ ಮೊತ್ತ ಎಷ್ಟು; ಈವರೆಗೆ ಪರಿಹಾರದ ಮೊತ್ತ ಬಿಡುಗಡೆ ಮಾಡಿರುವುದಿಲ್ಲ ಯಾವಾಗ ಬಿಡುಗಡೆ ಮಾಡಲಾಗುವುದು? (ನೀಡಿರುವ ಪರಿಹಾರದ ವಿವರವನ್ನು ಜಿಲ್ಲಾವಾರು ನೀಡುವುದು)

## ಚಿಕ್ಕಮಗಳೂರು ನಗರಕ್ಕೆ ಪಾಸ್ ಹಾಗೂ ಚತುಷ್ಪಥ ರಸ್ತೆ ನಿರ್ಮಾಣದ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):–**

೯೭೦ (೧೦೪೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಮೂಲಕ ಹಾದು ಹೋಗುವ ಕಡೂರು ಮೂಡಿಗೆರೆ ಎನ್.ಹೆಚ್.೧೭೩ ರಸ್ತೆಯಲ್ಲಿ ಚಿಕ್ಕಮಗಳೂರು ನಗರಕ್ಕೆ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

(ಆ) ಚಿಕ್ಕಮಗಳೂರು ನಗರದ ಮೂಲಕ ಹಾದು ಹೋಗುವ ಎ.ಐ.ಟಿ ಸರ್ಕಲ್ ಬಿಳಿಕೆರೆ ಎನ್.ಹೆಚ್.೩೭೩ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಈ ಎರಡೂ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆಯೇ; ಅನುಮೋದನೆ ದೊರೆಕಿದ್ದು ಯಾವಾಗ; (ಅನುಮೋದನೆಯ ಪ್ರತಿಯನ್ನು ಒದಗಿಸಿ)

(ಈ) ಈ ಯೋಜನೆಗಳ ಅಂದಾಜು ಮೊತ್ತವೆಷ್ಟು; ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು: ಎಷ್ಟು ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುವುದು; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಯೋಜನಾವಾರು ವಿವರ ನೀಡುವುದು)

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುವ ಅನುದಾನದ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):-**

೯೭೧ (೧೦೪೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೫ ವರ್ಷದಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಚಿಕ್ಕಮಗಳೂರು ಜಿಲ್ಲೆಗೆ ಮಂಜೂರು ಮಾಡಿರುವ ಅನುದಾನವೆಷ್ಟು;

(ಆ) ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಪೈಕಿ ಪೂರ್ಣಗೊಂಡಿರುವ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವುವು; ಬಾಕಿ ಇರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು; (ಕಾಮಗಾರಿವಾರು ವಿವರ ನೀಡುವುದು)

(ಈ) ಈ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಈವರೆಗೆ ವೆಚ್ಚ ಮಾಡಿರುವ ಹಣ ಎಷ್ಟು; ಬಾಕಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

## ವಿವಿಧ ವಸತಿ ಯೋಜನೆಯಡಿ ಮಂಜೂರಾಗಿರುವ ಮನೆಗಳ ನಿರ್ಮಾಣದ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):-**

೯೭೨ (೧೦೫೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ನಾಲ್ಕು ವರ್ಷದಿಂದ ಚಿಕ್ಕಮಗಳೂರು ಜಿಲ್ಲೆಗೆ ವಿವಿಧ ವಸತಿ ಯೋಜನೆಗಳಲ್ಲಿ ಮಂಜೂರಾಗಿರುವ ಮನೆಗಳಿಷ್ಟು; (ವಿಧಾನಸಭ ಕ್ಷೇತ್ರವಾರು ಮಾಹಿತಿ ಒದಗಿಸುವುದು)

(ಆ) ಈ ಪೈಕಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು; ರದ್ದಾಗಿರುವ (ಬ್ಲಾಕ್) ಮನೆಗಳ ಸಂಖ್ಯೆ ಎಷ್ಟು; ರದ್ದಾಗಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು)

(ಇ) ವಿವಿಧ ಕಾರಣಗಳಿಂದ ಬಿಲ್ ತಡೆಹಿಡಿದಿರುವ ಪ್ರಕರಣಗಳೆಷ್ಟು; ಯಾವ ಯಾವ ಕಾರಣಗಳಿಗೆ ಬಿಲ್ ತಡೆ ಹಿಡಿಯಲಾಗಿದೆ; (ವಿಧಾನಸಭೆ ಕ್ಷೇತ್ರವಾರು ವಿವರ ಒದಗಿಸುವುದು)

(ಈ) ತಡೆಹಿಡಿದಿರುವ ಬಿಲ್ಲನ್ನು ಯಾವಾಗ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗುವುದು?

## ರಾಜ್ಯದಲ್ಲಿರುವ ಮದರಸಾಗಳ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):-**

೯೬೩ (೧೦೫೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಮದರಸಾಗಳ ಸಂಖ್ಯೆ ಎಷ್ಟು; ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಮದರಸಾಗಳನ್ನು ನಡೆಸಲು ಅನುಮತಿ ನೀಡುವವರು ಯಾರು: ಪ್ರಸ್ತುತ ಅಸ್ತಿತ್ವದಲ್ಲಿರುವ ಮದರಸಾಗಳಿಗೆ ಅನುಮತಿ ಪಡೆಯಲಾಗಿದೆಯೇ; ಅನುಮತಿ ಪಡೆಯದೆ ನಡೆಯುತ್ತಿರುವ ಮದರಸಾಗಳೆಷ್ಟು;

(ಇ) ಮದರಸಾಗಳಲ್ಲಿ ಯಾವ ರೀತಿಯ ಶಿಕ್ಷಣ ನೀಡಲಾಗುತ್ತಿದೆ ಬೋಧಿಸುತ್ತಿರುವ ಪಠ್ಯಕ್ರಮವೇನು; (ವಿವರ ನೀಡುವುದು)

(ಈ) ಮದರಸಾಗಳಲ್ಲಿ ನೀಡುತ್ತಿರುವ ಶಿಕ್ಷಣದ ಕುರಿತು ಸರ್ಕಾರ ಪರಿಶೀಲನೆ ನಡೆಸಿದೆಯೇ ಇದರ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ; ಹಾಗಿದ್ದಲ್ಲಿ. ಪರಿಶೀಲನೆ ನಡೆಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಉ) ಕಾನೂನುಗಳನ್ನು ಉಲ್ಲಂಘಿಸಿ ಮದರಸಾಗಳು ಕಾರ್ಯನಿರ್ವಹಿಸುತ್ತಿರುವ ಕುರಿತು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಮದರಸಾಗಳು ಹಾಗೂ ಮದರಸಾಗಳಲ್ಲಿ ನೀಡುತ್ತಿರುವ ಶಿಕ್ಷಣ ಕುರಿತು ಕ್ರಮ ಕೈಗೊಳ್ಳುವ ಕುರಿತು. ಸರ್ಕಾರದ ನಿಲುವೇನು?

## ಮರಗಳ ವಿವರ ಮತ್ತು ಸಂಖ್ಯೆಯನ್ನು ಪಹಣಿಯಲ್ಲಿ ನಮೂದಿಸುವ ಬಗ್ಗೆ

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೯೬೪ (೧೦೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರೈತರು ತಮ್ಮ ಜಮೀನುಗಳಲ್ಲಿ, ಜಮೀನುಗಳ ಬದುಗಳಲ್ಲಿ ಮತ್ತು ಜಮೀನಿನ ಹಳ್ಳ ಕೊಳ್ಳ ಸಮೀಪ ಬೆಳೆದಿರುವ ತೇಗ, ಬೀಟಿ. ಹುಣಸೆ, ಶ್ರೀಗಂಧ, ಬೇವು ಮೊದಲಾದ ಮರಗಳ ವಿವರ ಮತ್ತು ಸಂಖ್ಯೆಗಳನ್ನು ಪಹಣಿಯಲ್ಲಿ ನಮೂದಿಸಲು ಹಲವು ತೊಡಕುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ರೈತರಿಗೆ ಆಗುತ್ತಿರುವ ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೯೬೫ (೧೦೪೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೯ನೇ ಸಾಲಿನಿಂದ ೨೦೨೩ನೇ ಸಾಲಿನವರೆಗೆ ಅತಿವೃಷ್ಟಿಯಿಂದ ಸಂಪೂರ್ಣ ಮನೆ ಕಳೆದುಕೊಂಡವರು ಮತ್ತು ಭಾಗಶಃ ಮನೆ ಹಾನಿಗೊಳಗಾದ ಸಾವಿರಾರು ಜನರಿಗೆ ಇನ್ನೂ ಪರಿಹಾರ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲಿ, ಸಮೀಕ್ಷೆಯ ಪ್ರಕಾರ ಈ ಸಾಲುಗಳಲ್ಲಿ ಸಂಪೂರ್ಣ ಮನೆ ಹಾನಿಗೊಳಗಾದವರು ಎಷ್ಟು; ಭಾಗಶಃ ಮನೆ ಹಾನಿಗೊಳಗಾದವರು ಎಷ್ಟು; ಇವರಿಗೆ ಪರಿಹಾರ ನೀಡಲು ಅಗತ್ಯವಿರುವ ಅನುದಾನವೆಷ್ಟು; ಪರಿಹಾರ ರೂಪದಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; ಬಿಡುಗಡೆಗೆ ಬಾಕಿ ಇರುವ ಅನುದಾನ ಎಷ್ಟು; ಪರಿಹಾರ ಪಡೆದ ಮತ್ತು ಪಡೆಯದ ಫಲಾನುಭವಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

## ದಾಖಲೆಗಳಲ್ಲಿರುವ ಗ್ರಾಮದ ಹೆಸರನ್ನು ಬಳಕೆ ಮಾಡುವ ಕುರಿತು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೬೬ (೧೦೪೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಮಕೂರು ಜಿಲ್ಲೆ. ಕೊರಟಗೆರೆ ತಾಲ್ಲೂಕು, ಕೋಳಾಲ ಹೋಬಳಿ ನೀಲಗೊಂಡನಹಳ್ಳಿ ಗ್ರಾಮದ ಹೆಸರಿನ ಬದಲಿಗೆ ಕೆಲವೆಡೆ ಇರಕಸಂದ್ರ ಕಾಲೋನಿ (ಐ.ಕೆ.ಕಾಲೋನಿ) ಗ್ರಾಮ ಎಂದು ಉಲ್ಲೇಖಿಸಿ ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು, ಗ್ರಾಮ ಪಂಚಾಯಿತಿ ಹಾಗೂ ಕೆಲವು ಖಾಸಗಿಯವರು ದಾಖಲೆಗಳಲ್ಲಿ ನಮೂದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ. ಈ ರೀತಿ ನಮೂದಿಸಲು ಸರ್ಕಾರದಿಂದ ಇಲ್ಲಿಯವರೆಗೆ ಯಾವುದಾದರೂ ಅಧಿಸೂಚನೆ. ಸುತ್ತೋಲೆ. ಆದೇಶ ಹೊರಡಿಸಲಾಗಿದೆಯೇ; (ಸಂಪೂರ್ಣ ದಾಖಲೆಗಳನ್ನು ನೀಡುವುದು)

(ಇ) ನೀಲಗೊಂಡನಹಳ್ಳಿ ಗ್ರಾಮದಲ್ಲಿರುವ ಪೋಸ್ಟ್ ಆಫೀಸ್, ಹಣಕಾಸು ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು, ಗ್ರಾಮ ಪಂಚಾಯಿತಿ ಹಾಗೂ ಖಾಸಗಿಯವರು ಇರಕಸಂದ್ರ ಕಾಲೋನಿ (ಐ.ಕೆ.ಕಾಲೋನಿ) ಎಂದು ಇತ್ತೀಚಿಗೆ ನಮೂದಿಸುತ್ತಿರುವುದನ್ನು ಕೈಬಿಟ್ಟು ಗ್ರಾಮದ ಸಾರ್ವಜನಿಕರ ಮನವಿಯಂತೆ ಮೂಲ ಅಧಿಕೃತ ಹೆಸರಾದ ನೀಲಗೊಂಡನಹಳ್ಳಿ ಗ್ರಾಮವೆಂದೇ ಎಲ್ಲಾ ಸರ್ಕಾರದ ದಾಖಲೆ ಮತ್ತು ವ್ಯವಹಾರಗಳಲ್ಲಿ ನಮೂದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? (ಸಂಪೂರ್ಣ ಮಾಹಿತಿ ನೀಡುವುದು)

## ಮುಡುಕುತೊರೆ ಶ್ರೀ ಭ್ರಮಾರಾಂಭಿಕ ಮಲ್ಲಿಕಾರ್ಜುನ ದೇವಸ್ಥಾನದ ಕಾಮಗಾರಿಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೬೭ (೧೦೪೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಮುಡುಕುತೊರೆ ಶ್ರೀ ಭ್ರಮರಾಂಭಿಕ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸದರಿ ಕಾಮಗಾರಿಗೆ ಮಂಜೂರಾಗಿರುವ ಅನುದಾನ ಎಷ್ಟು; ಕಾಮಗಾರಿಯು ಗುತ್ತಿಗೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ; ಗುತ್ತಿಗೆ ಕಾಲಾವಧಿ ಎಷ್ಟು; ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ; ಕಾಮಗಾರಿಯೂ ಮಂದಗತಿಯಲ್ಲಿ ಸಾಗಲು ಕಾರಣಗಳೇನು;

(ಇ) ಸದರಿ ಕಾಮಗಾರಿಗೆ ಈವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು; ಖರ್ಚಾಗಿರುವ ಅನುದಾನ ಎಷ್ಟು; ಬಿಡುಗಡೆಯಾಗಲು ಬಾಕಿ ಇರುವ ಅನುದಾನ ಎಷ್ಟು; ಉಳಿಕೆ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆಗೊಳಿಸಲಾಗುವುದು; (ವಿವರವನ್ನು ಒದಗಿಸುವುದು)

(ಈ) ಮುಡುಕುತೊರೆ ಕ್ಷೇತ್ರವು ಶ್ರೀ ಭ್ರಮರಾಂಭಿಕ ಸಹಿತ ಮಲ್ಲಿಕಾರ್ಜುನಸ್ವಾಮಿಯ ದೇವಸ್ಥಾನವು ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು, ಶ್ರೀಶೈಲಂನ ನಂತರದ ಸ್ಥಾನವಾನ ಈ ದೇವಸ್ಥಾನವೆಂದು ಪ್ರತೀತಿಯಿದೆ; ಈ ಹಿನ್ನೆಲೆಯಲ್ಲಿ ಸದರಿ ದೇವಸ್ಥಾನದ ಪ್ರಾಧಿಕಾರ ರಚನೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ? (ಸಂಪೂರ್ಣ ಮಾಹಿತಿಯನ್ನು ನೀಡುವುದು)

## ಮುಜರಾಯಿ ಇಲಾಖೆಯ ಜಾಗದ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೯೬೮ (೧೦೦೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೫, ಜನವರಿ ೯ರ ಬಳಿಕ ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವೆ ನಂ-೭೯ರಲ್ಲಿ ೧೫ ಎಕರೆ ೧೨ ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಮಾರಾಟ ಮತ್ತು ಖರೀದಿ ನೋಂದಣಿ ಪ್ರಕ್ರಿಯೆಗಳನ್ನು ನೋಂದಣಿ ಮಾಡಿರುವ ಉಪ ನೋಂದಣಾಧಿಕಾರಿಗಳ ಮೇಲೆ ಅಗತ್ಯ ಇಲಾಖಾ ಕ್ರಮಕೈಗೊಳ್ಳುವಂತೆ ಸಂಬಂಧಿತ ಇಲಾಖಾ ಅಧಿಕಾರಿಗಳಿಗೆ ಮುಜರಾಯಿ ಆಯುಕ್ತರು ಪತ್ರ ಬರೆದಿರುವರೇ; ಯಾವ

ದಿನಾಂಕದಂದು ಪತ್ರ ಬರೆಯಲಾಗಿದೆ; ಇಲ್ಲವಾದಲ್ಲಿ, ಅಂತಹ ಉಪ ನೋಂದಣಾಧಿಕಾರಿಗಳನ್ನು ಅಮಾನತ್ತು ಮಾಡಲು ಶಿಫಾರಸ್ಸು ಮಾಡಲಾಗುವುದೇ; (ವಿವರ ನೀಡುವುದು)

(ಆ) ಸದರಿ ಜಮೀನಿನಲ್ಲಿ ಮನೆ ಕಟ್ಟಲು ಅನುಮತಿ ನೀಡಿದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವಂತೆ ಕೋರಿ ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆಯಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ಈ ಬಗ್ಗೆ ಕ್ರಮಕೈಗೊಳ್ಳಲಾಗುವುದು;

(ಇ) ಈ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಬೆಸ್ಕಾಂ ಅಧಿಕಾರಿಗಳನ್ನು ಅಮಾನತ್ತು ಕ್ರಮಕೈಗೊಳ್ಳಲು ಪತ್ರ ಬರೆಯಲಾಗಿದೆಯೇ; ಇಲ್ಲವಾದಲ್ಲಿ, ಕ್ರಮಕೈಗೊಳ್ಳುವುದು ಯಾವಾಗ;

(ಈ) ೨೦೧೫, ಜನವರಿ ೯ರ ಬಳಿಕ ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವೆ ನಂ-೭೯ರಲ್ಲಿ ೧೫ ಎಕರೆ ೧೨ ಗುಂಟೆ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ನೀರಿನ ಸಂಪರ್ಕ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ನೀಡಿದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಲು ಶಿಫಾರಸ್ಸು ಮಾಡದಿರಲು ಕಾರಣವೇನು? (ವಿವರ ನೀಡುವುದು)

## ಪಹಣಿ ಮತ್ತು ಖಾತಾಗಳಲ್ಲಿ ಹೆಸರು ಬದಲಾವಣೆ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೯೭ (೧೦೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಂದಾಯ ಇಲಾಖೆಯ ನಿಯಮಗಳ ಅನ್ವಯ ಪಹಣಿ ಮತ್ತು ಖಾತಾಗಳಲ್ಲಿ ಹೆಸರು ಬದಲಾವಣೆ ಮಾಡಲು ಇರುವ ನಿಯಮಗಳೇನು;

(ಆ) ಪಹಣಿ ಮತ್ತು ಖಾತಾಗಳಲ್ಲಿ ಹೆಸರು ಬದಲಾವಣೆಗೆ ಅರ್ಜಿ ಸಲ್ಲಿಸಬೇಕೆ; ಅರ್ಜಿ ಸಲ್ಲಿಸಿದ ಎಷ್ಟು ದಿನಗಳಲ್ಲಿ ಖಾತಾ ಮತ್ತು ಪಹಣಿಗಳಲ್ಲಿ ಹೆಸರು ಬದಲಾವಣೆಯಾಗುತ್ತದೆ; (ವಿವರ ನೀಡುವುದು)

(ಇ) ಪಹಣಿ ಮತ್ತು ಖಾತಾಗಳಲ್ಲಿ ಹೆಸರು ಬದಲಾವಣೆಗೆ ಯಾವ ಯಾವ ದಾಖಲೆಗಳನ್ನು ಸಲ್ಲಿಸಬೇಕಾಗಿದೆ; (ವಿವರ ನೀಡುವುದು)

(ಈ) ರಾಜ್ಯದ ರೈತರ ಪಹಣಿ ಮತ್ತು ಖಾತಾಗಳಲ್ಲಿ ವಕ್ಫ್ ಹೆಸರು ನಮೂದು ಮಾಡಲು ಸಂಬಂಧಿಸಿದವರು ಸಲ್ಲಿಸಿರುವ ದಾಖಲೆಗಳು ಯಾವುವು? (ವಿವರ ನೀಡುವುದು)

## ನಕಲಿ ಬಿಲ್ಲುಗಳ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೯೭೦ (೧೦೧೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಪ್ಪಳದ ಲೋಕೋಪಯೋಗಿ ಇಲಾಖೆಯಲ್ಲಿ ನಕಲಿ ಅಳತೆ ಮತ್ತು ಆರ್ ಎ ಬಿಲ್ಲುಗಳನ್ನು ತಯಾರಿಸಿ ರೂ.೧.೭೮ ಕೋಟಿ ಮೊತ್ತವನ್ನು ಸರ್ಕಾರಕ್ಕೆ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;

(ಆ) ನಕಲಿ ಅಳತೆ ಮತ್ತು ಆರ್ ಎ ಬಿಲ್ಲುಗಳನ್ನು ತಯಾರಿಸಿ ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿಗೆ ಕಾರಣರಾದ ಎಇಇ ಮತ್ತು ಇಇಗಳನ್ನು ಅಮಾನತ್ತು ಮಾಡಲಾಗಿದೆಯೇ; ಯಾವಾಗ ಅಮಾನತ್ತು ಮಾಡಲಾಗುವುದು; ಅವರ ಮೇಲೆ ಕೈಗೊಂಡ ಶಿಸ್ತು ಕ್ರಮದ ಬಗ್ಗೆ ವರದಿ ನೀಡುವುದು;

(ಇ) ನಕಲಿ ಅಳತೆ ಮತ್ತು ಆರ್ ಎ ಬಿಲ್ಲುಗಳನ್ನು ತಯಾರಿಸಿ ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿಸಿದ ಮೊತ್ತವನ್ನು ವಸೂಲಿ ಮಾಡಲು ಕೈಗೊಂಡ ಕ್ರಮಗಳೇನು; ಸದರಿ ಮೊತ್ತವನ್ನು ನಕಲಿ ಬಿಲ್ಲು ತಯಾರಿಸಿ ಗುತ್ತಿಗೆದಾರರಿಗೆ ಪಾವತಿಸಿದ ಎಇಇ ಮತ್ತು ಇಇ ಗಳಿಂದಲೇ ಸದರಿ ಮೊತ್ತವನ್ನು ವಸೂಲು ಮಾಡಲು ಕ್ರಮಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)

## ಭೂ ಮಂಜೂರಾತಿ ನಿಯಮಗಳ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೯೭೧ (೧೦೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯ ಭೂ ಮಂಜೂರಾತಿ ನಿಯಮಗಳ ನಿಯಮ ೨೩ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಂಗಾಮಿ ಮಂಜೂರಾತಿಯನ್ನು ಖಾಯಂ ಆಗಿ ಮಂಜೂರು ಮಾಡಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ನಿಯಮದಲ್ಲಿ ಭೂ ಮಂಜೂರಾತಿ ಕೋರಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಹಂಗಾಮಿ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳು ಎಷ್ಟು; ಎಷ್ಟು ರೈತರಿಗೆ ಖಾಯಂ ಆಗಿ ಭೂ ಮಂಜೂರಾತಿ ಮಾಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

## ಪಟ್ಟಣ ಪಂಚಾಯಿತಿ ಪುರಸಭೆ, ನಗರಸಭೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇ-ಖಾತೆಯ ಸಮಸ್ಯೆ ಕುರಿತು

**ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೭೨ (೧೦೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಸ್ಥಳೀಯ ಸಂಸ್ಥಗಳಾದ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದ ಬಡಾವಣೆಯಲ್ಲಿ ಇ-ಖಾತೆ ಇಲ್ಲದಿರುವ ನಿವೇಶನ/ಕಟ್ಟಡಗಳನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು; (ಸ್ಥಳೀಯ ಸಂಸ್ಥೆವಾರು/ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಇ-ಖಾತೆ ಇಲ್ಲದೇ ಸಾರ್ವಜನಿಕರಿಗೆ ಬಹಳ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಪಟ್ಟಣ ಪಂಚಾಯಿತಿ ಪುರಸಭೆ ಮತ್ತು ನಗರಸಭೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದ ಬಡಾವಣೆಯಲ್ಲಿ ಇ-ಖಾತೆ ಇಲ್ಲದಿರುವ ನಿವೇಶನ/ಕಟ್ಟಡಗಳಿಗೆ ಇ-ಖಾತೆ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಸ್ಮಶಾನಗಳಿಗೆ ರಸ್ತೆ, ಮೂಲಸೌಲಭ್ಯ ಒದಗಿಸುವ ಕುರಿತು

**ಶ್ರೀ ವೈ.ಎಂ. ಸತೀಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೭೩ (೧೦೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಎಲ್ಲಾ ಜನಾಂಗಗಳ ಸಮುದಾಯದವರಿಗೆ ಲಭ್ಯವಿರುವ ಸ್ಮಶಾನಗಳು ಎಷ್ಟು; (ಗ್ರಾಮವಾರು ಮತ್ತು ನಗರವಾರು ಹೆಸರು ಮತ್ತು ವಿಸ್ತೀರ್ಣಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಕಳೆದ ೩ ವರ್ಷಗಳಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಸ್ಮಶಾನ ಭೂಮಿಗಳಿಗೆ ರಸ್ತೆ ಸಂಪರ್ಕ ಮತ್ತು ಮೂಲಸೌಲಭ್ಯಗಳನ್ನು ಒದಗಿಸಿರುವ ವಿವರಗಳನ್ನು ನೀಡುವುದು;

(ಇ) ಸದರಿ ಜಿಲ್ಲೆಗಳಲ್ಲಿ ಸಾರ್ವಜನಿಕ ಸ್ಮಶಾನಗಳು ಇಲ್ಲದೇ ಇರುವ ಗ್ರಾಮಗಳಿಗೆ ಹೊಸ ಸ್ಮಶಾನ ಜಾಗಗಳನ್ನು ಗುರುತಿಸಲು ಸರ್ಕಾರದ ಕ್ರಮಗಳೇನು; ಈ ಸ್ಮಶಾನ ಭೂಮಿಗಳಿಗೆ ಸೂಕ್ತ ರಸ್ತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ; ಹಾಗೂ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

## ಕಂದಾಯ ಇಲಾಖೆಯ ಗ್ರಾಮಾಡಳಿತಾಧಿಕಾರಿಗಳ ಮುಷ್ಕರದ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೭೪ (೧೦೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಂದಾಯ ಇಲಾಖೆಯ ಗ್ರಾಮಾಡಳಿತಾಧಿಕಾರಿಗಳು ನಡೆಸಿದ ಮುಷ್ಕರದ ಬೇಡಿಕೆಗಳೇನು; ಆ ಪೈಕಿ ಎಷ್ಟು ಬೇಡಿಕೆಗಳನ್ನು ಈಡೇರಿಸಲಾಗಿದೆ;

(ಆ) ಈಡೇರಿಸಲು ಬಾಕಿಯಿರುವ ಬೇಡಿಕೆಗಳಾವುವು; ಯಾವ ಕಾಲಮಿತಿಯೊಳಗೆ ಈಡೇರಿಸಲಾಗುವುದು?

## ಕಂದಾಯ ಇಲಾಖೆಯ ಆಯುಕ್ತಾಲಯದ ಕಾರ್ಯಭಾರಗಳ ಕುರಿತು

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೭೫ (೧೦೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಂದಾಯ ಇಲಾಖೆಯ ಆಯುಕ್ತಾಲಯ ವಹಿಸುತ್ತಿರುವ ಕಾರ್ಯಭಾರಗಳೇನು; ಆಯುಕ್ತಾಲಯ ರಚನೆಯಾದ ನಂತರ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆಯೇ;

(ಆ) ಕಂದಾಯ ಇಲಾಖೆಯ ಗ್ರೂಪ್ 'ಸಿ' ನೌಕರರ ಜೇಷ್ಠತಾ ಪಟ್ಟಿಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸದೇ ಇರುವುದು ಮತ್ತು ಕಾಲಕಾಲಕ್ಕೆ ಜೇಷ್ಠತಾ ಪಟ್ಟಿಯನ್ನು ಹೊರಡಿಸದೇ ಇರುವುದರಿಂದ, ಸಿಬ್ಬಂದಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾಲ ಕಾಲಕ್ಕೆ ಜೇಷ್ಠತಾ ಪಟ್ಟಿ ಹೊರಡಿಸಲು ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗುತ್ತಿದೆ?

## ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ನಗರ ಸಾರಿಗೆಗೆ ವಿದ್ಯುತ್ ಚಾಲಿತ ಬಸ್‌ಗಳನ್ನು ಒದಗಿಸುವ ಕುರಿತು

ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೯೭೬ (೧೦೩೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿರುವ ನಗರ ಸಾರಿಗೆ ಬಸ್‌ಗಳ ಸಂಖ್ಯೆಯೆಷ್ಟು; ಈ ಬಸ್‌ಗಳಿಗೆ ಪ್ರತಿ ತಿಂಗಳು ಬಳಸುವ ಡೀಸೆಲ್ ಎಷ್ಟು; ನಗರ ಸಾರಿಗೆಯಿಂದ ಬರುವ ಆದಾಯವೆಷ್ಟು; ನಗರ ಸಾರಿಗೆ ಬಸ್‌ಗಳು ಡೀಸೆಲ್, ಇಂಧನದಿಂದ ಕ್ರಮಿಸುವುದರಿಂದ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿರುವ ವಿದ್ಯುತ್ ಚಾಲಿತ ಬಸ್‌ಗಳ ಸಂಖ್ಯೆಯೆಷ್ಟು; ನಗರ ಸಾರಿಗೆಗಳಲ್ಲಿ ನಷ್ಟವನ್ನು ಸರಿದೂಗಿಸಲು ವಿದ್ಯುತ್ ಚಾಲಿತ ಬಸ್‌ಗಳನ್ನು ಪ್ರಾರಂಭಿಸಲು

ಸರ್ಕಾರದ ತೀರ್ಮಾನಗಳೇನು; ಯಾವ ಕಾಲಮಿತಿಯಲ್ಲಿ ಈ ವಿದ್ಯುತ್ ಚಾಲಿತ ಬಸ್‌ಗಳನ್ನು ಆರಂಭಿಸಲಾಗುವುದು? (ಮಾಹಿತಿ ಒದಗಿಸುವುದು)

## ವಸತಿ ಇಲಾಖೆಯ ಯೋಜನೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್(ವಿಧಾನಸಭೆಯಿಂದ ಚುನಾಯಿತರಾದವರು):-**

೯೭೭ (೧೦೯೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೩ ವರ್ಷಗಳಲ್ಲಿ ವಸತಿ ಇಲ್ಲದವರಿಗೆ ಸರ್ಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ;

(ಆ) ಕಲಬುರಗಿ ಜಿಲ್ಲೆಯಲ್ಲಿ ಕಳೆದ ವರ್ಷ ವಸತಿ ಇಲಾಖೆಯಿಂದ ಮಂಜೂರಾದ ಮನೆಗಳೆಷ್ಟು; ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನಡೆಯುತ್ತಿರುವ ಕಾಮಗಾರಿಗಳು ಎಷ್ಟು ಮತ್ತು ಅದಕ್ಕೆ ಬಿಡುಗಡೆಯಾದ ಮತ್ತು ಖರ್ಚು ಮಾಡಲಾದ ಅನುದಾನ ಎಷ್ಟು; (ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು)

(ಇ) ಕಲಬುರಗಿ ಜಿಲ್ಲೆಯಲ್ಲಿ ವಸತಿ ಇಲಾಖೆಯಿಂದ ಬಿಡುಗಡೆಯಾದ ಮನೆಗಳಲ್ಲಿ ಪೂರ್ಣಗೊಳ್ಳದೆ ಇರುವ ಮನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಸರ್ಕಾರದಿಂದ ಹೊರ ರಾಜ್ಯಗಳಲ್ಲಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು ಮತ್ತು ಅದಕ್ಕೆ ಬಿಡುಗಡೆಯಾದ ಅನುದಾನವೆಷ್ಟು; ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)

## ದೇವಸ್ಥಾನಗಳ ಅನುದಾನ ಕುರಿತು

**ಶ್ರೀ ಸುನೀಲ್ ವಲ್ಯಾಪುರ್(ವಿಧಾನಸಭೆಯಿಂದ ಚುನಾಯಿತರಾದವರು):-**

೯೭೮ (೧೦೯೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ದೇವಸ್ಥಾನಗಳು ಎಷ್ಟು; ಮುಜರಾಯಿ ಇಲಾಖೆಗೆ ಸಂಬಂಧಪಡದ ದೇವಸ್ಥಾನಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಮುಜರಾಯಿ ಇಲಾಖೆಯ ದೇವಸ್ಥಾನದ ಅರ್ಚಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಅರ್ಚಕರಿಗೆ ಪ್ರತಿ ತಿಂಗಳು ನೀಡಲಾಗಿರುವ ವೇತನ ಎಷ್ಟು; (ಕಳೆದ ೩ ವರ್ಷಗಳ ವೇತನ ಮಾಹಿತಿ ನೀಡುವುದು)

(ಈ) ಮುಜರಾಯಿ ಇಲಾಖೆಯ ದೇವಸ್ಥಾನಕ್ಕೆ ಕಳೆದ ೩ ವರ್ಷದಲ್ಲಿ ನೀಡಿದ ಅನುದಾನ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

## ರಾಜ್ಯ ಅಭಿವೃದ್ಧಿ ನಿರ್ವಹಣೆಯ ಕುರಿತು

**ಶ್ರೀ ಸುನೀಲ್ ವಲ್ಯಾಪುರ್(ವಿಧಾನಸಭೆಯಿಂದ ಚುನಾಯಿತರಾದವರು):-**

೯೭೯ (೧೦೯೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೦೩ ವರ್ಷಗಳಲ್ಲಿ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಮಾಡಿದ ಗುತ್ತಿಗೆದಾರರು ಮತ್ತು ಕಂಪನಿಗಳು ಯಾವುವು; (ವಿವರ ನೀಡುವುದು)

(ಆ) ಕಲಬುರಗಿ ನಗರವು ಸಂಚಾರ ದಟ್ಟಣೆಯಿಂದ ಕೂಡಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಂಚಾರ ದಟ್ಟಣೆ ನಿವಾರಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಯಾವುವು;

(ಇ) ಕಲಬುರಗಿಯಲ್ಲಿ ಈಗಿರುವ ವರ್ತುಲ ರಸ್ತೆ ತುಂಬಾ ಸಂಚಾರ ದಟ್ಟಣೆ ಕೂಡಿದ್ದು, ಇದಕ್ಕೆ ಪರ್ಯಾಯವಾಗಿ ಇನ್ನೊಂದು ಹೊರ ವರ್ತುಲ ರಸ್ತೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ;

(ಈ) ಇದ್ದಲ್ಲಿ, ಇದಕ್ಕಾಗಿ ಭೂ ಸ್ವಾಧೀನ ಸೇರಿದಂತೆ ಯಾವ ಯಾವ ಕಾರ್ಯಗಳು ನಡೆಯುತ್ತಿವೆ ಹಾಗೂ ಈ ವರ್ತುಲ ರಸ್ತೆಯ ಉದ್ದ ಮತ್ತು ಅಗಲ ಎಷ್ಟು ಮತ್ತು ಇದರ ನಿರ್ಮಾಣಕ್ಕೆ ತಗಲುವ ಅಂದಾಜು ಮೊತ್ತ ಎಷ್ಟು; ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ಮಾಹಿತಿ ನೀಡುವುದು)

## ಚನ್ನರಾಯಪಟ್ಟಣ ತಾಲ್ಲೂಕು ಬಳದರೆ ಗ್ರಾಮ ಸರ್ವೆ ನಂ.೨೬೦ಕ್ಕೆ ಭೂ ಅನ್ಯಕ್ರಾಂತ ಮಾಡಿರುವುದು ದಾಖಲಾತಿಗಳ ಪ್ರಕಾರ ಉಲ್ಲಂಘನೆಯಾಗಿರುವ ಬಗ್ಗೆ

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೯೮೦ (೧೦೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಬಳದರೆ ಗ್ರಾಮದ ಸರ್ವೆ ನಂ.೨೬೦ಕ್ಕೆ ಸಂಬಂಧಿಸಿದಂತೆ ಭೂ ಅನ್ಯ ಕ್ರಾಂತ ಸಮಯದಲ್ಲಿ ಷರತ್ತುಗಳ ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರೂ ಸಹ ಅದನ್ನು ಪಾಲಿಸದೇ ಭೂ ಅನ್ಯ ಕ್ರಾಂತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಆ) ಜಿಲ್ಲಾಧಿಕಾರಿಯವರು ಭೂ ಅನ್ಯ ಕ್ರಾಂತ ಮಾಡುವ ಸಮಯದಲ್ಲಿ ರಸ್ತೆಗೆ ಹೊಂದಿಕೊಂಡಂತೆ ಕಟ್ಟಡ ನಿರ್ಮಾಣವಾಗಿರುವುದು ಜಮೀನಿನ ಮಾಲೀಕರು ನೋಟರೀಕೃತ ಪ್ರಮಾಣ ಪತ್ರದಲ್ಲಿ ತಿಳಿಸಿದ್ದರೂ ಸಹ ಭೂ ಅನ್ಯ ಕ್ರಾಂತ ಮಾಡಿರುವುದರಿಂದ ನ್ಯಾಯಾಲಯದ ಆದೇಶ ಸಂಖ್ಯೆ WP NO:೮೮೫೯/೨೦೨೧, ದಿನಾಂಕ:೦೬/೧೨/೨೦೨೧, WP NO:೩೬೩೧೪/೨೦೧೯ (LB-RES)PIL, ದಿನಾಂಕ:೨೫/೦೮/೨೦೨೧ರ ಉಲ್ಲಂಘನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಇ) ಸರ್ಕಾರದ ಆದೇಶ ಸಂಖ್ಯೆ ನ:ಅ:ಇ:೯೩:ಎಂಡಬ್ಲೂಪಿ:೨೦೨೩,(ಭಾ-೧) ದಿನಾಂಕ: ೦೯/೦೧/೨೦೨೪ ಹಾಗೂ ನ್ಯಾಯಾಲಯದ ಆದೇಶ ಉಲ್ಲಂಘನೆ ಮತ್ತು ಸರ್ಕಾರದ ಆದೇಶವನ್ನು ಸಹ ಪಾಲಿಸದೇ WP NO:೧೩೬೯೬/೨೦೨೨ (LB-RES), ದಿನಾಂಕ:೨೭/೦೯/೨೦೨೩ರ ಉಲ್ಲಂಘನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

## ರಾಜ್ಯದಲ್ಲಿ ಕಾನೂನು ಮೀರಿ ಭೂ ಪರಿವರ್ತನೆಯಾಗುತ್ತಿರುವ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು):-**

೯೮೧ (೧೦೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಾಸ್ಟರ್ ಪ್ಲಾನ್ ವ್ಯಾಪ್ತಿಯ ಪ್ರದೇಶಗಳಲ್ಲಿ ಭೂ ಪರಿವರ್ತನೆ ಮಾಡುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ಸೆಕ್ಷನ್ ೯೫ಕ್ಕೆ ತಿದ್ದುಪಡಿ ಯಾವಾಗ ಮಾಡಲಾಯಿತು; ಅಧಿಸೂಚನೆಯನ್ನು ಯಾವಾಗ ಹೊರಡಿಸಲಾಯಿತು; ಈ ಅಧಿಸೂಚನೆಯ ಪ್ರಮುಖ ಅಂಶಗಳಾವುವು; (ವಿವರ ನೀಡುವುದು)

(ಆ) ಸದರಿ ಅಧಿಸೂಚನೆ ಜಾರಿಗೊಳಿಸಲು ನಿಯುಮಗಳನ್ನು ರೂಪಿಸಲಾಗಿದೆಯೇ; ರೂಪಿಸದಿದ್ದಲ್ಲಿ, ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಈ ಅಧಿಸೂಚನೆಯ ನಿಯಮಗಳನ್ನು ರೂಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ನಿಯಮ ರೂಪಿಸಿ ಕಾಯ್ದೆಯನ್ನು ಜಾರಿಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಕಾಯ್ದೆಗೆ ತಿದ್ದುಪಡಿಯಾಗಿ ಅಧಿಸೂಚನೆ ನಂತರವು ಅಕ್ರಮವಾಗಿ ಭೂ ಪರಿವರ್ತನೆ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯದಲ್ಲಿ ವಿತರಿಸಿರುವ ಹಂಗಾಮಿ ಸಾಗುವಳಿ ಚೀಟಿಗಳನ್ನು ಖಾಯಂಗೊಳಿಸುವ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು):-**

೯೮೨ (೧೦೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಹಂಗಾಮಿ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳು ಎಷ್ಟು; ಹಂಗಾಮಿ ಸಾಗುವಳಿ ಪಡೆದಿರುವ ಎಷ್ಟು ಜನ ಬಡ ರೈತರಿಗೆ ಖಾಯಂ ಮಾಡಲಾಗಿದೆ;

(ಆ) ಕರ್ನಾಟಕ ಭೂ ಮಂಜೂರಾತಿ ನಿಯಮಗಳ ನಿಯಮ ೨೩ ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಂಗಾಮಿ ಸಾಗುವಳಿ ಚೀಟಿ ಪಡೆದಿರುವ ರೈತರುಗಳಿಗೆ ಖಾಯಂ ಮಾಡಲು ಒದಗಿಸಿರುವ ಅಧಿಕಾರದಡಿ ಕ್ರಮ ವಹಿಸಿರುವ ಪ್ರಕರಣಗಳೆಷ್ಟು;

(ಇ) ಕರ್ನಾಟಕ ಭೂ ಮಂಜೂರಾತಿ ನಿಯಮಗಳ ನಿಯಮ ೨೩ ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಂಗಾಮಿಯನ್ನು ಖಾಯಂ ಮಾಡಲು ಪ್ರತ್ಯಾಯೋಜಿಸಿದ್ದರೂ ಇದುವರೆಗೂ ಯಾವುದೇ ಕ್ರಮವಹಿಸದಿರಲು ಕಾರಣಗಳೇನು;

(ಈ) ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಿರುವಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳ ನಿಯಮ-೨೩ರಡಿ ಬಾಕಿ ಇರುವ ಹಂಗಾಮಿ ಪ್ರಕರಣಗಳನ್ನು ಖಾಯಂಗೊಳಿಸಲು ಯಾವಾಗ ಕ್ರಮವಹಿಸಲಾಗುವುದು?

## ರಾಜ್ಯದ ಕಂದಾಯ ಇಲಾಖೆಯ ಕಛೇರಿಯಲ್ಲಿನ ಸಿಬ್ಬಂದಿ ಕೊರತೆ ಕುರಿತು

**ಶ್ರೀ. ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-**

೯೮೩ (೧೦೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವ ಕಛೇರಿಗಳನ್ನು ಗುತ್ತಿಗೆ ಮತ್ತು ಖಾಯಂ ಆಧಾರಿತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರವನ್ನು ನೀಡುವುದು)

(ಆ) ರಾಜ್ಯದ ಕಂದಾಯ ಕಛೇರಿಗಳನ್ನು ಒಂದೇ ಸ್ಥಳದಲ್ಲಿ ಹಲವಾರು ವರ್ಷಗಳ ಕಾಲ ಸಿಬ್ಬಂದಿಗಳು ಗುತ್ತಿಗೆಯಾಧಾರಿತವಾಗಿ

ಕಾರ್ಯನಿರ್ವಹಿಸುತ್ತಿರುವುದರಿಂದ ಇದು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುವುದಿಲ್ಲವೇ; ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು;

(ಇ) ಪ್ರಸ್ತುತ ಖಾಲಿಯಿರುವ ಹುದ್ದೆಗಳ ನೇಮಕಾತಿಗಾಗಿ ಯಾವ ಕ್ರಮಕೈಗೊಳ್ಳಲಾಗಿದೆ; (ಹುದ್ದೆಗಳಿಗನುಸಾರ ಮಾಹಿತಿಯನ್ನು ಒದಗಿಸುವುದು)

(ಈ) ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಕಂದಾಯ ಇಲಾಖೆಯ ಕಛೇರಿಗಳಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

## ಯಾದಗಿರಿ ಜಿಲ್ಲೆ ಶಹಪೂರ ಹಾಗೂ ವಡಗೇರಾ ತಾಲ್ಲೂಕು ಕಛೇರಿಗಳಲ್ಲಿ ದಾಖಲೆಗಳನ್ನು ನೀಡುವ ಕುರಿತು

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-**

೯೮೪ (೧೨೦೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಯಾದಗಿರಿ ಜಿಲ್ಲೆಯ ಶಹಪುರ ಹಾಗೂ ವಡಗೇರಾ ತಾಲ್ಲೂಕಿನ ವ್ಯಾಪ್ತಿಗೆ ಬರುವ ಭೂಮಿಗಳಿಗೆ ಸಂಬಂಧಿಸಿದ ಹಳೆಯ ಭೂ ದಾಖಲೆಗಳು ತಾಲ್ಲೂಕು ಕಛೇರಿಯಲ್ಲಿ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಭೂ ದಾಖಲೆಗಳನ್ನು ಸಂರಕ್ಷಿಸಲು ಕೈಗೊಂಡ ಕ್ರಮಗಳೇನು;

(ಆ) ಹಳೆ ದಾಖಲೆಗಳನ್ನು ಪಡೆಯಲು ಅರ್ಜಿ ಸಲ್ಲಿಸುವ ರೈತರಿಗೆ ತಾಲ್ಲೂಕು ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿಗಳು ದಾಖಲೆಗಳನ್ನು ಹುಡುಕಿ ಕೊಡುವುದರಲ್ಲಿ ನಿರ್ಲಕ್ಷ್ಯವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದ್ದಲ್ಲಿ, ಈ ಕುರಿತು ನಿರ್ಲಕ್ಷ್ಯವಹಿಸುತ್ತಿರುವ ಸಿಬ್ಬಂದಿಗಳ ಮೇಲೆ ಕೈಗೊಳ್ಳಬಹುದಾದ ಕ್ರಮಗಳೇನು;

(ಇ) ಭೂ ಮಂಜೂರಾತಿ ಆದೇಶ ಪ್ರತಿಗಳು, ೪ಲಎ ರಿಜಿಸ್ಟರ್, ಫಾರಂ ನಂ.೭, ಮುಂತಾದ ದಾಖಲೆಗಳು ಸಿಗುತ್ತಿಲ್ಲವಾದ್ದರಿಂದ ಯಾವ ಕಾಲಮಿತಿಯಲ್ಲಿ ರೈತರಿಗೆ ಬೇಕಾಗಿರುವ ಈ ದಾಖಲೆಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು? (ವಿವರ ನೀಡುವುದು)

## ಶಕ್ತಿ ಯೋಜನೆಯ ಕುರಿತು

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-**

೯೮೫ (೧೦೮೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಶಕ್ತಿ ಯೋಜನೆಗಾಗಿ ಪ್ರತಿ ತಿಂಗಳು ಸರ್ಕಾರ ವಿನಿಯೋಗಿಸುತ್ತಿರುವ ಹಣ ಎಷ್ಟು;

(ಆ) ವಿವಿಧ ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಇ) ಕಳೆದ ಒಂದು ವರ್ಷದಲ್ಲಿ ಶಕ್ತಿ ಯೋಜನೆಗಾಗಿ ಸರ್ಕಾರದಿಂದ ಖರ್ಚಾದ ಹಣ ಎಷ್ಟು;

(ಈ) ಶಕ್ತಿ ಯೋಜನೆಯಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲೂ ಬಸ್‌ಗಳ ಸಂಚಾರ ಮಾಡುವ ಸಂಖ್ಯೆಯನ್ನು ಕಡಿಮೆಗೊಳಿಸಲಾಗಿದೆಯೇ; ಕಡಿಮೆಗೊಳಿಸಿದ್ದಲ್ಲಿ, ಕಾರಣವೇನು; ಕೆಲವು ಪ್ರದೇಶಗಳಿಗೆ ಬಸ್‌ಗಳ ಸೌಕರ್ಯವಿಲ್ಲದೇ ಗ್ರಾಮೀಣ ಶಾಲಾ ಮಕ್ಕಳು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಶಾಲಾ

ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

## ಉತ್ತರ ಕನ್ನಡ ಜಿಲ್ಲೆಯ ರೈತರ ಹಕ್ಕು ಸಂರಕ್ಷಣಾ ಸಮಿತಿ ಬೇಡಿಕೆಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು):-**

೯೮೭ (೧೧೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಸೋಪ್ಪಿನ ಬೆಟ್ಟ, ಕುಮಕಿ, ಸ್ಟ್ರೀಪ್ ಬಳಕೆ, ಪಾರಂಪಾರಿಕ ಅತೀಕ್ರಮಣ ಮತ್ತು ಕಾಡು ಪ್ರಾಣಿಗಳಿಂದ ಆಗುತ್ತಿರುವ ಜೀವಹಾನಿ ಮತ್ತು ಬೆಳೆಹಾನಿಗೆ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ;

(ಆ) ಈ ಕುರಿತು ರೈತರ ಹಕ್ಕು ಸಂರಕ್ಷಣಾ ಸಮಿತಿ ಉತ್ತರ ಕನ್ನಡ ಜಿಲ್ಲೆ ಇವರು ಉತ್ತರ ಕನ್ನಡ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸಲ್ಲಿಸಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ಉತ್ತರ ಕನ್ನಡ ಜಿಲ್ಲೆಯಲ್ಲಿ ಬಾಕಿ ಇರುವ ಮನೆಗಳ ಬಿಲ್ಲು ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು):-**

೯೮೭ (೧೧೪೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೩ ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳ ಮೂಲಕ ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳೆಷ್ಟು; ಇವುಗಳಲ್ಲಿ ಪೂರ್ಣಗೊಂಡ ಮನೆಗಳೆಷ್ಟು; ಈ ಮನೆಗಳು ಪೂರ್ಣಗೊಂಡರೂ ಬಿಲ್ ಪಾವತಿ ಬಾಕಿ ಇರುವ ಮನೆಗಳೆಷ್ಟು;

(ಆ) ಬಿಲ್ ಪಾವತಿಗೆ ಬಾಕಿ ಇರುವ ಮನೆಗಳ ಬಿಲ್‌ಗಳನ್ನು ನೀಡದೆ ಇರಲು ಕಾರಣವೇನು; ಮತ್ತು ಸರ್ಕಾರ ಈ ಬಿಲ್‌ಗಳ ಹಣ ಪಾವತಿಸಲು ತೆಗೆದುಕೊಳ್ಳುವ ಕಾಲಾವಧಿ ಎಷ್ಟು?

## ಕಾಡು ಪ್ರಾಣಿಗಳ ದಾಳಿಗೆ ಮತ್ತು ಅನಾರೋಗ್ಯ ಕಾರಣ ಮೃತಪಟ್ಟ ದನಕರುಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು):-**

೯೮೮ (೧೧೪೩) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಕಾಡುಪ್ರಾಣಿಗಳ ದಾಳಿಗೆ ತುತ್ತಾಗಿ ಮತ್ತು ಅನಾರೋಗ್ಯ ಕಾರಣಗಳಿಂದ ಮೃತಪಟ್ಟ ದನಕರುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಮೃತಪಟ್ಟ ದನಕರುಗಳಲ್ಲಿ ಎಷ್ಟು ಕನಕರುಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ; ಪರಿಹಾರ ನೀಡದಿರುವ ಜಾನುವಾರುಗಳೆಷ್ಟು?

## ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ರಸ್ತೆಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು):-**

೯೮೯ (೧೧೪೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ಅಡಿಯಲ್ಲಿ ಬರುವ ರಸ್ತೆಗಳು ಯಾವುವು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇವುಗಳಲ್ಲಿ ಬಹುತೇಕ ರಸ್ತೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಇದಕ್ಕಾಗಿ ಪ್ರಸ್ತುತ ಸಾಲಿನಲ್ಲಿ ಯಾವ ಯಾವ ರಸ್ತೆಗಳಿಗೆ ಅನುದಾನ ಬಿಡುಗಡೆಯಾಗಿದೆ; (ವಿವರ ನೀಡುವುದು)

(ಈ) ಸರ್ಕಾರವು ಈ ರಸ್ತೆಗಳ ಅಭಿವೃದ್ಧಿಗೆ ಕೈಗೊಳ್ಳುವ ಕ್ರಮಗಳೇನು?

## ಬೆಳಗಾವಿ ಜಿಲ್ಲೆ ಖಾನಾಪುರದ ಕವಲಾಪೂರವಾಡದಲ್ಲಿರುವ ಪೋಲ್ಟ್ರಿ ಫಾರಂ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು):-**

೯೯೦ (೧೧೪೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಬೈಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕವಲಾಪೂರವಾಡ ಸಮೀಪದಲ್ಲಿರುವ ಪೋಲ್ಟ್ರಿ ಫಾರಂ (ಕ್ವಾಲಿಟಿ ಅನಿಮಲ್ ಫೀಡ್ಸ್ ಪ್ರೈವೇಟ್ ಲಿಮಿಟೆಡ್) ನಿಂದ ಬರುವ ದುರ್ವಾಸನೆಯಿಂದ ಗ್ರಾಮಸ್ಥರು ಮತ್ತು ಮಕ್ಕಳ

ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಕುರಿತು; ಸದರಿ ಗ್ರಾಮಸ್ಥರು ನಿರಂತರ ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ಸದರಿ ಪೋಲ್ಟ್ರಿ ಫಾರಂ ಕವಲಾಪೂರವಾಡ ಗ್ರಾಮದಿಂದ ಕೇವಲ ೩೦೦ಮೀಟರ್ ಒಳಗೆ ಇದ್ದು, ಇದರಿಂದ ಗ್ರಾಮಸ್ಥರ ಮನೆಯೊಳಗೆ ಮತ್ತು ಅಡಿಗೆ ಕೋಣೆಯೊಳಗೆ ನಿರಂತರ ವಾಸನೆ ಮತ್ತು ನೊಣಗಳು ಬರುತ್ತಿರುವುದು ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ಗಮನಿಸಿದ್ದು ಸದರಿ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಕೂಡ ಭೇಟಿ ನೀಡಿದರೂ ಪ್ರಕರಣ ಇತ್ಯಾರ್ಥವಾಗದಿರಲು ಕಾರಣಗಳೇನು; (ವಿವರ ನೀಡುವುದು)

(ಇ) ಕಮಲಾಪೂರವಾಡದ ಗ್ರಾಮಸ್ಥರಿಗೆ ಸದರಿ ಪೋಲ್ಟ್ರಿ ಫಾರಂ ನಿಂದ ಉಂಟಾಗುತ್ತಿರುವ ದುರ್ವಾಸನೆ ಮತ್ತು ನೊಣ ಉತ್ಪತ್ತಿಯಿಂದ ಮುಂದಿನ ದಿನಗಳಲ್ಲಿ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದ್ದು, ಸರ್ಕಾರ ಇದರ ಕುರಿತು ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳೇನು?

## ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳ ವ್ಯಾಜ್ಯಗಳ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೯೯೧ (೧೦೬೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ವಕ್ಫ್ ಕಾಯಿದೆ-೧೯೯೫ನ್ನು ಯಾವ ದಿನಾಂಕದಿಂದ ಜಾರಿಗೊಳಿಸಲಾಗಿದೆ; ಮತ್ತು ಈ

ಕಾಯ್ದೆಯ ಧ್ಯೇಯೋದ್ದೇಶಗಳು ಯಾವುವು; ಈ ಕಾಯಿದೆ ಅಡಿಯಲ್ಲಿ ಯಾವ ವಿಧದ ಆಸ್ತಿಯನ್ನು ವಕ್ಫ್ ಆಸ್ತಿಯೆಂದು ಪರಿಗಣಿಸಲಾಗುತ್ತದೆ; (ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ವಕ್ಫ್ ಆಸ್ತಿಗಳನ್ನು ನೊಂದಾಯಿಸಲು ಮತ್ತು ನಿರ್ವಹಿಸಲು ಇರುವ ವ್ಯವಸ್ಥೆ ಯಾವುದು; ಮತ್ತು ಇದುವರೆಗೂ ವಕ್ಫ್ ಆಸ್ತಿಯಾಗಿ ಗುರುತಿಸಿರುವ ಆಸ್ತಿಗಳ ಸಂಖ್ಯೆ ಮತ್ತು ವಿಸ್ತೀರ್ಣ ಎಷ್ಟು; (ಜಿಲ್ಲಾವಾರು ಮತ್ತು ಜಿಲ್ಲಾ ವಕ್ಫ್ ಮಂಡಳಿವಾರು ಪೂರ್ಣ ಮಾಹಿತಿ ನೀಡುವುದು)

(ಇ) ಈ ರೀತಿ ನೋಂದಾಯಿಸಿದ ವಕ್ಫ್ ಆಸ್ತಿಯ ಸರ್ವೆ ಕೈಗೊಳ್ಳಲಾಗಿದೆಯೇ; ಈ ಸರ್ವೆಯನ್ನು ಆಧಾರಿಸಿ ಸಂಬಂಧಿಸಿದ ಜಿಲ್ಲಾ ವಕ್ಫ್ ಮಂಡಳಿಗಳಲ್ಲಿ ಈ ಆಸ್ತಿಗಳನ್ನು ನೋಂದಾಯಿಸಲಾಗಿದೆಯೇ; ಎಷ್ಟು ಪ್ರಕರಣಗಳಲ್ಲಿ ವಕ್ಫ್ ಆಸ್ತಿಗಳನ್ನು ಒತ್ತುವರಿ ಅಥವಾ ಅತಿಕ್ರಮಣದ ಅನುಭವದಲ್ಲಿ ಇವೆ; ವಕ್ಫ್ ಆಸ್ತಿಯ ಒತ್ತುವರಿ ಮಾಡಿದ ವಿಸ್ತೀರ್ಣ ಮತ್ತು ಸಂಖ್ಯೆಗಳು ಎಷ್ಟು ಈ ಬಗ್ಗೆ ಲೋಕಾಯುಕ್ತ ನೀಡಿರುವ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ; (ತಾಲ್ಲೂಕುವಾರು ಜಿಲ್ಲಾ ವಕ್ಫ್ ಮಂಡಳಿವಾರು ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ವಕ್ಫ್ ಆಸ್ತಿಗೆ ಸಂಬಂಧಿಸಿದ ವ್ಯಾಜ್ಯಗಳ ಪ್ರಕರಣಗಳೆಷ್ಟು; ಮತ್ತು ಈ ವ್ಯಾಜ್ಯಗಳ ತೀರುವಳಿಗೆ ಇರುವ ವ್ಯವಸ್ಥೆ ಯಾವುದು; ಹಾಗೂ ಈ ತಹಲ್‌ವರೆಗೂ ಎಷ್ಟು ಪ್ರಕರಣಗಳನ್ನು ತೀರುವಳಿ ಮಾಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ನ್ಯಾಯಮೂರ್ತಿ ರಾಜೇಂದರ್ ಸಚಾರ್‌ರವರ ಆಯೋಗ ಮಾಡಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಗಿದೆಯೇ; (ಪೂರ್ಣ ಮಾಹಿತಿ ನೀಡುವುದು)

(ಊ) ಕೇಂದ್ರ ಸರ್ಕಾರ ವಕ್ಫ್ ಕಾಯಿದೆಗೆ ಪ್ರಸ್ತಾಪಿಸಿರುವ ತಿದ್ದುಪಡಿಯಿಂದ ರಾಜ್ಯದಲ್ಲಿನ ವಕ್ಫ್ ಆಸ್ತಿಗಳ ಮೇಲೆ ಬೀರುವ ಪರಿಣಾಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು)

## ನೈಸ್ ಯೋಜನೆಯ ವ್ಯಾಜ್ಯಗಳ ತೀರ್ಮಾನಗಳ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೯೯೨ (೧೦೬೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ನೈಸ್ ಯೋಜನೆ ಬಗ್ಗೆ ಇರುವ ವ್ಯಾಜ್ಯಗಳ ಕುರಿತು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದೆಯೇ; ಹಾಗಿದ್ದಲ್ಲಿ, ಈ ಉಪ ಸಮಿತಿಯ ಸದಸ್ಯರನ್ನು ಮತ್ತು ಇದರ ಕಾರ್ಯವ್ಯಾಪ್ತಿ ಏನು; (ಪೂರ್ಣ ಮಾಹಿತಿ ನೀಡುವುದು)

(ಆ) ಈ ಉಪ ಸಮಿತಿಯು ಇದುವರೆಗೆ ಎಷ್ಟು ಸಭೆಗಳನ್ನು ನಡೆಸಿದೆ; ಮತ್ತು ಈ ಉಪ ಸಮಿತಿ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನಗಳಾವುವು; (ಉಪ ಸಮಿತಿಯ ತೀರ್ಮಾನಗಳು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರ ಸಚಿವ ಸಂಪುಟದ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯ ಸರ್ಕಾರ ಇತ್ತೀಚೆಗೆ ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಭೂಸ್ವಾಧೀನಪಡಿಸಿಕೊಳ್ಳಲು ಹೊರಡಿಸಿದ್ದ ನೋಟಿಫಿಕೇಷನ್ ಹಿಂತೆಗೆದುಕೊಳ್ಳಲು ನಿರ್ಧರಿಸಿರುವುದೇ; ಹಾಗಿದ್ದಲ್ಲಿ, ಈ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ವಿಸ್ತೀರ್ಣ, ಭೂಸ್ವಾಧೀನಕೊಳ್ಳಲು

ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭ ಮಾಡಿರುವ ವಿಸ್ತೀರ್ಣ, ಈಗಾಗಲೇ ಸ್ವಾಧೀನಪಡಿಸಿಕೊಂಡ ಯೋಜನೆ ಪ್ರವರ್ತಕರಿಗೆ ಹಸ್ತಾಂತರಸಿರುವ ವಿಸ್ತೀರ್ಣ, ಸರ್ಕಾರದ ವಶದಲ್ಲಿರುವ ವಿಸ್ತೀರ್ಣ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಲು ಉದ್ದೇಶಿಸಿರುವ ವಿಸ್ತೀರ್ಣ ಎಷ್ಟು? (ಗ್ರಾಮವಾರು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ Automated Testing Station ಗಳ ಸ್ಥಾಪನೆ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೯೬೩ (೧೦೭೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ಸಾರಿಗೆ ಇಲಾಖೆಗೆ ನೂತನವಾಗಿ ವಾಹನಗಳ ತಪಾಸಣೆಗಾಗಿ **Automated Testing Station** ಗಳನ್ನು ಸ್ಥಾಪಿಸಲು ಮುಂದಾಗಿದೆಯೇ; ಹಾಗಿದ್ದಲ್ಲಿ, ಇಂತಹ ತಪಾಸಣಾ ಕೇಂದ್ರಗಳ ಸ್ಥಾಪನೆಯಿಂದ ನಾಗರೀಕರಿಗೆ/ಗ್ರಾಹಕರಿಗೆ ದೊರೆಯುವ ಸೌಲಭ್ಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಆ) ಈ ತಪಾಸಣಾ ಕೇಂದ್ರಗಳ ನಿರ್ವಹಣೆ ಮತ್ತು ಉಸ್ತುವಾರಿ ಹಾಗೂ ನಿಗಾವಹಿಸಲು ರೂಪಿಸಿರುವ ವ್ಯವಸ್ಥೆ ಯಾವುದು; (ಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಈ ತಪಾಸಣಾ ಕೇಂದ್ರಗಳನ್ನು 'ನಿರ್ಮಿಸು-ಹೊಂದು-ನಿರ್ವಹಿಸುವ' ಎನ್ನುವ ಆಧಾರದ ಮೇಲೆ ಖಾಸಗಿ ಭಾಗಿತ್ವಕ್ಕೆ ನೀಡಲು ಉದ್ದೇಶಿಸಿದೆಯೇ? (ಪೂರ್ಣ ಮಾಹಿತಿ ನೀಡುವುದು)

## ರಾಜ್ಯದ ಕಡಲ ತೀರಗಳ ಸಂರಕ್ಷಣೆಗಾಗಿ ಕೈಗೊಂಡಿರುವ ಕ್ರಮಗಳ ಬಗ್ಗೆ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-

೯೯೪ (೧೦೭೧) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಕಡಲು ತೀರಗಳು ಕಳೆದ ೩ ದಶಕಗಳಲ್ಲಿ ಸಮುದ್ರ ಕೊರತಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಅವಧಿಯಲ್ಲಿ ಸಮುದ್ರ ಕೊರೆತಕ್ಕೆ ಒಳಗಾದ ಕಡಲತೀರಗಳು ಯಾವುವು; ಮತ್ತು ಅವುಗಳ ಉದ್ದ-ಅಗಲವೆಷ್ಟು; (ಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಕಡಲ ತೀರಗಳ ಸಂರಕ್ಷಣೆ ಬಗ್ಗೆ ಯಾವುದಾದರೂ ಅಧ್ಯಾಯನ ಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಈ ಅಧ್ಯಾಯನದಿಂದ ಹೊರಬಂದಿರುವ ಅಂಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಇ) ಕಡಲ ತೀರಗಳನ್ನು ಸಂರಕ್ಷಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೈಗೊಂಡಿರುವ ಯೋಜನೆಗಳು ಯಾವುವು; ಮತ್ತು ಕಳೆದ ೫ ವರ್ಷಗಳಲ್ಲಿ ಈ ಯೋಜನೆಗಳಲ್ಲಿ ಕೈಗೊಂಡಿರುವ ಸಂರಕ್ಷಣೆ ಅಭಿವೃದ್ಧಿ ಕಾಮಗಾರಿಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು)

# ರಾಜ್ಯದಲ್ಲಿ ಅಮೃತ ಸ್ವಾಭಿಮಾನ ಕುರಿಗಾಹಿ ಯೋಜನೆಯ ಸೌಲಭ್ಯಗಳ ಕುರಿತು

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೯೫೫ (೧೦೭೨) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ಕೇಂದ್ರ ಪುರಸ್ಕೃತ ಅಮೃತ ಸ್ವಾಭಿಮಾನ ಕುರಿಗಾಹಿ ಯೋಜನೆ ಮತ್ತು ಕುರಿ-ಮೇಕೆ ಸಾಕಾಣಿಕೆ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಈ ಯೋಜನೆಗಳ ರೂಪ-ರೇಷೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬದವರಿಗೆ ಈ ಮೇಲಿನ ಯೋಜನೆಗಳ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುವ ಸೌಲಭ್ಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಅಮೃತ ಸ್ವಾಭಿಮಾನ ಕುರಿಗಾಹಿ ಯೋಜನೆ ಮತ್ತು ಕುರಿ-ಮೇಕೆ ಸಾಕಾಣಿಕೆ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗಿರುವ ವ್ಯವಸ್ಥೆ ಯಾವುದು; (ಪೂರ್ಣ ಮಾಹಿತಿ ನೀಡುವುದು)

(ಈ) ಮೇಲಿನ ಯೋಜನೆಗಳನ್ನು ಯಾವ ಯಾವ ಬ್ಯಾಂಕ್ ಮುಖೇನ ಅನುಷ್ಠಾಗೊಳಿಸಲಾಗುತ್ತಿದೆ; ಮತ್ತು ಕಳೆದ ೫ ವರ್ಷಗಳಲ್ಲಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ಅರ್ಜಿಗಳಿಗೆ ಮಂಜೂರಾತಿ ದೊರೆತಿದೆ ಹಾಗೂ ನೀಡಿರುವ ಸಾಲ-ಸಹಾಯಧನ ಸೌಲಭ್ಯಗಳು ಎಷ್ಟು; (ಪೂರ್ಣ ಮಾಹಿತಿ ನೀಡುವುದು)

(ಉ) ಸದರಿ ಯೋಜನೆಗಳ ಅನುಷ್ಠಾನಕ್ಕೆ ರೂಪಿಸಿರುವ ರಾಜ್ಯ ಮಟ್ಟದ ಸಮಿತಿ ಕಾರ್ಯವೈಖರಿಗಳು ಯಾವುವು; ಮತ್ತು ಈ ಸಮಿತಿ

ಇದುವರೆಗೂ ಎಷ್ಟು ಸಭೆಗಳನ್ನು ನಡೆಸಿದೆ; ಹಾಗೂ ಈ ಸಮಿತಿ ಮುಂದೆ ಎಷ್ಟು ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ? (ಪೂರ್ಣ ಮಾಹಿತಿ ನೀಡುವುದು)

## ಕೃಷಿ ಯೋಗ್ಯ ಜಮೀನುಗಳ ಪರಿವರ್ತನೆ ತಡೆಗಟ್ಟಲು ಕ್ರಮ ಕೈಗೊಳ್ಳುವ ಕುರಿತು

**ಡಾ. ಯತೀಂದ್ರ. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೯೯೬ (೧೧೧೩) ಮಾನ್ಯ ಕಂದಾಯ ಸಚಿವರು ಈ ಫಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೧೦ ವರ್ಷಗಳಲ್ಲಿ ಎಷ್ಟು ಎಕರೆ ಕೃಷಿ ಯೋಗ್ಯ ಜಮೀನುಗಳನ್ನು ಪರಿವರ್ತನೆಗೊಳಿಸಲಾಗಿದೆ; (ಜಿಲ್ಲಾವಾರು ಮತ್ತು ವರ್ಷಾವಾರು ವಿವರ ನೀಡುವುದು)

(ಆ) ಅತಿಯಾದ ನಗರೀಕರಣದಿಂದ ಕೃಷಿಗೆ ಯೋಗ್ಯಯುಳ್ಳ ಜಮೀನುಗಳು ಇತರೆ ಕಾರ್ಯಗಳಿಗೆ ಪರಿವರ್ತನೆಯಾಗುತ್ತಿದ್ದು, ಇದರಿಂದ ಆಹಾರ ಉತ್ಪಾದನೆ ಕುಂಠಿತಗೊಳ್ಳುತ್ತಿರುವುದರಿಂದ ಇದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಿ (ರೇರಾ) ಕುರಿತು

**ಡಾ. ಯತೀಂದ್ರ. ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೯೯೭ (೧೧೧೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಸ್ತುತ ರಾಜ್ಯದಲ್ಲಿ ಅಭಿವೃದ್ಧಿ ಪಡಿಸುತ್ತಿರುವ ಎಲ್ಲಾ ರಿಯಲ್ ಎಸ್ಟೇಟ್ ಪ್ರಾಜೆಕ್ಟ್‌ಗಳು ರೇರಾ ಅಡಿ ನೋಂದಣಿಯಾಗಿವೆಯೇ; ಇಲ್ಲವಾದಲ್ಲಿ ಇನ್ನು ಎಷ್ಟು ಪ್ರಾಜೆಕ್ಟ್‌ಗಳು ನೋಂದಣಿಯಾಗಲು ಬಾಕಿ ಇವೆ; (ಈ ಕುರಿತು ರಿಯಲ್ ಎಸ್ಟೇಟ್ ಡೆವಲಪರ್/ ಬಿಲ್ಡರ್‌ಗಳ ಮೇಲೆ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)

(ಆ) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ) ಅಡಿ ಎಷ್ಟು ದೂರುಗಳು ದಾಖಲಾಗಿವೆ; ಅವುಗಳಲ್ಲಿ ಎಷ್ಟು ದೂರುಗಳನ್ನು ವಿಲೇ ಮಾಡಲಾಗಿದೆ? (ವಿವರ ಒದಗಿಸುವದು)

## ದೇವಸ್ಥಾನಗಳಲ್ಲಿನ ಮೂಲಭೂತ ಸೌಕರ್ಯಗಳ ಕುರಿತು

**ಡಾ. ಯತೀಂದ್ರ, ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೯೯೮ (೧೧೧೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿಗಳಾದ ಶಕ್ತಿ ಯೋಜನೆ ಮತ್ತು ಗೃಹಲಕ್ಷ್ಮಿ ಯೋಜನೆಗಳಿಂದ ದೇವಸ್ಥಾನಗಳಿಗೆ ಬರುವ ಭಕ್ತಾದಿಗಳು ಹೆಚ್ಚಾಗಿದ್ದು, ಮೂಲಭೂತ ಸೌಕರ್ಯಗಳ ಮೇಲೆ ಸಾಕಷ್ಟು ಒತ್ತಡ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)

(ಆ) ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಯಾದ "ಸ್ವದೇಶ್ ದರ್ಶನ್" ಅಡಿ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ನೀಡಿರುವ ಅನುದಾನವೆಷ್ಟು? (ವರ್ಷವಾರು ವಿವರ ಒದಗಿಸುವುದು)

## ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಯೋಜನೆಗಳ ಕುರಿತು

**ಡಾ. ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೯೯೯ (೧೧೧೬) ಮಾನ್ಯ. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವಿವಿಧ ಸಾಲ ಸೌಲಭ್ಯಗಳ ಯೋಜನೆಗಳಾವುವು; ಈ ರೀತಿಯ ಸಾಲ ಸೌಲಭ್ಯಗಳ ಯೋಜನೆಗಳಿಂದ ಯಾವ ಬಗೆಯ ಫಲಾನುಭವಿಗಳಿಗೆ ಅನುಕೂಲವಾಗುತ್ತಿದೆ; (ವಿವರ ನೀಡುವುದು)

(ಆ) ವಿವಿಧ ಸಾಲ ಯೋಜನೆಗಳ ಕೆಲವು ಷರತ್ತುಗಳು ಕ್ಲಿಷ್ಟಕರ ಮತ್ತು ಅಸಮಂಜಸವಾಗಿದ್ದು, ಇವುಗಳಿಂದ ಫಲಾನುಭವಿಗಳಿಗೆ ಸಾಲ ಯೋಜನೆಗಳ ಪ್ರಯೋಜನ ಪಡೆಯಲು ಕಷ್ಟಸಾಧ್ಯವಾಗುತ್ತಿರುವುದರಿಂದ ಷರತ್ತುಗಳ ಸರಳೀಕರಣದ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ನೀಡುವ ಗಂಗಾ ಕಲ್ಯಾಣ ಯೋಜನೆ ಕೆಲವೇ ಕೆಲವು ಅಲ್ಪಸಂಖ್ಯಾತರಿಗೆ ತಲುಪುತ್ತಿದ್ದು, ಸದರಿ ಯೋಜನೆ ಎಲ್ಲರಿಗೂ ದೊರಕುವಂತಾಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ವಕ್ಫ್ ಮಂಡಳಿ ಅಡಿಯಲ್ಲಿ ಬರುವ ಅಸ್ತಿಗಳ ವಿವರಗಳ ಕುರಿತು

**ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-**

೧೦೦೦ (೧೦೭೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ವಕ್ಫ್ ಮಂಡಳಿಯ ಆಸ್ತಿಗಳಾವುವು; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮುವಾರು, ಸರ್ವೆ ನಂಬರ್, ವಿಸ್ತೀರ್ಣ ಮತ್ತು ನೋಂದಾಯಿತರ ಖಾತೆ ಸಹಿತ ಮಾಹಿತಿ ಒದಗಿಸುವುದು)

(ಆ) ತಲೆತಲಾಂತರದಿಂದ ರೈತರ ಖಾತೆಯಲ್ಲಿರುವ ಮತ್ತು ಇತರರಿಂದ ಖರೀದಿ ಮಾಡಲಾದ ಭೂಮಿಯನ್ನು ಸಹಿತ ಈ ವಕ್ಫ್ ಹೆಸರಿಗೆ ಖಾತೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ೨೦೨೩ರ ನಂತರ ರಾಜ್ಯದಲ್ಲಿ ಎಷ್ಟು ಆಸ್ತಿಗಳನ್ನು ವಕ್ಫ್ ಹೆಸರಿಗೆ ಖಾತೆ ಬದಲಾವಣೆ ಮಾಡಲಾಗಿದೆ; (ತಾಲ್ಲೂಕುವಾರು, ಗ್ರಾಮುವಾರು, ಸರ್ವೆ ನಂಬರ್, ವಿಸ್ತೀರ್ಣ ಮತ್ತು ನೋಂದಾಯಿತರ ಖಾತೆ ಸಹಿತ ಮಾಹಿತಿ ಒದಗಿಸುವುದು)

(ಈ) ಈ ರೀತಿ ಖಾತೆ ಬದಲಾವಣೆಯನ್ನು ಯಾವ ಆಧಾರದ/ಪುರಾವೆ ದಾಖಲಾತಿಗಳ ಮೇಲೆ ಮಾಡಲಾಗಿದೆ? (ಪ್ರತಿಯೊಂದು ಪ್ರಕರಣದ ವಿವರ ನೀಡುವುದು)

## ಸಾರ್ವಜನಿಕ ಜಮೀನು ಮಂಜೂರಾತಿ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೦೧ (೧೦೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪುತ್ತೂರು ಕಸಬಾ ಗ್ರಾಮದಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಜಮೀನು ಕಾಯ್ದಿರಿಸಲಾಗಿದೆಯೇ; ಕಾಯ್ದಿರಿಸಿದಲ್ಲಿ, ಸರ್ವೆ ನಂಬರ್, ಜಮೀನಿನ ವಿಸ್ತೀರ್ಣ, ಮಂಜೂರಾದ ವರ್ಷದ ವಿವರ ನೀಡುವುದು;

(ಆ) ಕಾಯ್ದಿರಿಸಿದ ಜಮೀನನ್ನು ಇತರೆ ಯಾವುದೇ ಖಾಸಗಿ ಟ್ರಸ್ಟ್ ಅಥವಾ ಸಂಘ ಸಂಸ್ಥೆಗೆ ಮಂಜೂರಾತಿಗೊಳಿಸಲು ಕೋರಿ ಪ್ರಸ್ತಾವನೆ/ಇಲಾಖಾ ಅಭಿಪ್ರಾಯ ಸಲ್ಲಿಕೆಯಾಗಿದೆಯೇ; ಸಲ್ಲಿಕೆಯಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಇ) ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ ಜಮೀನನ್ನು ಖಾಸಗಿ ಟ್ರಸ್ಟ್ ಅಥವಾ ಸಂಘ ಸಂಸ್ಥೆಗೆ ಮಂಜೂರಾತಿಗೊಳಿಸಲು ನಿಯಮಾನುಸಾರ ಅವಕಾಶವಿದೆಯೇ; ಇದ್ದಲ್ಲಿ ಸದರಿ ಸಂಸ್ಥೆಗಳಿಗೆ ಇರಬೇಕಾದ ಅರ್ಹತಾ ಮಾನದಂಡಗಳೇನು? (ವಿವರ ನೀಡುವುದು)

## ರಸ್ತೆ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅನುದಾನ ಮಂಜೂರಾತಿ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೦೨ (೧೦೭೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

೨೦೨೨-೨೩, ೨೦೨೩-೨೪ ಮತ್ತು ೨೦೨೪-೨೫ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ ಕಾಯ್ದಿರಿಸಿದ ಮತ್ತು ಮಂಜೂರಾತಿಗೊಳಿಸಿದ ಅನುದಾನ ಎಷ್ಟು? (ಉಪ ವಿಭಾಗವಾರು ರಸ್ತೆಗಳ ಸಹಿತ ಮಾಹಿತಿ ನೀಡುವುದು)

## ಕಾಡೇನಹಳ್ಳಿ ಗ್ರಾಮದಲ್ಲಿ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೦೩ (೧೦೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಕಾಡೇನಹಳ್ಳಿ ಗ್ರಾಮಕ್ಕೆ ಸೇರಿರುವ ಹೂನ್ನಿಗುಡಿ ಬಾರೆಯ ಎಷ್ಟು ಎಕರೆ ಸರ್ಕಾರಿ ಜಮೀನನ್ನು ಅಳತೆ ಮಾಡಲಾಗಿದೆ; ಮಾಡದಿದ್ದಲ್ಲಿ, ಕಾರಣವೇನು; ಯಾವಾಗ ಅಳತೆ ಮಾಡಲಾಗುವುದು; (ಅಳತೆ ಮಾಡಿದ್ದಲ್ಲಿ ಸದರಿ ಪ್ರತಿಯನ್ನು ನೀಡುವುದು)

(ಆ) ಹೂನ್ನಿಗುಡಿ ಬಾರೆಯು ಸರ್ಕಾರಿ ಜಮೀನಾಗಿದ್ದು ಸದರಿ ಜಮೀನನ್ನು ಅಕ್ರಮವಾಗಿ ಅಕ್ಕ ಪಕ್ಕದವರು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಜಮೀನನ್ನು ಒತ್ತುವರಿ ಮಾಡಿರುವವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿಯನ್ನು ನೀಡುವುದು)

(ಇ) ಸದರಿ ಹೂನ್ನಿಗುಡಿ ಬಾರೆಯ ಜಮೀನನ್ನು ಸ್ಥಳೀಯರಾದ ಸ್ವಾಮಿಗೌಡ ಮತ್ತು ಪುಟ್ಟೇಗೌಡ ಇವರುಗಳು ಅಕ್ರಮವಾಗಿ ಒತ್ತುವರಿ ಮಾಡಿ ಆ ಸ್ಥಳದಲ್ಲಿ ಮನೆ ನಿರ್ಮಾಣ ಮಾಡಿರುವುದು ನಿಜವೇ, ಹಾಗಿದ್ದಲ್ಲಿ, ಸದರಿಯವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು: (ಸಂಪೂರ್ಣ ಮಾಹಿತಿ ನೀಡುವುದು)

(ಈ) ಹೂನ್ನಿಗುಡಿ ಬಾರೆಯ ಸುತ್ತಳತೆಯಲ್ಲಿ ಒಟ್ಟು ಎಷ್ಟು ಅಲದ ಮರಗಳಿವೆ; (ಸಂಪೂರ್ಣ ಮಾಹಿತಿ ನೀಡುವುದು) ಅಕ್ರಮವಾಗಿ

ಮರಗಳನ್ನು ಕಡಿದು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಹೂನ್ನಿಗುಡಿ ಬಾರೆಯನ್ನು ಸುತ್ತಳತೆ ಮಾಡಿ ಅಕ್ರಮವಾಗಿ ಒತ್ತುವರಿ ಮಾಡಿರುವವರಿಂದ ತೆರವುಗೊಳಿಸಲು ಎಷ್ಟು ಕಾಲಾವಕಾಶವನ್ನು ನೀಡಲಾಗಿರುತ್ತದೆ; ಸದರಿ ಜಮೀನಿಗೆ ರೈತರು ಒತ್ತುವರಿ ಮಾಡದ ಹಾಗೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)

## ಮುಜರಾಯಿ ಇಲಾಖೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೦೪ (೧೦೮೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮುಜರಾಯಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳ ಹುಂಡಿ ಮತ್ತು ಭಕ್ತರು ನೆರವೇರಿಸುವ ಸೇವೆಯಿಂದ ಸಂಗ್ರಹಿಸಲಾದ ಹಣವನ್ನು ಯಾವ ಯಾವ ಕಾರ್ಯಗಳಿಗೆ ಬಳಸಲಾಗುತ್ತದೆ; ಮುಜರಾಯಿ ದೇವಸ್ಥಾನಗಳಿಂದ ಕಳೆದ ೩ ವರ್ಷಗಳಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ದೇವಸ್ಥಾನಗಳನ್ನು ನಮ್ಮ ಪೂರ್ವಜರು ನಂಬಿಕೆ ಮತ್ತು ವಿಶ್ವಾಸದ ಆಧಾರದ ಮೇಲೆ ನಿರ್ಮಿಸಲಾಗಿದ್ದು, ಸರ್ಕಾರವು ಮೂಢ ನಂಬಿಕೆ ನಿಷೇಧ ಕಾಯಿದೆಯನ್ನು ಜಾರಿಗೆ ತಂದಲ್ಲಿ ಫಲ ಜ್ಯೋತಿಷ್ಯದ ಮೇಲೆ ಪರಿಣಾಮ ಬೀರುವುದರಿಂದ ದೇವಸ್ಥಾನಗಳಲ್ಲಿ ನಡೆಯುವ ಪೂಜೆ ಮತ್ತು ಸೇವೆಗಳ ಮೇಲೆ

ಪರಿಣಾಮ ಬೀರಿ ದೇವಸ್ಥಾನಗಳ ಆದಾಯ ಕಡಿಮೆಯಾಗುವ ಆತಂಕ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ರಾಜ್ಯದಿಂದ ಚಾರ್‌ಧಾಮ್, ಅಮರನಾಥ ಮತ್ತು ಮಾನಸ ಸರೋವರ ಯಾತ್ರೆಗಳನ್ನು ಕೈಗೊಳ್ಳುವ ಎಷ್ಟು ಭಕ್ತಾದಿಗಳು ಸಬ್ಸಿಡಿ ಮೊತ್ತದ ಮಂಜೂರು ಮಾಡುವಂತೆ ಕೋರಿ ಕಳೆದ ೨ ವರ್ಷಗಳಲ್ಲಿ ಮನವಿ ಸಲ್ಲಿಸಿರುತ್ತಾರೆ; ಇದರಲ್ಲಿ ಎಷ್ಟು ಯಾತ್ರಿಕರಿಗೆ ಸಬ್ಸಿಡಿ ಮಂಜೂರಾಗಿದೆ; ಸಬ್ಸಿಡಿ ಮಂಜೂರಾದ ಒಟ್ಟು ಮೊತ್ತವೆಷ್ಟು; ಎಷ್ಟು ಮನವಿಗಳು ಬಾಕಿ ಇವೆ?

## ಬೆಂಗಳೂರಿನ ಮುಖ್ಯಮಂತ್ರಿಗಳ ಬಹುಮಹಡಿ ಕಟ್ಟಡಗಳ ೧ ಮತ್ತು ೨ ಬಿಹೆಚ್‌ಕೆ ವಸತಿ ಗೃಹ ಬಗ್ಗೆ

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೦೫ (೧೦೮೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರಿನ ಮುಖ್ಯಮಂತ್ರಿಗಳ ಬಹುಮಹಡಿ ಕಟ್ಟಡಗಳ ೧ ಬಿಹೆಚ್‌ಕೆ ಮತ್ತು ೨ ಬಿಹೆಚ್‌ಕೆ ವಸತಿ ಗೃಹಗಳನ್ನು ಎಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ಎಷ್ಟು ಸಂಖ್ಯೆಗಳಲ್ಲಿ ನಿರ್ಮಿಸಲಾಗುತ್ತಿದೆ; (ವಿವರ ನೀಡುವುದು)

(ಆ) ಈ ವಸತಿ ನಿರ್ಮಾಣಕ್ಕೆ ಸರ್ಕಾರ ವಿಧಿಸಿರುವ ಮೊತ್ತವೆಷ್ಟು; ಕೇಂದ್ರ ಸರ್ಕಾರದ ಅನುದಾನ ಎಷ್ಟು; ರಾಜ್ಯ ಸರ್ಕಾರದ ಅನುದಾನ ಎಷ್ಟು;

(ಇ) ಸದರಿ ವಸತಿ ಸಮುಚ್ಛಯಗಳಲ್ಲಿ ಮನೆಗಳನ್ನು ಯಾವ ಕಾಲಮಿತಿಯೊಳಗೆ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು; ಎಷ್ಟು ಜನರಿಗೆ ಹಂಚಿಕೆ ಮಾಡಲಾಗಿದೆ; (ಕ್ಷೇತ್ರವಾರು ಮಾಹಿತಿ ನೀಡುವುದು)

(ಈ) ೧ ಮತ್ತು ೨ ಬಿಹೆಚ್‌ಕೆ ವಸತಿ ಫಲಾನುಭವಿಗಳಿಗೆ ಸರ್ಕಾರದಿಂದ ನೀಡುವ ಸಬ್ಸಿಡಿ ಎಷ್ಟು; ನಿಗಮದಿಂದಲೇ ಸಾಲದ ವ್ಯವಸ್ಥೆ ಮತ್ತು ಅವರು ಭರಿಸುವ ಮೊತ್ತವನ್ನು ಸರ್ಕಾರವೇನಾದರೂ ಮನ್ನಾ ಮಾಡುವ ಪ್ರಸ್ತಾಪವಿದೆಯೇ; (ವಿವರ ನೀಡುವುದು)

(ಉ) ೧ ಬಿಹೆಚ್‌ಕೆ ಮತ್ತು ೨ ಬಿಹೆಚ್‌ಕೆ ವಸತಿ ಸಮುಚ್ಛಯದಲ್ಲಿ ಒದಗಿಸುವ ಮೂಲಭೂತ ಸೌಕರ್ಯಗಳಾವುವು? (ವಿವರ ನೀಡುವುದು)

## ಮುಖ್ಯಮಂತ್ರಿಯವರ ೧ ಲಕ್ಷ ಬಹುಮಹಡಿ ಯೋಜನೆ ಬಗ್ಗೆ

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೦೬ (೧೦೮೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮುಖ್ಯಮಂತ್ರಿಗಳ ೧ ಲಕ್ಷ ಬಹುಮಹಡಿ ವಸತಿ ಯೋಜನೆಯ ಪ್ರಗತಿಯೇನು; ಈ ಯೋಜನೆಗೆ ಬೇಕಾದ ಜಮೀನು ಎಷ್ಟು; ಯೋಜನೆಗೆ ಅಗತ್ಯವಿರುವ ಜಮೀನು ಲಭ್ಯವಿದೆಯೇ; (ವಿವರ ಒದಗಿಸುವುದು)

(ಆ) ಈ ಯೋಜನೆಯಡಿ ಯಾವ ಗ್ರಾಮದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ; ಯೋಜನೆಯ ಕಾಮಗಾರಿ ಆರಂಭಗೊಂಡಿದ್ದು ಯಾವಾಗ; ಈವರೆಗೆ ಪೂರ್ಣಗೊಂಡಿರುವ

ಮತ್ತು ಕಾಮಗಾರಿ ಪ್ರಗತಿಯಲ್ಲಿರುವ ಮನೆಗಳೆಷ್ಟು; (ಗ್ರಾಮವಾರು/ ಬ್ಲಾಕ್‌ವಾರು ಸಂಪೂರ್ಣ ವಿವರವನ್ನು ವಿಧಾನಸಭಾ ಕ್ಷೇತ್ರವಾರು ನೀಡುವುದು)

(ಇ) ಈ ಯೋಜನೆಗೆ ಅಗತ್ಯವಿರುವ ಹಣ ಎಷ್ಟು; ಹಣವನ್ನು ಯಾವ ಮೂಲದಿಂದ ಸಂಗ್ರಹಿಸಲಾಗುವುದು; ಪ್ರತಿ ಫಲಾನುಭವಿ ಪಾವತಿಸಬೇಕಾದ ಮೊತ್ತ ಎಷ್ಟು; ಫಲಾನುಭವಿಗಳಿಗೆ ಯಾವ ಬ್ಯಾಂಕ್ ವತಿಯಿಂದ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ; ಸದರಿ ಬ್ಯಾಂಕ್ ಜೊತೆಗೆ ಮಾಡಿಕೊಂಡಿರುವ ಒಡಂಬಡಿಕೆಯ ವಿವರ ನೀಡುವುದು;

(ಈ) ಯೋಜನೆಯಡಿ ಒಟ್ಟು ಎಷ್ಟು ಜನ ಅರ್ಜಿ ಸಲ್ಲಿಸಿದ್ದಾರೆ; ಅರ್ಜಿದಾರರು ಈವರೆಗೆ ಪಾವತಿಸಿರುವ ಒಟ್ಟು ಮೊತ್ತ ಎಷ್ಟು; ಸರ್ಕಾರ ಸೂಚಿಸಿದ ಮೊತ್ತವನ್ನು ಸಂಪೂರ್ಣವಾಗಿ ಮತ್ತು ಭಾಗಶ: ಪಾವತಿಸಿರುವ ಅರ್ಜಿದಾರರ ವಿವರ ಒದಗಿಸುವುದು;

(ಉ) ಯಾವ ಗ್ರಾಮ/ಬ್ಲಾಕ್‌ನಲ್ಲಿ ಎಷ್ಟು ಅರ್ಜಿದಾರರಿಗೆ ಈವರೆಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ;ಉಳಿದ ಅರ್ಜಿದಾರರಿಗೆ ಮನೆಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು;

(ಊ) ಯೋಜನೆಗೆ ಟೆಂಡರ್ ಆಹ್ವಾನಿಸಲಾಗಿತ್ತೇ; ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರು ನಮೂದಿಸಿದ್ದ ಟೆಂಡರ್ ಮೊತ್ತವೆಷ್ಟು; ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿದೆ; ಅವರು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು; (ವಿವರ ನೀಡುವುದು)

(ಋ) ಕಾಮಗಾರಿ ಕುಂಠಿತಗೊಳ್ಳಲು ಕಾರಣಗಳೇನು; ಕಾಮಗಾರಿ ಪೂರ್ಣಗೊಳ್ಳಲು ಅಗತ್ಯವಿರುವ ಹಣ ಎಷ್ಟು; ಅಗತ್ಯ ಹಣವನ್ನು ಬಿಡುಗಡೆ ಮಾಡಿ ತ್ವರಿತಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳ್ಳಲು ಕೈಗೊಂಡಿರುವ ಕ್ರಮಗಳೇನು?

## ಪಶು ಆಸ್ಪತ್ರೆ ಕಾರ್ಯ ಆರಂಭ ಮಾಡುವ ಕುರಿತು

ಡಾ॥ ಚಂದ್ರಶೇಖರ ಬಿ. ಪಾಟೀಲ (ಪದವೀಧರರ ಕ್ಷೇತ್ರ):-

೧೦೦೭ (೧೦೨೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಹಟ್ಟಿ ಪಟ್ಟಣದಲ್ಲಿ ಹೈನುಗಾರಿಕೆ ಅಭಿವೃದ್ಧಿಯಾಗದೆ ಸುತ್ತಲಿನ ಹತ್ತಾರು ಗ್ರಾಮ ಪಂಚಾಯಿತಿ ರೈತರು ಹೈನುಗಾರಿಕೆಯ ಮಾಹಿತಿ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಪಶು ಆಸ್ಪತ್ರೆ ಕಾರ್ಯ ಯಾವಾಗ ಆರಂಭಗೊಳ್ಳುವುದು; ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳಾವುವು?

## ಪ್ರವರ್ಗ-೧ರ ಜಾತಿಗಳ ಸಮಾಜಕ್ಕೆ ಮಂಜೂರು ಮಾಡುವ ಬಗ್ಗೆ

ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-

೧೦೦೮ (೧೧೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರವರ್ಗ-೧ರ ಸಮುದಾಯಕ್ಕೆ ಇದುವರೆಗೂ ಮಂಜೂರು ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ನಿವೇಶನಗಳನ್ನು ಮಂಜೂರು ಮಾಡದೇ ಇರಲು ಕಾರಣಗಳೇನು;

(ಇ) ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ಅನುಸರಿಸುವ ಮಾನದಂಡಗಳು ಯಾವುವು?

## ಪ್ರವರ್ಗ–೧ ರ ಜಾತಿಗಳಿಗೆ ರಾಜ್ಯದಲ್ಲಿ ನೀಡಿರುವ ಜಾತಿ ಪ್ರಮಾಣ ಪತ್ರ ಹಾಗೂ ಸಿಂಧುತ್ವದ ಬಗ್ಗೆ ಮಾಹಿತಿ

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):–**

೧೦೦೯ (೧೧೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೫ ವರ್ಷಗಳಲ್ಲಿ ರಾಜ್ಯದಲ್ಲಿ ಪ್ರವರ್ಗ–೧ರ ಜಾತಿಗಳಿಗೆ ನೀಡಿರುವ ಜಾತಿ ಪ್ರಮಾಣ ಪತ್ರಗಳು ಎಷ್ಟು; ಸಿಂಧುತ್ವ ಪ್ರಮಾಣ ಪತ್ರಗಳ ಸಂಖ್ಯೆ ಎಷ್ಟು; (ಅಭ್ಯರ್ಥಿಗಳ ಹೆಸರು ಜಾತಿ ವಿಮೆಗಳನ್ನು ತಾಲ್ಲೂಕುವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಂಡ ಎಷ್ಟು ಜನ ಅಭ್ಯರ್ಥಿಗಳಿಗೆ ಜಾತಿ ಮತ್ತು ಸಿಂಧುತ್ವ ಪ್ರವಾಣ ಪತ್ರ ನೀಡಲಾಗಿದೆ? (ಜಿಲ್ಲಾವಾರು ತಾಲ್ಲೂಕುವಾರು ವಾಹಿತಿ ನೀಡುವುದು)

## ಹಿರಿಯೂರು ವಿಧಾನಸಭಾ ಕ್ಷೇತ್ರಕ್ಕೆ ಸಾರಿಗೆ ಕಾಮಗಾರಿಗೆ ಮಂಜೂರಾಗಿರುವ ಅನುದಾನದ ಬಗ್ಗೆ

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):–**

೧೦೧೦ (೧೧೩೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿರಿಯೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರಿಗೆ ಘಟಕ ಕಾಮಗಾರಿ ಮಂಜೂರಾಗಿದೆಯೇ; ಈ ಕಾಮಗಾರಿಗೆ ಮಂಜೂರಾದ ಅನುದಾನ ಎಷ್ಟು;

(ಆ) ಕಾಮಗಾರಿಗೆ ಖರ್ಚಾದ ಅನುದಾನ ಎಷ್ಟು; ಕಾಮಗಾರಿ ಯಾವ ಹಂತದಲ್ಲಿದೆ;

(ಇ) ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು; ಪೂರ್ಣಗೊಂಡಿದ್ದಲ್ಲಿ ಸರ್ಕಾರದಿಂದ ಲೋಕಾರ್ಪಣೆಯಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು?

## ರಾಜ್ಯದಲ್ಲಿರುವ ವಸತಿ ಇಲಾಖೆಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-**

೧೦೧೧ (೧೧೪೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಇರುವ ವಸತಿ ರಹಿತ ಫಲಾನುಭವಿಗಳಿಗೆ ಇರುವ ವಸತಿ ಯೋಜನೆಗಳು ಯಾವುವು; (ಮಾಹಿತಿ ನೀಡುವುದು) ಈ ಯೋಜನೆಗಳಲ್ಲಿ ೨೦೨೪-೨೫ನೇ ಸಾಲಿಗೆ ನಿಗದಿಪಡಿಸಿರುವ ಮನೆಗಳ ಸಂಖ್ಯೆ ಎಷ್ಟು;

(ಆ) ಈ ಪೈಕಿ ಪ್ರವರ್ಗ-೧ರ ಅಡಿಯಲ್ಲಿ ಬರುವ ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಯವರಿಗೆ ನಿಗದಿಪಡಿಸಿರುವ ಮನೆಗಳು ಎಷ್ಟು; ಮಂಜೂರು ಮಾಡಿರುವ ಮನೆಗಳು ಎಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಇ) ಹಿಂದುಳಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಗಳಿಗೆ ನಿಗದಿಪಡಿಸಿರುವ ಮನೆಗಳು ಎಷ್ಟು; ಮಂಜೂರಾದ ಮನೆಗಳು ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಈ) ವಸತಿ ಯೋಜನೆಯಡಿ ಹಾಲಿ ಇರುವ ಸಹಾಯಧನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಎಷ್ಟು ಮೊತ್ತವನ್ನು ನಿಗದಿಪಡಿಸಲಾಗುವುದು ಇಲ್ಲದಿದ್ದಲ್ಲಿ ಈ ಮೊತ್ತವನ್ನು ಹೆಚ್ಚಿಸಲು ಸರ್ಕಾರಕ್ಕೆ ಇರುವ ಅಡಚಣೆಗಳೇನು;

(ಉ) ಹಿರಿಯೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಯುವರಿಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ, ಹಾಗೂ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ? (ವಿವರ ಒದಗಿಸುವುದು)

## ಗೋಮಾಳ ಒತ್ತುವರಿ ಬಗ್ಗೆ

**ಶ್ರೀ ಅಡಗೂರು ಹೆಚ್. ವಿಶ್ವನಾಥ (ನಾಮನಿರ್ದೇಶನ ಹೊಂದಿದವರು):-**

೧೦೧೨ (೧೦೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಸಬಾ ಹೋಬಳಿ, ಬೀರೇಶ್ವರಪುರ ಗ್ರಾಮದ ವ್ಯಾಪ್ತಿಗೆ ಸೇರಿದ ಸರ್ವೆ ನಂ.೯೬ರಲ್ಲಿನ ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡಿರುವವರನ್ನು ತೆರವುಗೊಳಿಸಿ ಸದರಿ ಗೋಮಾಳವನ್ನು ಶಾಶ್ವತವಾಗಿ ಮೀಸಲಿಡಲು ಸರ್ಕಾರದಿಂದ ಕ್ರಮವಹಿಸಲಾಗಿದೆಯೇ;

(ಆ) ಕಳೆದ ಅಧಿವೇಶನಗಳಲ್ಲಿ ತೆರವುಗೊಳಿಸಲಾಗುವುದೆಂದು ಸರ್ಕಾರವು ಭರವಸೆ ನೀಡಿದ್ದು, ಈ ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡುವವರಿಂದ ಇದುವರೆವಿಗೂ ತೆರವುಗೊಳಿಸದಿರಲು ಕಾರಣಗಳೇನು?

(ಇ) ಈ ಗೋಮಾಳವು ನಾಗಮಂಗಲ ಪುರಸಭೆ ವ್ಯಾಪ್ತಿಯಿಂದ ೪ ಕಿಲೋ ಮೀಟರ್ ಒಳಗೆ ಇರುವುದರಿಂದ The Karnataka Land Revenue (REGULATISATION OF UN-AUTHORISED OCCUPATION LANDS) RULES 1970 (2)IV ರನ್ವಯ ಕೂಡಲೇ ಅಕ್ರಮವಾಗಿ ಸಾಗುವಳಿ ಮಾಡಿರುವ/ಆಕ್ರಮಿಸಿಕೊಂಡಿರುವುದರಿಂದ ತೆರವುಗೊಳಿಸಲು ಯಾವ ಕಾಲಮಿತಿಯಲ್ಲಿ ಸರ್ಕಾರ ಕ್ರಮವಹಿಸುವುದು;

(ಈ) ಗೋಮಾಳವನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರಿಂದ ತೆರವುಗೊಳಿಸದೇ ಯಾವುದೇ ಕ್ರಮಕೈಗೊಳ್ಳದೇ ನಿಷ್ಕ್ರಿಯರಾಗಿರುವ ಜಿಲ್ಲಾಧಿಕಾರಿಗಳು, ತಹಸೀಲ್ದಾರ್, ನಾಗಮಂಗಲ ಕಂದಾಯಾಧಿಕಾರಿ/ಕಂದಾಯ ನಿರೀಕ್ಷಕ ಹಾಗೂ ಗ್ರಾಮ ಆಡಳಿತಾಧಿಕಾರಿಗಳ ವಿರುದ್ಧ ಯಾವ ಕ್ರಮಕೈಗೊಳ್ಳಲಾಗುವುದು?

## ರಾಜ್ಯದ ದೇವಸ್ಥಾನಗಳ ಅಭಿವೃದ್ಧಿ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ):-**

೧೦೧೩ (೧೦೫೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳ ಸಂಖ್ಯೆ ಎಷ್ಟು; ಅವುಗಳು ಯಾವುವು;

(ಆ) ೨೦೨೩-೨೪ನೇ ಸಾಲಿನಲ್ಲಿ ಈ ದೇವಸ್ಥಾನಗಳನ್ನು ಉತ್ತಮ ದರ್ಜೆಯ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು)

(ಇ) ಈ ದೇವಸ್ಥಾನಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಯಾವ ಕ್ರಮವನ್ನು ಕೈಗೊಂಡಿದೆ?

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಕಾ.ಸೂ–91–ಸ.ವಿ.ಮು.ಧಾರವಾಡ–400–ಪುಸ್ತಕಗಳು–ಡಿಸೆಂಬರ್–2024